ಅಪರಂಜಿ

ತಿಳಿನಗೆಯ ಕಾರಂಜಿ



ನವೆಂಬರ್ - 2009






ಬೋನಸ್ ವಿಷ್ಯ ಹಾಗಿರ್ಲಿ, ಕಂಪ್ನಿ ನಡೀಬೇಕಾದ್ರೆ
ನೌಕರರನ್ನೇ ಕಂಪ್ನೀಗೆ ಸಂಬ್ಳ ಕೊಡೋಕೆ ಹೇಳಿ

ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 27
ಸಂಚಿಕೆ - 2
ನವೆಂಬರ್ - 2009

ಈ ಸಂಚಿಕೆಯಲ್ಲಿ.....

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



○ ಪ್ರಕಾಶ್

ಕಳಪೆ ನಶ್ಯ ಮಾರಾಟ; ನಾಲ್ಕು ಜನರ ಬಂಧನ – ಸುದ್ದಿ

• ಆರೋಗ್ಯದ ದೃಷ್ಟಿಯಲ್ಲಿ ಅವರು ಮಾಡಿದ್ದು ಒಳ್ಳೆಯದೇ ಅಲ್ಲವೆ ??

★★★

ನಕಲಿ ವೈದ್ಯರ ಬಂಧನ – ಪತ್ರಿಕೆ

• ಅವರ ಚಿಕಿತ್ಸೆಯಿಂದ ಗುಣಮುಖರಾದವರ ಗತಿ ?!!

★★★

ಕುಳಿತ ಭಂಗಿಯಿಂದ ನಿಮ್ಮ ಕಾಲ್ಬೆರಳು ಮುಟ್ಟಬಲ್ಲಿರಾ? – ಆರೋಗ್ಯ ತಜ್ಞರು

• ಟೇಬಲ್ ಅಡ್ಡ ಬರುತ್ತಲ್ಲ !!

★★★

ಬೇಂದ್ರೆ ಸ್ಮೃತಿ ಲೇಖನ ಸ್ಪರ್ಧೆಗೆ ಅರ್ಜಿ ಆಹ್ವಾನ; 3500 ರೂ. ಬಹುಮಾನ – ಪತ್ರಿಕೆ

• ನಾನು ಬಡವಿ, ಆತ ಬಡವ !!

★★★

ಯಥಾಸ್ಥಿತಿ ಇರುವ ತನಕ ಪ್ರಗತಿ ಸಾಧ್ಯವಿಲ್ಲ – ಶ್ರೀ ಮೊಯಿಲಿ

• ನಮಗೆ ಇದು ಕಾಲೇಜು ವ್ಯಾಸಂಗ ಮಾಡುವಾಗಲೇ ಅರ್ಥವಾಗಿತ್ತು !!

★★★

ಲೋಕಾಯುಕ್ತರು ಶೇಖರಿಸಿದ 'ಅಕ್ರಮ' ಹಣವನ್ನೆಲ್ಲ ಉತ್ತರ ಕರ್ನಾಟಕಕ್ಕೇಕೆ ದಾನ ಮಾಡಬಾರದು?!

★★★

ನ್ಯಾಯದಾನ ವಿಳಂಬಕ್ಕೆ ಸರ್ಕಾರವೇ ಕಾರಣ – ಆರೋಪ

• ಬೇಲಿಯೇ..... !!

★★★

ಭಾರತ ಅಮೆರಿಕದ ಆಪ್ತಮಿತ್ರ – ಶ್ವೇತ ಭವನದ ವಕ್ತಾರರು

• ಇದನ್ನು ನಮ್ಮ 'ನೆರೆ-ಹೊರೆ' ದೇಶಗಳಿಗೆ ಮನದಟ್ಟು ಮಾಡಿದರೆ ಒಳಿತು !!

★★★



ನನ್ನ ದೃಷ್ಟಿಯಲ್ಲಿ ಉತ್ತಮ ಹಾಸ್ಯ ಸಾಹಿತ್ಯ

- ಕೃಷ್ಣ ಸುಬ್ಬರಾವ್

ಹಾಸ್ಯ ಗುರಿಯಲ್ಲ ಅದೊಂದು ಮಾರ್ಗ ಅಂತ ಅನೇಕರು ಹೇಳುತ್ತಾರೆ. ನನಗನಿಸುತ್ತದೆ ಹಾಸ್ಯ ಒಂದು ಶೈಲಿ ಅಂತ. ಸಾಹಿತ್ಯದಲ್ಲಿ ಹಾಸ್ಯ ಎನ್ನುವುದು ಸಂಗೀತದಲ್ಲಿ ರಾಗವಿದ್ದ ಹಾಗೆ. ಅದರ ಮೂಲಕ ಏನೆಲ್ಲ ಹೇಳಬಹುದೊ ಅವನ್ನೆಲ್ಲಾ ಅಚ್ಚುಕಟ್ಟಾಗಿ ಮನಮುಟ್ಟುವಂತೆ ಹೇಳಬಹುದು. ಇದನ್ನೇ ಕೈಲಾಸಂ, ಕಸ್ತೂರಿ, ರಾಶಿ, ಬೀchi ಅಂತಹವರು ಮಾಡಿದರು. ವೃತ್ತಿಯಲ್ಲಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ಶ್ರೀ ಎಂ.ಪಿ. ಮನೋಹರ ಚಂದ್ರನ್ ದಾವಣಗೆರೆಯ ಆಡುಭಾಷೆಯ ಸೊಗಡು, ಗ್ರಾಮೀಣ್ಯಾ ವಿದ್ಯಾರ್ಥಿಗಳ ಭಾಷೆ ಅವರ ಲೇಖನದ ವಿಶೇಷಗಳು ಸಹಜ ನಿರೂಪಣೆಯಲ್ಲೇ ನಿತ್ಯಸತ್ಯಗಳನ್ನು ವರ್ಣಿಸುವ ಅವರ ಕೈಂಕರ್ಯ ಅತ್ಯಂತ ಜನಪ್ರಿಯವಾಯಿತು.

ನೂರಾರು ಲೇಖನದಲ್ಲಿ ಶಾರ್ಟ್‌ಲಿಸ್ಟ್ ಮಾಡಿ ಒಂದು ಲೇಖನವನ್ನು ಆಯ್ಕೆ ಮಾಡುವುದು ಅತ್ಯಂತ ಕಷ್ಟವಾದ ಕೆಲಸವಾಯಿತು. ಆದರೂ 'ಬದುಕು ಮತ್ತು ಪಾರಿವಾಳಗಳು' ಎಂಬ ಲೇಖನ ನನ್ನನ್ನು ಸೆಳೆಯಿತು. ಪಾರಿವಾಳಗಳನ್ನು ಬಹಳ ಕಾಲದಿಂದ ನಾವು ಶಾಂತಿಯ ಸಂಕೇತವೆಂದು ನಂಬಿದ್ದೇವೆ. ಅದೇ ಪಾರಿವಾಳಗಳು ಸಂಸಾರದಲ್ಲಿ ನೆಮ್ಮದಿ ಕೆಡಿಸುವ ಅಶಾಂತಿ ಹುಟ್ಟಿಸುತ್ತದೆ. ಅವುಗಳ ಉಪಟಳದಿಂದ ಮುಕ್ತಿ ಹೊಂದಲು ಯೋಜನೆಯೊಂದು ತಯಾರಾಗುತ್ತೆ. ಅದು ಫಲಪ್ರದವೂ ಆಗುತ್ತೆ ಆದರೆ ಕಡೆಗೆ ಅನಿರೀಕ್ಷಿತ ತಿರುವು ಕೊಡುತ್ತಾರೆ. ಇಲ್ಲಿ ಲೇಖಕರು ಹಾಸ್ಯದ ಮೂಲಕವೇ ಓದುಗರನ್ನು ಚಿಂತನೆಗೆ ಒಡ್ಡುತ್ತಾರೆ.

ಸೀರಿಯಸ್ ಲೇಖಕರು ಅನುಸರಿಸಬೇಕಾದ ಮಾರ್ಗದಲ್ಲಿರುವ ತೂತುಗಳನ್ನು ನಾನು ಬಲ್ಲೆ. ಪ್ರಪಂಚದಲ್ಲಿ ಬೇಕಾದಷ್ಟು ತೂತುಗಳಿವೆ, ನನಗೂ ಇವೆ. ಆದ್ದರಿಂದಲೇ ನಾನು ಮತ್ತು ಪ್ರಪಂಚ ಸಹಬಾಳ್ವೆ ನಡೆಸುತ್ತಿರುವುದಕ್ಕೆ ಮುಖ್ಯ ಕಾರಣ ಎನ್ನುವ ಲೇಖಕರು ವಿಭಿನ್ನವಾಗುವುದೇ ಆ ಕಾರಣಕ್ಕೆ. 'ಪಾರಿವಾಳಗಳು' ಹಾರುತ್ತಿವೆ ನೋಡಿ ಆನಂದಿಸಿ...

ಬದುಕು ಮತ್ತು ಪಾರಿವಾಳಗಳು

- ಎಂ.ಪಿ. ಮನೋಹರಚಂದ್ರನ್

"ಓಡಿಸಿಬಿಡ್ತೀನಿ ಅವನ್ನ. ನೀನು ಏನೇ ಹೇಳು. ಒಂದ್ಸಾರಿ ಮನೆ ಒಳ್ಗೆ ಹೊಕ್ಕರೆ ಆಮೇಲೆ ಅವನ್ನ ಹೊರ್ಗೆ ಕಳ್ಸೋದು ಕಷ್ಟ ನಂಗೆ ಪ್ರಾಣಿ ಪಕ್ಷಿಗಳು ಅಂದ್ರೆ ಆಗೊಲ್ಲ. ಬಲು ಕೊಳಕು ಮಾಡುತ್ವೆ" ಎಂದೆ ನಾನು.

"ನೀವು ಸುಮ್ನಿರಿ ಸಾಕು. ನಿಮ್ಗೆ ಏನ್ರೀ ಮಾಡುತ್ವೆ ಅವು? ಎಷ್ಟು ಮುದ್ದಾಗಿವೆ!" ಎಂದಳು ನನ್ನಾಕೆ.

ಮನೆಯೊಳಗೆ ಎರಡು ಬೂದುಬಣ್ಣದ ಪಾರಿವಾಳಗಳು ಹಾರಾಡುತ್ತಿದ್ದವು. ಮಂಗಳೂರು ಹಂಚಿನ ಮನೆ, ತೊಲೆಯ ಮೇಲೆ ಕುಳಿತು ಅವು ಸುತ್ತಾ ಮುತ್ತಾ ಗೋಣು ಅಲ್ಲಾಡಿಸಿ ನೋಡುತ್ತಿದ್ದವು. ಕೂ ಕೂ ಎಂದು ಮಾತಾಡಿಕೊಳ್ಳುತ್ತಿದ್ದವು. ನನ್ನವಳು ಮುಂಚಿನಿಂದಲೂ ಕೊಂಚ ಭಾವಜೀವಿ. ಅವಳ ಕಾಲುಗಳು ನೆಲದ ಮೇಲೆ ಇರುವುದೇ ಇಲ್ಲ. ನನ್ನ ಕಾಲುಗಳು ನೆಲ ಬಿಟ್ಟು ಮೇಲೇಳುವುದಿಲ್ಲ. ಇವಳು ನನ್ನ ಭುಜ ಅಲ್ಲಾಡಿಸಿ ಹೇಳಿದಳು. ಅವಳ ಸಣ್ಣ ಧ್ವನಿಯಿಂದಲೇ ಅವಳು ನೆಲವನ್ನು ಬಿಟ್ಟು ಭಾವನಾ ಪ್ರಪಂಚದಲ್ಲಿ ತೇಲಾಡುತ್ತಿರುವುದನ್ನು ಅರಿತೆ.

"ನೋಡೀಂದ್ರೆ, ಮದ್ವೆ ಮಾಡ್ಕೊಂಡ್ ಬಂದಿರೋ ಹೊಸ ಜೋಡಿ ಅಂತ ಕಾಣುತ್ತೆ. ತಮ್ಮ ಹೊಸ ಸಂಸಾರನ ನಮ್ಮ ಮನೇಲೇ ಶುರು ಮಾಡ್ಬೇಕೊಂತಿವೆ."

ಒಂದು ಪಾರಿವಾಳ ಮತ್ತೊಂದರ ಹತ್ತಿರ ಸರಿದು ಕೂ ಕೂ ಎನ್ನುತ್ತಾ ಅತ್ತಿತ್ತ ನೋಡುತ್ತಿತ್ತು.

"ನೋಡಿ, ನೋಡಿ! ಈ ಮನೆ ಎಷ್ಟು ಚೆನ್ನಾಗಿದೆ. ಎಲ್ಲ ರೀತಿ ಅನುಕೂಲವಾಗಿದೆ. ಈ ಮನೇಲಿ ಇರೋರು ಒಳ್ಳೆಯವರು ಅಂತಿದೆ. ಏನೂ ತೊಂದ್ರೆ ಇಲ್ಲ. ಸುಖವಾಗಿರಬಹುದು ಅಂತಿದೆ. ನೋಡ್ತಾ ಇರಿ. ಅವು ಇಲ್ಲೇ ಮನೆ ಮಾಡುತ್ವೆ" ಎಂದಳು.

ನನ್ನ ಎದೆ ಧಸಕ್ಕೆಂದಿತು. "ಓಡಿಸ್ಬಿಡ್ತೀನಿ ಮಹರಾಯ್ತಿ ಕಸ ಕಡ್ಡಿ ಹರಡುತ್ವೆ, ನೆಲವೆಲ್ಲ ಹಾಳಾಗುತ್ತೆ" ಎಂದು ಏಳಹೋದೆ. ನನ್ನಾಕೆ ಬಲವಂತವಾಗಿ ಕೂಡಿಸಿದಳು. "ಹಾಗೇನಾದ್ರು ಮಾಡಿದ್ರೆ ನನ್ನಾಣೆ! ನೀವೇನೂ ಯೋಚ್ನೆ ಮಾಡ್ಬೇಡ್ರಿ. ಅವು ಏನು ಕೊಳಕು ಮಾಡಿದ್ರು ನಾನು ತೆಗೀತೀನಿ. ಅದೂ ಅಲ್ದೆ ಮಕ್ಕಳು ಸ್ಕೂಲಿನಿಂದ ಬರ್ಲಿ ತಾಳಿ, ಎಷ್ಟು ಖುಷಿ ಪಡುತ್ವೆ ಗೊತ್ತಾ?" ಎಂದಳು.

ಎರಡು ಪಾರಿವಾಳಗಳೂ ರೆಕ್ಕೆ ಬಿಡಿಸಿ ಮೇಲೆ ಹಾರಾಡಿದವು. ಆ ಮೂಲೆ ಈ ಮೂಲೆ ಹೀಗೆ ಎಲ್ಲ ಕಡೆ ಕುಳಿತು ಗದ್ದಲ ಮಾಡಿದವು.

"ಯಾವ ಜಾಗದಲ್ಲಿ ಮನೆ ಮಾಡೋದು ಅಂತ ವಾದ ಮಾಡ್ತಿವೇರಿ. ರೀ, ಮದ್ವೆ ಆದ ಹೊಸದ್ರಲ್ಲಿ ನಾನೂ ನೀವು ಸೇರಿ ಎಷ್ಟೊಂದು ಮನೆಗಳ್ನ ನೋಡಿದ್ವಿ ಅಲ್ವಾ?" ಎಂದಳು

ಇವಳು. ಸರಿ ಹೋಯಿತು. ಇವಳು ಖಂಡಿತ ನೆಲ ಮುಟ್ಟುವುದಿಲ್ಲ. ಯಾರನ್ನೇ ಮದುವೆಯಾದರೂ ಸರಿಯೇ ಭಾವಜೀವಿ ಹೆಣ್ಣುಗಳನ್ನು ಮಾತ್ರ ಕಟ್ಟಿಕೊಳ್ಳಬಾರದು. ಇವಳನ್ನು ನೋಡಲು ಹೋದಾಗ ಕವನಗಳನ್ನು ಬರೆಯುತ್ತಾಳೆ ಎಂದು ತಿಳಿದು ಬಂದಿತ್ತು. ಆಗಲೇ ಹುಷಾರಾಗಿದ್ದರೆ ಚೆನ್ನಾಗಿತ್ತು. ಈಗ ಎರಡು ಮಕ್ಕಳಾದ ಮೇಲೆ ಚಿಂತಿಸಿ ಫಲವೇನು?

''ನೀನೇನು ತಿಂಡಿಗಿಂಡಿ ಕೊಡ್ತಿಯೋ ಇಲ್ಲ ಇವತ್ತೆಲ್ಲ ಪಾರಿವಾಳಗಳ್ನ ನೋಡ್ತಿರ್ತೀಯೋ? ಆಫೀಸ್ನಿಂದ ಬಂದು ಎಷ್ಟು ಹೊತ್ತಾಯ್ತು?'' ಎಂದೆ. ''ಅಯ್ಯೋ ನನ್ನ ಮರವೆ! ಈಗ ತಂದೆ'' ಎಂದು ಅಡಿಗೆ ಮನೆಗೆ ಓಡಿದಳು.

ನಾನು ಕುರ್ಚಿಯಲ್ಲಿ ಕಾಲು ಚಾಚಿ ಕುಳಿತೆ. ಪುರ್‍ರ್ ಎಂದು ಒಂದು ಪಾರಿವಾಳ ಹೊರಗೆ ಹಾರಿಹೋಯಿತು. ಇವಳು ತಿಂಡಿ ತಂದಳು. ''ಅರೆ! ಒಂದೇ ಇದೆಯಲ್ಲ!'' ಎಂದಳು. ''ಅದೇ ಕಣೆ. ಆಗ ಗುದ್ದಾಡ್ತಿದ್ವಲ್ಲ, ಒಂದು ಪಾರಿವಾಳ ಹೊರಗೆ ಹೋಯಿತು. ಬಹುಶಃ ಡೈವೋರ್ಸ್ ಕೇಸ್ ಅಂತ ಕಾಣ್ಸತ್ತೆ'' ಎಂದೆ. ಭಾವಜೀವಿ ಹಾಗೂ ಕವಯಿತ್ರಿಯಾದ ನನ್ನಾಕೆಯನ್ನು ವಾಸ್ತವ ಲೋಕದಲ್ಲಿರುವಂತೆ ಮಾಡಬೇಕಾದರೆ ಇಂಥ ಮಾತುಗಳು ಅವಶ್ಯ ಎಂಬುದು ನನ್ನ ಅನುಭವ. ನನ್ನವಳ ಮುಖಕಮಲ ಬಾಡುತ್ತದೆ ಎಂದು ತಿಳಿದಿದ್ದೆ. ಆದರೆ ಅದು ಅರಳಿತು.

''ನೋಡಿ ನೋಡೀಂದ್ರೆ, ಅವು ಹೊಸಾ ಮನೆ ಕಟ್ಕೋತಾ ಇವೆ!'' ಎಂದು ಚಪ್ಪಾಳೆ ತಟ್ಟುತ್ತಾ ಸಣ್ಣ ಹುಡುಗಿಯಂತೆ ಕುಣಿದಳು. ಹೊರಗೆ ಹೋಗಿದ್ದ ಪಾರಿವಾಳ ಕೊಕ್ಕಿನಲ್ಲಿ ಕಡ್ಡಿಯೊಂದನ್ನು ತಂದಿತ್ತು. ಮೂಲೆಯಲ್ಲಿ ಕಡ್ಡಿಯನ್ನು ಇಟ್ಟು ಪುನಃ ಪುರ್‍ರನೆ ಹೊರಗೆ ಹಾರಿತು. ಇನ್ನೊಂದು ಪಾರಿವಾಳ ಆರಾಮವಾಗಿ ಕುಳಿತ್ತಿತ್ತು. ಅದು ಹೆಣ್ಣೇ ಇರಬೇಕು. ಹೊರಗೆ ಹೋದದ್ದು ಗಂಡು ಇರಬೇಕು. ಪ್ರಾಣಿಗಳಾಗಲಿ ಪಕ್ಷಿಗಳಾಗಲಿ ಗಂಡುಗಳ ಪಾಡೇ ಇಷ್ಟು. ಹೆಣ್ಣಿಗಾಗಿ ಜೀವ ಸವೆಸುವುದು.

ತಿಂಡಿ ತಿನ್ನುತ್ತಾ ನಾನು ನನ್ನಾಕೆಯನ್ನು ನೋಡುತ್ತಿದ್ದೆ. ಬಾಯಲ್ಲಿ ಕಡ್ಡಿ ಕಚ್ಚಿಕೊಂಡು ಪುರ್‍ರೆಂದು ಗಂಡುಹಕ್ಕಿ ಬರುತ್ತಿತ್ತು. ಕಡ್ಡಿಯನ್ನು ಜೋಡಿಸಿಟ್ಟು ಪುರ್‍ರೆಂದು ಹಾರಿಹೋಗುತ್ತಿತ್ತು. ನನ್ನವಳು ಕತ್ತು ತಿರುಗಿಸಿ ತಿರುಗಿಸಿ ಅದನ್ನೇ ಸಂತೋಷದಿಂದ ನೋಡುತ್ತಿದ್ದಳು. ಇವತ್ತು ರಾತ್ರಿ ಇವಳು ಪಾರಿವಾಳಗಳ ಮೇಲೆ ಒಂದು ಕವನವನ್ನು ಹೊಸೆಯುವುದು ಖಾತ್ರಿ ಎಂದುಕೊಂಡೆ. ಅಷ್ಟರಲ್ಲಿ ಸ್ಕೂಲಿನಿಂದ ಮಕ್ಕಳು ಬಂದವು. ಕೇಳುವುದೇನಿದೆ? ಪಾರಿವಾಳಗಳನ್ನು ನೋಡಿ ಅವು ತಮ್ಮ ಬ್ಯಾಗುಗಳನ್ನು ಎಸೆದು ಕುಣಿದು ಕುಪ್ಪಳಿಸಿದವು. ನಾನು ನಿಟ್ಟುಸಿರುಬಿಟ್ಟೆ. ಇನ್ನು ಪಾರಿವಾಳಗಳನ್ನು ಓಡಿಸುವುದು ಅಸಾಧ್ಯದ ಮಾತು.

ರಾತ್ರಿ ನಾವು ಊಟ ಮಾಡಿಕೊಂಡು ಕುಳಿತರೂ ಗಂಡು ಪಾರಿವಾಳದ ದುಡಿಮೆ ಮುಗಿದಿರಲಿಲ್ಲ. ಮಕ್ಕಳಿಗಂತೂ ಓದಿಗೆ ರಜ. ಇವಳೂ ಮಕ್ಕಳೊಂದಿಗೆ ಸಣ್ಣ ಹುಡುಗಿಯಂತೆ ಸೇರಿಕೊಂಡು ಪಾರಿವಾಳಗಳ ಗಡಿಬಿಡಿಯನ್ನು ನೋಡಿ ಆನಂದಿಸುತ್ತಿದ್ದಳು. ಅಂತೂ ಕೊನೆಗೆ ಪಾರಿವಾಳಗಳ ಗೂಡು ತಯಾರಾಯಿತು. ಮಹಾಜ್ಞಾನಿಯಂತೆ ಇವಳು ಓಹೋಹೋ ಎಂದಳು. ನಾನು ಅವಳನ್ನು ನೋಡಿದೆ.

''ಇವು ನಮ್ಮ ಹಾಗೇರೀ! ಹೊಸ ದಂಪತಿಗಳಲ್ಲ. ಆ ಹೆಣ್ಣನ್ನ ನೋಡಿ'' ಎಂದಳು ನಾನು ತಲೆ ಎತ್ತಿ ನೋಡಿದೆ. ಎರಡೂ ಒಂದೇ ತರಹ ಇವೆ. ಯಾವುದು ಹೆಣ್ಣೋ, ಯಾವುದೋ ಗಂಡೋ?!

''ನಂಗೆ ಗೊತ್ತಾಗಲ್ಲ. ಅವುಗಳ ಸರಸ ಶುರುವಾದಾಗ ಗೊತ್ತಾಗ್ಬೇಕಷ್ಟೆ'' ಎಂದೆ. ನನ್ನಾಕೆ ನಾಚಿ ನೀರಾದಳು. ಮಕ್ಕಳ ಕಡೆ ಕಣ್ಣು ಮಿಟುಕಿಸಿ ''ನಿಮ್ಗೆ ನಾಚ್ಕೆ ಆಗೋಲ್ವ?'' ಎಂದಳು.

''ಅವುಗಳಿಗೇ ಇಲ್ಲದ ನಾಚ್ಕೆ ನಂಗೆ ಯಾಕೆ? ಈ ವಿಷಯದಲ್ಲಿ ಮಾತ್ರ ಪಾರಿವಾಳಗಳ ಹಾಗೆ ಫ್ರೀಯಾಗಿ ಇರ್ಬೇಕು ಅಲ್ವೇನೆ?'' ಎಂದೆ. ''ಥೂ ಹೋಗ್ರಿ!'' ಎಂದು ಅವಳು ದೂರ ಸರಿದಳು. ''ನೀನು ಹಳೆ ಕಾಲದೋಳು ಕಣೆ. ಸ್ಕೂಲಿನ ಪಠ್ಯಪುಸ್ತಕದಲ್ಲಿ ಸೆಕ್ಸ್ ಎಜ್ಯುಕೇಶನ್ (ಇಂಗ್ಲೀಷ್ನಲ್ಲಿ ಹೇಳಿದ್ರೆ ಒಂಥರಾ ಮಾನವಾಗಿ ಇರುತ್ತೆ!) ಬಗ್ಗೆ ತಿಳುವಳಿಕೆ ನೀಡ್ತಾರಂತೆ. ನಮ್ಮ ಮಕ್ಕಳಿಗೆ ಈ ಜ್ಞಾನದ ಅರಿವು ಆಗ್ಲಿ ಬಿಡು'' ಎಂದೆ.

''ಕಿರಣ, ಅನು ಹೋಗಿ, ಮಲಕ್ಕೋ ಹೋಗಿ'' ಎಂದಳು ನನ್ನಾಕೆ. ಅವು ಎರಡೂ ''ನಿದ್ದೆ ಬರಲ್ಲಮ್ಮ'' ಎಂದವು. ''ಹೋಗ್ತಿರೋ ಇಲ್ವೋ'' ಎಂದು ನನ್ನವಳು ಹೆಚ್ಚು ಕಡಿಮೆ ಅವರನ್ನು ದರದರ ಹಾಸಿಗೆ ಬಳಿಗೆ ಎಳೆದುಕೊಂಡೇ ಹೋದಳೆನ್ನಿ! ರಾತ್ರಿ ಮಲಗಿದಾಗ ನಾನು ನನ್ನವಳ ಕಿವಿಯಲ್ಲಿ ಕೂ ಕೂ ಎಂದೆ. ಅವಳು ''ನಂಗೆ ಪಾರಿವಾಳಗಳ ಭಾಷೆ ಅರ್ಥವಾಗುತ್ತೆ ಸುಮ್ನೆ ಮಲಗಿ'' ಎಂದಳು.

ಶುರುವಿನಲ್ಲಿ ಅಂಥ ತಾಪತ್ರಯವೆನ್ನಿಸದಿದ್ದರೂ ಅನಂತರ ನನ್ನ ಸಹನೆಯ ಕಟ್ಟು ಒಡೆಯಿತು. ಮನೆಯಲ್ಲಿದ್ದ ಜೋಡಿ ತಮ್ಮ ಪಾಡಿಗೆ ತಾವು ಸುಖವಾಗಿರಬಾರದೆ? ತಮ್ಮ ಬಂಧು ಬಳಗವನ್ನೆಲ್ಲ ಕರೆದು ತರುವುದೆ? ನೋಡು ನೋಡುತ್ತಿದ್ದಂತೆಯೇ ಪ್ರತಿದಿನ ಒಂದೊಂದು ಹೊಸ ಜೋಡಿ ಎಲ್ಲಿಂದಲೋ ಬಂದು ಗೂಡು ಕಟ್ಟಿಕೊಂಡವು. ಡ್ರೆಸ್ ಮಾಡಿ ಕೊಂಡು ಇನ್ನೇನು ಹೊರಡಬೇಕು. ಎನ್ನುವುದರಲ್ಲಿ ಬಟ್ಟೆಯ ಮೇಲೆ ಪಿತ್! ಯಾವುದೋ ಪಾರಿವಾಳದ ಪ್ರೀತಿಯ ಪ್ರಸಾದ! ಸಾಲದ್ದಕ್ಕೆ ವಠಾರದ ಮಕ್ಕಳೆಲ್ಲ ನಮ್ಮ ಮನೆಯಲ್ಲಿ! ಮೇಲೆ ಪಾರಿವಾಳಗಳ ಗದ್ದಲ ಕೆಳಗೆ ಇವುಗಳ ಗದ್ದಲ. ನೆಲವೆಲ್ಲ ಬಣ್ಣ ಬಣ್ಣ! ಪಾರಿವಾಳಗಳ ಮೇಲೆ ದಿನಕ್ಕೆ ಎರಡು ಕವನಗಳನ್ನು ಹೊಸೆಯುತ್ತಿದ್ದ ನನ್ನಾಕೆಗೆ ಈಗ ಬಿಡುವೇ ಇಲ್ಲ! ಕಸಬರಿಗೆಯೇ ಕರಭೂಷಣವಾಗಿದೆ. ನೆಲವನ್ನು ಗುಡಿಸಿ ತೊಳೆಯುವುದೇ ಒಂದು ದೊಡ್ಡ ಕೆಲಸವಾಗಿದೆ. ಅವಳೊಂದಿಗೆ ಪಾರಿವಾಳಗಳ ಬಗ್ಗೆ ಮಾತನಾಡುವುದನ್ನೇ ನಿಲ್ಲಿಸಿಬಿಟ್ಟಿದ್ದೇನೆ. ಅವುಗಳ ಬಗ್ಗೆ ಒಮ್ಮೆಯಂತೂ ಎಷ್ಟು ಕಲಹವಾಯಿತೆಂದರೆ ಪಾರಿವಾಳಗಳು ಕೂ ಕೂ ಎಂದು ಕೂಗದೆ ತೆಪ್ಪಗೆ ಕುಳಿತು ಮೇಲಿನಿಂದ ನಮ್ಮನ್ನೇ ನೋಡುತ್ತಾ ಇದ್ದವು.

ಇಂದು ಮನೆಗೆ ಬಾಸ್ ಬರುತ್ತೇನೆ ಎಂದಿದ್ದಾರೆ. ಮನೆ ಚೊಕ್ಕಟವಾಗಿರಬೇಕೋ ಬೇಡವೋ? ಈ ದರಿದ್ರ ಪಾರಿವಾಳಗಳು ಮನೆಯಿಂದ ನಮ್ಮನ್ನೇ ಒಂದು ದಿನ ಓಡಿಸಿಬಿಡುತ್ತವೆ ಎನ್ನಿಸಿತು. ಯೋಚಿಸುತ್ತಾ ಕುಳಿತಿದ್ದೆ. ಬಾಸ್ ಬಂದೇ ಬಿಟ್ಟರು! ಗಡಿಬಿಡಿಯಿಂದ ಅವರನ್ನು ಉಪಚರಿಸಿ ಕೂಡಿಸಿದೆ. ಬಿಟ್ಟ ಬಾಯಿ ಬಿಟ್ಟಂತೆ ಅವರು ಮೇಲೆ ಹಾರಾಡುತ್ತಿದ್ದ ಪಾರಿವಾಳಗಳನ್ನೇ ನೋಡುತ್ತಿದ್ದರು.

"ನಿಮ್ಗೆ ತೊಂದ್ರೆ ಅನ್ನಿಸ್ತಿರಬಹುದು ಸರ್, ನಮ್ಗೆ ಅಭ್ಯಾಸ ಆಗಿಹೋಗಿದೆ. ಮುದ್ದಾಗಿವೆ. ಗೂಡುಗಳನ್ನ ಕಟ್ಟಿಕೊಂಡಿವೆ. ಹೇಗೆ ಓಡಿಸೋದು ಸರ್, ಮನಸ್ಸೇ ಬರೋಲ್ಲ" ಎಂದೆ. ಸಾಹೇಬರು ನನ್ನನ್ನು ವಿಚಿತ್ರವಾಗಿ ನೋಡುತ್ತಿದ್ದರು. ಕೊಂಚ ಹೊತ್ತು ಮಾತನಾಡಿ ಅನಂತರ ಹೊರಟು ಹೋದರು. ನಾನು ಹೆಂಡತಿಗೆ ಹೇಳಿದೆ "ಯಾಕೋ ಸಾಹೇಬರು ಸರಿಯಾಗಿ ಮಾತನಾಡ್ಲಿಲ್ಲ ಕಣೆ. ಮೇಲೆ ಇವುಗಳು ಸದಾ ಕೂ ಕೂ ಅಂತಿದ್ರೆ ಇನ್ನೇನು ಹೇಳು? ಮನೆಗೆ ಯಾರೂ ಬರೋ ಹಾಗಿಲ್ಲ, ಇರೋ ಹಾಗಿಲ್ಲ. ನಂಗೆ ತಲೆ ಕೆಟ್ಟುಹೋಗಿದೆ. ಒರಟಾಗಿ ಹೇಳ್ತಿದೀನಿ. ಹೇಗಿದ್ರೂ ವಠಾರದೋರು, ಹುಡುಗರು, ಪರಿಚಯದೋರು ಎಲ್ರೂ ಪಾರಿವಾಳಗಳ ಜೋಡಿ ಕೊಡಿ ಅಂತಿದಾರೆ. ಯಾರ್ಗೂ ಬೇಡ ಅನ್ಬೇಡ, ಎಲ್ರಿಗೂ ತಗೊಂಡು ಹೋಗೋಕೆ ಹೇಳು. ಈ ಮನೇಲಿ ಒಂದು ಪಾರಿವಾಳವೂ ಇರಬಾರದು. ಇದ್ರೆ ನಾನಿರೋಲ್ಲ. ಯಾವುದಾದ್ರೂ ಒಂದನ್ನ ಆರಿಸ್ಕೊ!"

ನನ್ನಾಕೆಗೆ ನನ್ನ ಮನಸ್ಸು ಅರ್ಥವಾಯಿತು. ಪಾರಿವಾಳಗಳ ಜೋಡಿಗಳು ಖಾಲಿಯಾಗತೊಡಗಿದವು. ಎರಡು ದಿನಗಳು ಕಳೆದಿರಬೇಕು. ಸಾಹೇಬರು ನನ್ನನ್ನು ತಮ್ಮ ಆಫೀಸಿಗೆ ಕರೆಸಿದರು. ಕೂತುಕೊಳ್ಳಿ ಎಂದರು. ನಾನು ಕುಳಿತೆ. "ಹೇಗಿವೆ ಪಾರಿವಾಳಗಳು?" ಎಂದರು. ನಾನು ಪೆಚ್ಚು ಪೆಚ್ಚಾಗಿ ನಗುತ್ತಾ "ಪಾರಿವಾಳಗಳು...ಛಿ ಛಿ... ನಿಮ್ಗೆ ಅವತ್ತು ತೊಂದ್ರೆ ಆಯ್ತು ಸಾರ್, ಕ್ಷಮ್ಸಿಬಿಡಿ" ಎಂದೆ. ಸಾಹೇಬರು ನಕ್ಕರು.

"ಮಿ. ರಾವ್, ನಾನು ನಿಮ್ಮನ್ನು ತಪ್ಪಾಗಿ ತಿಳ್ಕೊಂಡಿದ್ದೇರಿ. ಹೃದಯವೇ ಇಲ್ಲದ ವ್ಯಕ್ತಿತ್ವ ಎಂದು ಕೊಂಡಿದ್ದೆ. ಈ ಪಾರಿವಾಳಗಳು, ಅವುಗಳ ಗದ್ದಲ ಎಲ್ಲವನ್ನೂ ಸಹಿಸಿಕೊಂಡು ಅವುಗಳನ್ನ ಎಷ್ಟು ಪ್ರೀತಿಸ್ತೀರಪ್ಪ! ಅವತ್ತು ನಂಗೆ ಎಷ್ಟು ಆಶ್ಚರ್ಯ ಆಯ್ತೂಂತೀರಾ! ಒಬ್ಬ ಮನುಷ್ಯನ ಬಗ್ಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳೋದ್ರಲ್ಲಿ ನಾನು ನಿಸ್ಸೀಮ ಎಂದುಕೊಂಡಿದ್ದೆ. ಹಾಗಾಗಿ ನಿಮ್ಗೆ ಸಿಗಬೇಕಾಗಿದ್ದ ಬಡ್ತಿಯನ್ನು ನಿಲ್ಲಿಸಿದ್ದೆ. ನಾನೂ ತಪ್ಪು ನಿರ್ಧಾರಕ್ಕೆ ಬರಬಹುದು ಅಂತ ನಿಮ್ಮ ಮನೆಗೆ ಬಂದಾಗ ತಿಳಿಯಿತು. ಮುಂದಿನ ತಿಂಗಳು ನಿಮಗೆ ಬಡ್ತಿ! ಶುಭಾಶಯಗಳು...." ಎಂದು ಕೈ ಚಾಚಿದರು! ನನಗೆ ಗಂಟಲು ಕಟ್ಟಿತು. ಅವರ ಕೈ ಕುಲುಕಿ ಥ್ಯಾಂಕ್ಸ್ ಹೇಳಿ ಹೊರಬಂದೆ.

ಮನೆಗೆ ಬಂದಾಗ ಸ್ಮಶಾನ ಮೌನ. ಒಂದಾದರೂ ಪಾರಿವಾಳವಿಲ್ಲ! "ನೀವು ಹೇಳಿದಂತೆ ಎಲ್ಲ ಪಾರಿವಾಳಗಳನ್ನು ಕೊಟ್ಟುಬಿಟ್ಟೆ" ಎಂದು ನನ್ನವಳು ಹೇಳಿದಳು. ಸದಾ ಹಸನ್ಮುಖಿಯಾಗಿರುತ್ತಿದ್ದ ಅವಳು ಸಪ್ಪೆಯಾಗಿದ್ದಳು.

ನಾನು ಅವಳತ್ತ ನೋಡದೆ ಹೇಳಿದೆ.

"ಒಂದು ಜೋಡಿ ಇದ್ದಿದ್ರೆ ಚೆನ್ನಾಗಿತ್ತು."

ಅರ್ಥವಾಗದವಳಂತೆ ಅವಳು ನನ್ನನ್ನೇ ನೋಡುತ್ತಾ ನಿಂತಳು. ನಿಧಾನವಾಗಿ ಅವಳ ಮುಖದಲ್ಲಿ ನಗೆ ಅರಳಿತು.

ನಾನು ಮುಖ್ಯ ಮಂತ್ರಿಯಾದರೆ

- ಜಯಾ ಸೂರ್ಯನಾರಾಯಣಪ್ಪ

ನಿಜವಾಗಿ ಮಂತ್ರಿಯಾಗಲಿಕ್ಕೂ ಹಿಂದಿನ ಜನ್ಮದ ಪುಣ್ಯ ಬೇಕು. ಅದರಲ್ಲೂ ಮುಖ್ಯಮಂತ್ರಿಯಾಗಬೇಕಾದರೆ ಅದೃಷ್ಟ ಅನ್ನೋದು ಮನೆ ಬಾಗಿಲಿಗೆ ಎಡೆತಾಕಿರಬೇಕು. ಆ ಕುರ್ಚಿ, ಆ ಅಧಿಕಾರ, ಹಣದ ಹೊಳೆ, ಖರ್ಚಿಲ್ಲದ ಪ್ರವಾಸಗಳು, ಅವರಿವರು ಸೊಂಟ ಬಗ್ಗಿಸಿ, ಕಿರುನಗೆ ಬೀರಿ ಭಯದಿಂದ ಡಗ್ಗು ಸಲಾಮು ಹೊಡೆಯುವುದು ನೆನೆಸಿಕೊಂಡ್ರೆ ವ್ಹಾ ಮೈ ಜುಂ ಎನಿಸುತ್ತದೆ.

ಒಂದ್ ಸಮಯ ಆ ಪದವಿ ಸಿಕ್ಕೇ ಬಿಡ್ತು ಅಂದ್ಕೊಳಿ ಆಗ ಏನ್ಮಾಡ್ಬೇಕು. ಮನಸ್ನಲ್ಲೇ ಮಂಡಿಗೆ ತಿಂದೆ ಅಂತಾರಲ್ಲ ಹಾಗೆ ಗುಣಿಸಿ ಭಾಗಿಸಿ ಲೆಕ್ಕ ಹಾಕಿದೆ. ಮೊದಲ್ನೇ ಕೆಲಸ ಅಂದ್ರೆ ಸಿನಿಮಾದಲ್ಲಿ, ಟಿವಿಯಲ್ಲಿ ಕಾಣಿಸಿಕೊಳ್ಳುವ ಚಡ್ಡಿ ಹುಡುಗ ಹುಡುಗಿಯರ ಜಾಹೀರಾತುಗಳನ್ನು ಮೊದಲು ಕಿತ್ತೊಗೆಯೋದು. ಯಾಕೆ ಅಂದ್ರೆ ಅದರಿಂದ್ಲೇ ಈ ಪಡ್ಡೆ ಹುಡುಗ್ರು ಶಿಳ್ಳೆ ಹೊಡೆಯೋದು, ಹಾದಿ ಬೀದೀಲಿ ಹೋಗೋವಾಗೆಲ್ಲ ಡಿಕ್ಕಿ ಹೊಡ್ದು ಸಾರಿ ಅನ್ನೋದು. ಮರ್ಯಾದಸ್ತರು, ಮಾನವಂತರು, ಕುಟುಂಬ ವರ್ಗದವರು ಅನ್ನೋ ಹಾಗಿಲ್ಲ, ಹೋಗೋ ಬರೋರನ್ನೆಲ್ಲ ಕಾಮಣ್ಣನ ಕಣ್ಣಿಟ್ಟು ಚುಡಾಯಿಸೋದು, ಇದೂ ಸಾಲದು ಅಂತ ಹುಡುಗಿಯರನ್ನು ಕಿಡ್ನಾಪ್ ಮಾಡಿ ಕೆಡಿಸಿ ಕೊಂದೂ ಬಿಡೋದು ಕಾಣ್ತಿದೀವಿ. ಇದೆಂಥ ಅನ್ಯಾಯ. ಸರ್ಕಾರ ನೋಡ್ಕೊಂಡು ತೆಪ್ಪಗೆ ಕೂತಿದೆಯಾ ಅಂತ ಮನಸ್ನಲ್ಲೇ ಮರುಗೋ ಹಾಗಾಗುತ್ತೆ. ಅವರ್ಗೇನು ದುಡ್ಡಿಲ್ವೇ, ಮೈ ತುಂಬಾ ಬಟ್ಟೆ ಹಾಕ್ಕೊಳ್ಳಿಕ್ಕೆ ಪುರುಸೊತ್ತಿಲ್ವೇ, ಛೆ ಛೆ ಇದು ತೀರ ಅನ್ಯಾಯ ಅಂತ ನನ್ನ ನಂಬಿಕೆ. ಅದಿಕ್ಕೆ ಅಂಥಾ ಜಾಹೀರಾತುಗಳನ್ನೇ ನಿಷೇಧಿಸಿಬಿಡೋದು.

ಬಟ್ಟೆ ಆಯ್ತು, ಹೊಟ್ಟೆ ತುಂಬಾ ಊಟ. ಈಗೀಗಂತೂ ಹಾಳು ಹೊಸಾ ಹೊಸಾ ಆಹಾರ ಬಂದು ಸುಲಭವಾಗಿ ತಯಾರಾಗಿರೋದನ್ನೇ ಕೊಂಡು ತಂದು ತಿಂದು, ಮೈ ಊದಿಸಿಕೊಂಡು, ಹತ್ತಾರು ಖಾಯಿಲೆ ತಂದ್ಕೋಳೋದನ್ನ ನೋಡಿದ್ರೆ ಅಯ್ಯೋ ಅನ್ಸುತ್ತೆ. ಅಂಥಾದನ್ನೆಲ್ಲ ತಕ್ಷಣ ನಿಲ್ಲಿಸೋದು. ಪುಗಸಟ್ಟೆ ವೈದ್ಯರ ಹಾವಳಿ ಹೆಚ್ಚಾಗಿದೆ. ಇದರಿಂದ ಸರ್ಕಾರೀ ದವಾಖಾನೆ ಖಾಲಿ ಖಾಲಿ, ಬಡ ಬೀರಕ್ಕನೂ ವೈದ್ಯರ ಷಾಪಿಗೆ ಭೇಟಿ ಕೊಡ್ತಾಳೆ. ಸುಮ್ನೆ ಕೈ ಮುಟ್ಟಿ ನೋಡ್ಲಿಕ್ಕೆ ನೂರಾರು ರೂಪಾಯಿ, ನಿಜವಾಗಿ ಸಂಕಟವಾಗುತ್ತೆ. ಅದಕ್ಕೆ ಎಲ್ಲರೂ ಖಡ್ಡಾಯವಾಗಿ ಸರ್ಕಾರೀ ಆಸ್ಪತ್ರೆಗೇ ಹೋಗಿ ಚಿಕಿತ್ಸೆ ತಗೋಬೇಕು ಅಂತ ಕಾನೂನು ಮಾಡೋದು.

ಮುಂದಿನದು ವಸತಿ. ಎಲ್ರಿಗೂ ಒಂದೊಂದು ಪುಟ್ಟ ಪುಟ್ಟ ಮನೆ ಇರಲಿಕ್ಕೇ ಬೇಕು. ಹಾಗೆ ಅವರವರ ಆದಾಯಕ್ಕೆ ತಕ್ಕ ಹಾಗೆ ಮನೆ ಕಟ್ಟಿಸಿಕೊಡೋದು. ಬಾಡಿಗೆ ಬಿಡಿಗಾಸೂ ಇಲ್ಲ, ಆದರೆ ಪ್ರತಿಯೊಬ್ರೂ ದುಡೀಬೇಕು. ಸುಮ್ ಸುಮ್ನೆ ಹಣ ಕೊಟ್ಟು ಅವರಿಗೆ ಉಪಕಾರ

ಮಾಡೋದಕ್ಕಿಂತ ಒಂದು ಪೈಸೇನೂ ಪುಕ್ಕಟೆ ಕೊಡಬಾರದು ಅಂತ ತೀರ್ಮಾನ ತಗೋಬೇಕು. ಇಲ್ಲಿಷ್ಟೆ ಜನ ಏನ್ಮಾಡ್ತಾರೆ ಗೊತ್ತಾ, ಏನೇ ಖಾಯಿಲೆ ಬಂದು ಸತ್ರೂ ಜನರು ಅವನು ರೈತ, ಬೆಳೆ ಹಾನಿಯಾಗಿ ಆತ್ಮಹತ್ಯೆ ಮಾಡಿಕೊಂಡಾ, ಅವನ ಕುಟುಂಬಕ್ಕೆ ಯಾರೂ ದಿಕ್ಕಿಲ್ಲ ಅಂತ ಪ್ರಕಾರ ಎಬ್ಬಿ ಸರ್ಕಾರದಿಂದ ಒಂದು ಲಕ್ಷ ಗಿಟ್ಟಿಸಿಕೊಳ್ಳೋದು. ಅಯ್ಯೋ ಅಯ್ಯೋ ಒಂದು ಲಕ್ಷ ಅಂದ್ರೆ ಬಿಡಿಗಾಸಾಗಿ ಹೋಗಿದೆ. ಅದಕ್ಕೇ ಪುಕ್ಕಟ್ಟೆ ಹಣ ಕೊಡೋದನ್ನು ಮೊದ್ಲು ನಿಲ್ಲಿಸೋದು.

ಇನ್ನೊಂದು ವಿಷಯ – ಒಂದು ಸಮಯ ಜೋರಾಗಿ ಮಳೆ ಬಂತೂ ಅನ್ನಿ. ಕಸ ಕಡ್ಡಿ, ಪ್ಲಾಸ್ಟಿಕ್ ಚೀಲಗಳು ಅಡ್ಡ ಸೇರ್ಕೊಂಡು ಅಲ್ಲೊಂದು ಜಲಪಾತಾನೇ ಸೃಷ್ಟಿಯಾಗೋಗಿಬಿಡುತ್ತೆ. ಒಂದ್ನಿಮಿಷದಲ್ಲಿ ಅಂದ್ರೆ ಒಂದು ಜೋರು ಮಳೆ ಬಂದ್ರೆ ರಸ್ತೆ ತುಂಬಾ ನದಿಯೋ ನದಿ. ರಸ್ತೆ ಯಾವುದು, ಚರಂಡಿ ಯಾವುದು ಅಂತ ಕಾಣಿಸೋದರ ಬದಲು ರಸ್ತೆ ತುಂಬಾ ನೀರೋ ನೀರು, ಜಲಪ್ರಳಯ ಅಂತಾರಲ್ಲ, ಅದಾಗಿಬಿಡುತ್ತೆ. ಆಗ ಕಿಲಾಡಿಗಳಿಗೆ ಒಂದುಪಾಯ ತಟ್ಟನೆ ಹೊಳೆದುಬಿಡುತ್ತೆ. ಏನಪ್ಪ ಅಂದ್ರೆ ಕೈ ಹಿಡ್ಕೊಂಡಿದ್ದ ಮಗ ಕೊಚ್ಚಿಹೋದ ಅಂತ ಬಡ್ಕೊಂಡಿದ್ದೂ ಬಡ್ಕೊಂಡಿದ್ದೇ. ಅಷ್ಟರಲ್ಲಿ ಸುದ್ದಿ ಸುತ್ತಾ ಮುತ್ತ ಹರಡಿಬಿಡುತ್ತೆ. ಜನ ಎಲ್ಲ ಅಯ್ಯೋ ಪಾಪ ಅಂತಾರೆ. ಇದೇ ಸಮಯ ಕಾಯುತ್ತಿದ್ದ ಕಿರುತೆರೆ ವಾಹಿನಿಯವರು ಕ್ಯಾಮರ ಮುಖಕ್ಕಿಟ್ಟು ಮಾತಾಡಿಸ್ತಾರೆ. ಆ ತಾಯಿ ಮನೆಗೆ ಬಂದು ಮನೆ ತುಂಬಾ ಉರುಳಾಡಿ ಅಳ್ತಾಳೆ. ಅದಕ್ಕೆ ಗಂಡ, ಅತ್ತೆ ಎಲ್ಲರೂ ಧ್ವನಿಗೂಡಿಸುತ್ತಾರೆ. ಆಗ ನೋಡಿ ಥಕ್ ಅಂತ ಒಂದು ಲಕ್ಷದ ಚೆಕ್ ಅವರ ಕೈಗೆ ಬಂದು ಬೀಳುತ್ತೆ. ಅಷ್ಟಕ್ಕೆ ಮುಗೀತೇ ಕಥೆ, ವಿರೋಧಪಕ್ಷದವರು, ಆ ಮುಖಂಡರು, ಈ ಮುಖಂಡರು ಅವರಿಗಿಂತ ನಾವೇನು ಕಮ್ಮಿ ಅಂತ ಇವರು, ಇವರಿಗಿಂತ ನಾವೇನು ಕಮ್ಮಿ ಅಂತ ಅವರು ಮುಂದೆ ಬಂದು ಆ ಹೆಂಗಸಿಗೆ ಹಣ ಕೊಡ್ತಾರೆ. ಯಾರಪ್ಪನ ಮನೆ ದುಡ್ಡು ಹೇಳಿ. ಯಾರ್ದೋ ದುಡ್ಡು ಎಲ್ಲಮ್ಮನ ಜಾತ್ರೆ ಅಂದ ಹಾಗೆ. ಹಣ ಕೊಟ್ಟಿದ್ದೂ ಕೊಟ್ಟಿದ್ದೇ, ಫೋಟೋ ತೆಗೆಸಿಕೊಂಡಿದ್ದೂ ತೆಗಿಸಿಕೊಂಡಿದ್ದೇ. ಇಷ್ಟೆಲ್ಲ ಆದರೂ ಆ ಮಹಾತಾಯಿ ಮುಸುಕು ಹೊದ್ದು ಅಳೋ ನಾಟಕವಾಡ್ತಾ ಇರ್ತಾಳೆ. ಆದರೆ ಅವಳ ರಾಜಕುಮಾರ ಕೃಷ್ಣನ ಹಾಗೆ ಯಶೋಧೆ ಹತ್ತಿರ ಬೆಳೆಯುತ್ತಾ ಇರೋದು ಯಾರಿಗೂ ಗೊತ್ತಾಗೋದೇ ಇಲ್ಲ. ಇದನ್ನು ನಿಲ್ಲಿಸೋದಕ್ಕೂ ಒಂದು ಸಮಿತಿ ನೇಮಿಸಿ ನಿರ್ಧಾರ ತಗೋಳೋದು.

ಇನ್ನು ಶಿಕ್ಷಣ – ಕಡ್ಡಾಯವಾಗಿ ಎಲ್ಲರೂ ವಿದ್ಯೆ ಕಲೀಲೇಬೇಕು ಅಂತ ಕಾನೂನು ಮಾಡೋದು. ಪುಸಲಾಯಿಸಿ ಊಟ, ಬಟ್ಟೆ, ಪುಸ್ತಕ ಕೊಟ್ರೂ ಜನ ಕಿವಿ ಮೇಲೆ ಹಾಕ್ಕೊಳ್ದೇ ಇದ್ರೆ ಇನ್ನೇನು ಮಾಡೋದು. ಜೊತೆಗೆ ಸಂಜೆ 6 ರಿಂದ ರಾತ್ರಿ 9 ರವರೆಗೆ ಕಡ್ಡಾಯವಾಗಿ ಮನೆಮನೆಗಳಲ್ಲಿ ಎಲ್ಲಾ ಕಿರುತೆರೆ ವಾಹಿನಿಗಳನ್ನೂ ಬಂದ್ ಮಾಡೋದು. ಅಷ್ಟರಲ್ಲಿ ತಂದೆ ತಾಯಿಯರು ತಮ್ಮ ಮಕ್ಕಳಿಗೆ ಹೋಂ ವರ್ಕ್ ಮಾಡಿಸಿ ಪಾಠ ಓದಿಸಿರಬೇಕು. ಯಾವಾಗ ನೋಡಿದ್ರೂ ದಾರವಾಹಿ, ಧಾರವಾಹಿ, ಹಾಳು ಆ ಕಣ್ಣೀರ ಕಥೆಗಳನ್ನು, ಗೋಳಿನ ಕಥೆಗಳನ್ನು, ಮನೆಮುರುಕ ಕಥೆಗಳನ್ನು ನೋಡ್ತಾ ಕಣ್ಣು ಕೆಂಪಗೆ ಮಾಡಿಕೊಳ್ಳೊ ಬದಲು ಮನೆ ಹೆಂಗಸರು ಮಕ್ಕಳಿಗೆ ಹೋಂ ವರ್ಕ್ ಹೇಳಿಕೊಟ್ಟು ಕಣ್ಣು ತಂಪು ಮಾಡಿಕೊಳ್ಳಲಿ.

ಇಷ್ಟೆಲ್ಲ ಮಾಡಬೇಕು ಅಂತ ಕಾರ್ಯಕ್ರಮ ಹಾಕಿಕೊಂಡಾಗ ದೇಶದ ತುಂಬಾ ಜನ ತುಂಬಿಕೊಂಡ್ರೆ ಹೇಗೆ ನಿಭಾಯಿಸೋದು. ಜನಸಂಖ್ಯೆ ಹೆಚ್ಚಾಗ್ತಾ ಹೆಚ್ಚಾಗ್ತಾ ಬಲೂನ್ ಢಮಾರ್ ಅಂದ ಹಾಗೆ ಈ ಭೂಮೀನೂ ಒಂದು ದಿನ ಢಮಾರ್ ಅಂದುಬಿಡಬಹುದು. ಅಭಿವೃದ್ಧಿ ಮಾಡೋಣ ಅಂತ ಹೋದ್ರೆ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಅಂದ ಹಾಗಾಗುತ್ತೆ. ಅದಕ್ಕೆ ಚೀನೀಯರ ಹಾಗೆ ಒಂದೇ ಮಗು, ಇಲ್ಲ ಅಬ್ಬಬ್ಬ ಅಂದ್ರೆ ಎರಡೇ ಮಕ್ಕಳು. ಇಲ್ದಿದ್ರೆ ಸೆರೆವಾಸ ಖಂಡಿತ ಅಂತ ಕಾನೂನು ಮಾಡೋದು. ಆದರೆ ಈಗೀಗ ಜೈಲು ಅಂದ್ರೆ ನಾ ಮುಂದು ತಾ ಮುಂದು ಅಂತ ಮುನ್ನುಗ್ತಾರೆ. ಬಿಟ್ಟಿ ಊಟ, ತಿಂಡಿ ತಿಂದ್ಕೊಂಡು ಆರಾಮವಾಗಿರಬಹುದು ಅಂತ. ಒಂದು ವೇಳೆ ಜನರನ್ನ ಜೈಲಿಗೆ ಹಾಕಿದರೂ ಗಂಡ ಹೆಂಡ್ತಿ ಇಬ್ಬರನ್ನೂ ಅಥವಾ ಒಂದು ಹುಡುಗ ಒಂದು ಹುಡುಗಿ ಇಬ್ಬರನ್ನೂ ಒಂದೇ ಕೋಣೆಗೆ ಹಾಕಬಾರದು. ಒಂದು ವೇಳೆ ಹಾಕಿದರೆ, ವಸುದೇವ ಮಾಡಿದ ಹಾಗೆ ಅವರು ಒಂದೊಂದೇ ಮಕ್ಕಳನ್ನು ಹೆರೋಕೆ ಷುರು ಮಾಡ್ತಾರೆ. ಆಗ ಯಾರಾದರೂ ಕಂಸನನ್ನು ಕರೆಸಿ ಮಕ್ಕಳನ್ನು ಕಚಕ್ ಕಚಕ್ ಅನಿಸಬೇಕಾಗುತ್ತೆ. ಈ ತಾಪತ್ರಯ ಎಲ್ಲ ಯಾಕೆ ಅಂತ ಕುಟುಂಬ ಯೋಜನೆಯನ್ನು ಕಡ್ಡಾಯ ಮಾಡೋದು. ಏನಂತೀರ.

ಇನ್ನು ಮುಂದಿನದು – ಕುಡಿಯೋದು. ಈಗೀಗ ಯಾರು ಕುಡಿಯೋದಿಲ್ಲ ಹೇಳಿ. ಕಾಫಿ, ಟೀ, ಕೋಲಾ ಜೊತೆಗೆ ಬೀರು ವಿಸ್ಕಿ ರಮ್ಮು ಜಿನ್ನು ಅಂತ ಕುಡಿತಾನೇ ಇರ್ತಾರೆ. ಕುಡ್ಕೊಳ್ಲಿ ಬಿಡಿ. ಈ ತಂಟೆಗೆ ಹೋಗೋದು ಬೇಡ. ಯಾಕೇಂದ್ರೆ ಒಂದು ವೇಳೆ ಬೇಕೂಂದಾಗ ನಮಗೇ ಸಿಗದೇ ಹೋದ್ರೆ, ಅಲ್ವಾ. ಕುಡಿದ್ರೆ ಅವರ ದುಡ್ಡು ಹಾಳಾಗುತ್ತೆ, ಇದರಿಂದ ಸರ್ಕಾರಕ್ಕೆ ಆದಾಯ ಬರುತ್ತೆ, ಕುಡಿದ್ರೆ ಆರೋಗ್ಯ ಹಾಳಾಗುತ್ತೆ. ಇದರಿಂದ ವೈದ್ಯರಿಗೆ ಸುಗ್ಗಿ. ಕದ್ದು ಕುಡಿಯೋದ್ರಿಂದ ಒಂದೊಂದು ಸಾರಿ ಪೋಲೀಸರ ಕೈಗೆ ಸಿಕ್ಕಿಹಾಕಿಕೊಂಡ್ರೆ ಪೋಲೀಸರಿಗೆ ಸುಗ್ಗಿ. ಬಡವರು ಕಳ್ಳ ಬಟ್ಟಿ ಕುಡಿದು ಸತ್ರೆ ಶ್ರೀಮಂತರು ಬೀರಿ ವಿಸ್ಕಿ, ರಮ್ಮು ಕುಡಿದು ಸಾಯ್ತಾರೆ. ಸಾಯ್ಲಿ ಬಿಡಿ. ಅದಕ್ಕೆ ಕುಡಿಯೋಕೆ ಕಡಿವಾಣ ಹಾಕೋಲ್ಲ. ಇನ್ನೂ ಕುಡಿಯೋರಿಗೆ ಯಾವುದಾದರೂ ಇನ್ಸೆಂಟೀವ್ ಸ್ಕೀಮ್ ಇದ್ರೆ ಅದನ್ನು ಪ್ರಾರಂಭಿಸಬಹುದು ಅನ್ನೋ ಯೋಚನೇನೂ ಇದೆ.

ನಿಜ ಹೇಳಿ ಇಂಥಾ ಚಿಂತನೆ ಇಟ್ಟುಕೊಂಡಿರುವ ನನಗೆ ಮುಖ್ಯಮಂತ್ರಿಯವರ ಕುರ್ಚಿ ಸಿಕ್ಕೀತೇ. ನನಗೆ ಅಷ್ಟು ತಾಖತ್ತಿದೆಯೇ. ಜನ ಮನ ಗೆಲ್ಲೋ ಸಾಮರ್ಥ್ಯ ಇದೆಯೇ. ಅಯ್ಯೋ ಇದೆಲ್ಲ ಬರೀ ಕನಸು, ತಿರುಕನ ಕನಸು ಅಲ್ಲಲ್ಲ ತಿರುಕಿಯ ಕನಸು. ನಾನು ಶಾಲೇಲಿ ಓದ್ತಾ ಇದ್ದಾಗ ಒಂದು ವಾಕ್ಯರಚನೆ ಕೊಟ್ಟಿದ್ರು. ಏನಪ್ಪಾ ಅಂದ್ರೆ, ನಾನು ಮಹಾರಾಣಿಯಾದರೆ.... ಏನೇನು ಮಾಡ್ತೀನಿ ಅಂತ ಬರೀಬೇಕು. ಆಗ ಮಹಾರಾಣಿ ಅಂದ್ರೆ ಏನು ಅಂತ ತಿಳೀದ ವಯಸ್ಸು. ಮೈ ತುಂಬಾ ಆಭರಣ ತೊಟ್ಟು ಅರಮನೇಲಿ ಶಕುಂತಳೆ ಹಾಗೆ ಸಖಿಯರ ಜೊತೆ ನಲಿದಾಡೋದು ಅಂದ್ಕೊಂಡಿದ್ದೆ. ರಾಮ ರಾಮ, ಮಹಾರಾಣಿ ಅಂದ್ರೇನು ಗೊತ್ತಾ, ಸ್ವಾತಂತ್ರವಿಲ್ಲದ ಖೈದಿಯ ಬದುಕು. ಜೊತೆಗೆ ಮಹಾರಾಜ ನೂರಾರು ಹುಡುಗಿಯರನ್ನು ದೇಶ ವಿದೇಶಗಳಿಂದ ತಂದು ಅಂತಃಪುರದ ತುಂಬಾ ತುಂಬಿಕೊಂಡು ಲಲ್ಲೆ ಹೊಡೆಯೋದನ್ನು ನೋಡ್ತಾ ಕೂರೋದು ನಿಜವಾಗಿ ಒಳ್ಳೆಯದೇ ಹೇಳಿ. ಯಾವಾಗ

ಅವನಿಗೆ ನಮ್ಮತ್ತ ಗಮನ ಬರುತ್ತೋ, ನಮ್ಮ ಸರದಿ ಯಾವಾಗ ಬರುತ್ತೋ ಅಂತ ಕಾಯೋದೇ ಕೆಲಸವಾಗಿಬಿಡುತ್ತೆ. ಆಗ ಎಂತಹ ವೇದನೆಯಾಗಬೇಡ ಹೇಳಿ. ಅದಕ್ಕಿಂತ ಕಾಳೇಗೌಡನ ಕಾಳಿ ಆಗೋದು ಮೇಲು. ಮೈ ತುಂಬಾ ದುಡ್ಡು, ಹಿಟ್ಟುಂಡು ಹತ್ತಾರು ಮಕ್ಕಳನ್ನು ಹೆತ್ತು ನಿಸರ್ಗದ ಮಡಿಲಲ್ಲಿ ಬೆಳೆದೇ ಕಣ್ಣು ಮುಚ್ಚೋದು ಲೇಸು. ಮಹಾರಾಣಿ ಆಗೋದು ಖಂಡಿತಾ ಬೇಡ ಅಂತ ಈಗಲೂ ಅನಿಸುತ್ತೆ. ಯಾಕೇಂದ್ರೆ ಈಗ ಮಹಾರಾಜರೇ ಇಲ್ಲ ಇನ್ನು ಮಹಾರಾಣಿ ಎಲ್ಲಿ? ಈಗ ಪ್ರಜಾರಾಜ್ಯ, ಪ್ರತಿಯೊಬ್ಬ ಪ್ರಜೆಯೂ ರಾಜನೇ. ಪ್ರತಿಯೊಬ್ಬರೂ ಮಾಡ್ತಿರೋದು ಮಂತ್ರಿ ದರ್ಬಾರ್ರೇ. ಮಹಾರಾಜರ ಅರಮನೆಯನ್ನೂ ನಾಚಿಸುವಂತಹ ಮನೆಗಳು, ವೈಭವೋಪೇತ ಗೃಹಪಯೋಗೀ ಸಲಕರಣೆಗಳು, ಕಣ್ಣಿಗೆ ತಂಪು ತಂದುಕೊಡುವ ಹೂದೋಟ, ಮಧ್ಯೆ ನಳನಳಿಸುವ ಚೆಂಗುಲಾಬಿ, ವ್ಹಾ: ಬದುಕಿದ್ರೆ ಮಂತ್ರಿಯಾಗೇ ಬದುಕಬೇಕು ಅನ್ನುತ್ತೆ. ಜೀವನದಲ್ಲಿ ಒಮ್ಮೆಯಾದರೂ ಮಂತ್ರಿಯಾಗಿ ಆ ಸುಖ ವೈಭೋಗಗಳನ್ನು ಅನುಭವಿಸದೇ ಇದ್ರೆ ಹುಟ್ಟಿದ್ದೂ ವೇಸ್ಟು ಅಲ್ವೆ. ನಾನು ಅಂದುಕೊಂಡ ಹಾಗೆ ಮುಖ್ಯಮಂತ್ರಿಯಾದರೆ, ಅಥವಾ ಬರೀ ಮಂತ್ರಿಯಾದರೂ ಆದ್ರೆ ಆಗ ಒಂದು ಸಾರಿಯಾದರೂ ಪೂರಾ ಪ್ರಪಂಚವನ್ನು ಸರ್ಕಾರದ ಖರ್ಚಿನಲ್ಲಿ ಸುತ್ತಿಕೊಂಡು ಮಜಾ ಮಾಡಿಕೊಂಡು ಬರಬೇಕು. ಆಗ ನನ್ನ ಬಹುದಿನದ ಆಸೆ ಪೂರೈಸಿದಂತಾಗುತ್ತೆ. ಹಾಗಾದರೆ ಮುಂದಿನ ಸಾರಿ ನೀವು ನನಗೆ ಕೊಡ್ತೀರಾ ಓಟು.

ಆಗುತ್ತಿತ್ತೆ?

ಕೊಲಂಬಸ್‌ಗೆ ಮದುವೆಯಾಗಿದ್ದರೆ ಅವನು ಅಮೆರಿಕ ಕಂಡು ಹಿಡಿಯಲು ಸಾಧ್ಯವೇ ಆಗುತ್ತಿರಲಿಲ್ಲ. ಏಕೆಂದರೆ:

ಅವನು ಹೊರಟಾಗ ಅವನ ಹೆಂಡತಿಯ ಪ್ರಶ್ನೆಗಳ ಸರಮಾಲೆಯೇ ಆರಂಭವಾಗುತ್ತಿತ್ತು.

ಎಲ್ಲಿಗೆ ಹೊರಟಿರಿ?

ಹೇಗೆ ಹೋಗ್ತಿರಿ?

ಯಾರ ಜತೇಲಿ?

ಏನು ಕಂಡು ಹಿಡಿಯಲು?

ನೀವೇ ಯಾಕೆ ಹೋಗಬೇಕು?

ಬೇಕೆಂದೇ ಈ ಪ್ಲಾನ್ ಮಾಡಿದ್ದೀರಿ, ಅಲ್ವಾ?

ನಾನೊಬ್ಬಳೇ ಇಲ್ಲಿ ಏನು ಮಾಡಲಿ? ಹೇಗೆ ಇರಲಿ?

ನಾನೂ ಬರಲಾ?

ನೀವು ಯಾವಾಗ ವಾಪಸಾಗುವಿರಿ?

ಅವತ್ತು ಮನೆಯಲ್ಲೇ ಊಟ ಮಾಡುವಿರಾ?

ನನಗೆ ಏನು ತಂದು ಕೊಡ್ತೀರಿ?

ಇತ್ಯಾದಿ.. ಇತ್ಯಾದಿ.. .....

ನನ್ನ ರೂಮು ಮೇಟು...

- ಗೋಪಾಲಿ

ಭಟ್ಟರ ಜತೆ ರಾತ್ರಿ ರೂಂ ಮೇಟಾಗಿ ನಾನು ಸಿಕ್ಕಿ ಹಾಕೊಂಡಿದ್ದು ನಿಮಗೆ ಹೇಳಲೇಬೇಕು. ಕೆಲವರಿಗೆ ಬೆನ್ನಿನಲ್ಲಿ ಅದ್ಯಾವುದೋ ನರ ಇರುತ್ತಂತೆ - ಅದನ್ನ ಕೊಂಚ ಯಾರಾದರೂ ಟಚ್ ಮಾಡಿದರೆ ಸಾಕು ನಿದ್ದೆ ಎಳೆದುಕೊಂಡು ಬಂದುಬಿಡುತ್ತಂತೆ. ಮೊದಮೊದಲು ನಾನು ಈ ವಿಷಯ ಕೇಳಿದಾಗಲೆಲ್ಲಾ ಬರೀ ಬುರುಡೆ ಅಂತ ಅಂದುಕೊಂಡಿದ್ದೆ. ಫ್ಯಾಕ್ಟರೀಲಿ ಕೆಲಸಕ್ಕೆ ಸೇರಿದೆನಲ್ಲಾ ಆಗ ಇದರಲ್ಲಿ ನಿಜ ಇರಬಹುದು ಅನಿಸಿತ್ತು. ಕಾರಣ ಏನಪ್ಪಾ ಅಂದರೆ ಫ್ಯಾಕ್ಟರಿ ಬಸ್ಸಿನಲ್ಲಿ ಕೂತ ಒಂದೇ ನಿಮಿಷದಲ್ಲಿ ಹೆಂಗಸರೇ ಆಗಿರಲೀ ಗಂಡಸರೇ ಆಗಿರಲಿ ನಿದ್ದೆ ಹೋಗುವುದನ್ನು ಕಾಣುತ್ತಿದ್ದೆ. ಬೆನ್ನು ಸೀಟಿಗೆ ಒರಗಿದ ತಕ್ಷಣ ಅವರಿಗೆ ಮೈಮರೆಯುವ ನಿದ್ದೆ ಒದ್ದುಕೊಂಡು ಬರುತ್ತಿತ್ತು. ಹಾಳಾದೋನು ನನಗೆ ಕಿಟಕಿ ಪಕ್ಕ ಕೂತು ಆಚೆ ನೋಡುವುದನ್ನು ಬಿಟ್ಟರೆ ಕಣ್ಣು ರೆಪ್ಪೆ ಒಂದಾಗುತ್ತಾ ಇರಲಿಲ್ಲ. ಕುಂಭಕರ್ಣನ ತರಹ ಕುಂಭಕರ್ಣಿ ತರಹ (ಈಕೆ ಕುಂಭಕರ್ಣನ ಹೆಂಡತಿ ಅಂತ ಇಟ್ಕೊಳ್ಳಿ) ನಿದ್ದೆ ಹೊಡಿಯೋ ಹೆಣ್ಣು ಗಂಡುಗಳನ್ನು ನೋಡಿದಾಗ ಹೊಟ್ಟೆಯಲ್ಲಿ ಅದೇನು ಸಂಕಟವಾಗುತ್ತಾ ಇತ್ತು ಅಂತೀರೀ? ಪರಶುರಾಮನ ಥರಹದ ಆ ಕಾಲವಾಗಿದ್ದರೆ ಕೊಡಲಿ ತಂದು ನಿದ್ದೆ ಮಾಡುತ್ತಿರುವ ಒಬ್ಬೊಬ್ಬರ ತಲೆಯನ್ನೂ ಕೊಚ್ಚೀ ಕೊಚ್ಚೀ ಹಾಕಬಹುದಿತ್ತು ಅಂತ ಅನಿಸೋದು. ಆದರೇನು ಮಾಡ್ತೀರೀ ತಾನು ಪಡೆದು ಬಂದದು ಅಂತ ಕೈಲಾಗದವನು ಮಾಡಿದ ಹಾಗೇನೇ ತೆಪ್ಪಗೆ ಇರ್ತಾ ಇದ್ದೆ. ಭಟ್ಟರ ಕಥೆಯನ್ನು ಮುಂದುವರಿಸುವ ಮೊದಲು ಮತ್ತೊಂದು ಉಪಕಥೆಯನ್ನು ಇಲ್ಲಿ ತಮ್ಮ ಅನುಮತಿಯಿಂದ ಹೇಳಿಬಿಡಲೇ? ಕಿಟಕಿ ಪಕ್ಕ ಕೂತು ಆಚೆ ನೋಡುವುದನ್ನು ಬಿಟ್ಟರೆ ನನಗೆ ಬಸ್ಸಿನಲ್ಲಿ ನಿದ್ದೆ ಬರ್ತಿರಲಿಲ್ಲ ಅಂತ ಹೇಳಿದೆ ಅಲ್ಲವೇ? ಈ ನನ್ನ ವೀಕ್‌ನೆಸ್ಸನ್ನು ನನ್ನ ಸಂಗಡ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ನನ್ನ ಸಹೋದ್ಯೋಗಿಗಳು ಚೆನ್ನಾಗಿ ತಿಳಿದುಕೊಂಡಿದ್ದರು. ಗೋಪೀ ನನ್ನ ಸ್ಟಾಪ್ ಬಂದ ಕೂಡಲೇ ಎಬ್ಬಿಸೋ ಮರೀ ಅಂತ ನನಗೆ ಹೇಳಿ ಅವರುಗಳು ಆರಾಮವಾಗಿ ಸುಖನಿದ್ರೆಗೆ ಇಳಿದುಬಿಡ್ತಾ ಇದ್ದರು. ಈ ಅನುಭವವೇ ಒಂದು ರೋಚಕ ಕಥೆ! ಅದನ್ನ ಇನ್ಯಾವಾಗಲಾದರೂ ನಿಮಗೆ ಹೇಳ್ತೀನಿ... ಭಟ್ಟರ ಜತೆ ರೂಂ ಮೇಟ್ ಆದನಲ್ಲಾ ಅದರ ಕತೆ ಹೇಳುತ್ತಿದ್ದೆ ಅಲ್ಲವೇ? ಇಬ್ಬಿಬ್ಬರಿಗೆ ಒಂದು ರೂಮು ಅಂತ ನಮಗೆ ತರಬೇತಿ ನೀಡೋರು ಡಿಸೈಡಿಸಿದ್ದರು. ಯಾವ ಜನ್ಮದ ಪುಣ್ಯಫಲವೋ(?) ನನಗೆ ಜತೆಯಾಗಿ ಸಿಕ್ಕಿದ್ದು ಭಟ್ಟರು. ಭಟ್ಟರಿಗೂ ಸಹ ಬೆನ್ನಿನಲ್ಲಿ ಒಂದು ಪುಟ್ಟ ನರ - ಅದನ್ನ ಸುಮ್ಮನೆ ನೀವು ಒತ್ತಿದರೆ ಸಾಕು ನಿದ್ದೆ ನಿದ್ದೆ ಮತ್ತು ನಿದ್ದೆ! ಅದೂ ಹೇಗೇ ಅಂತೀರೀ?

ಮೊದಲ ಎರಡು ನಿಮಿಷ ಫ್ಯಾಕ್ಟರಿ ಸೈರನ್ ಶಬ್ದ ಹಾಗೆ ಘೋರಕೆ. ಅದೂ ಸ್ಪಷ್ಟವಾಗಿ ನೂರು ಡೆಸಿಬಲ್‌ನಲ್ಲಿ. ಎರಡು ನಿಮಿಷದ ನಂತರ ಐದು ಆಟೋರಿಕ್ಷಾಗಳು ರೇಸಿನಲ್ಲಿ ಹೋದರೆ ಹೇಗೆ ಶಬ್ದ ಬರುತ್ತೋ ಹಾಗೆ... ಇದು ಇಪ್ಪತ್ತೈದು ನಿಮಿಷ..

ಅದಾದ ನಂತರ ಒಟ್ಟಿಗೆ ಹದಿಮೂರು ರೇಸ್ ಮೋಟಾರ್ ಸೈಕಲ್ಲುಗಳು ನೂರು ಕಿಲೋಮೀಟರ್ ಸ್ಪೀಡಿನಲ್ಲಿ ಒಂದೊಂದನ್ನ ಒಂದೊಂದು ಛೇಸ್ ಮಾಡಿದ ಹಾಗೆ.. ಇದು ಮುಗಿದ ಕೂಡಲೇ ಗುಬ್ಬಿ ರಂಗಮಂದಿರದಲ್ಲಿ ಟ್ರಾನ್ಸ್‌ಫರ್ ಸೀನ್ ಆದ ಹಾಗೆ ನಿಮಗೆ ಏರೋಡ್ರೋಮಿನಲ್ಲಿರುವ ಅನುಭವ! ಮೂರು ಏರೋಪ್ಲೇನುಗಳು ನಿಮ್ಮ ಕಿಟಕಿ ಪಕ್ಕವೇ

ರೊಂಯ್ ಅಂತ ಹೋದರೆ ಅದು ಎಂಥಹ ಶಬ್ದ ಉಂಟುಮಾಡುತ್ತೋ ಹಾಗೆ! ಪ್ರತಿಯೊಂದೂ ಟೈಂ ಟೇಬಲ್ಲಿನ ಹಾಗೆ ನಡೆದ ನಂತರ ಅವರು ಟ್ರ್ಯಾಕ್ ಬದಲಾಯಿಸುತ್ತಾರೆ. ಅದು ಹೇಗೆ ಅಂದರೆ ಈಗ ರೈಲು ಓಡುವ ಹಾಗೆ. ರಾಜಧಾನಿ ಎಕ್ಸ್‌ಪ್ರೆಸ್ಸು ಆರುನೂರು ಕಿಲೋಮೀಟರು ವೇಗದಲ್ಲಿ ನಿಮ್ಮ ಕಿವಿ ಪಕ್ಕ ಹೋದರೆ ಹೇಗಿರುತ್ತೇ? ಅದೇ ಅನುಭವ ನಿಮಗೆ.

ಜೆಟ್ ಏರೋಪ್ಲೇನು, ರೈಲು, ಮೋಟಾರ್ ಸೈಕಲ್ಲು ಇವನ್ನೆಲ್ಲಾ ತೋರಿಸಿಬಿಟ್ಟು ಬರೀ ನಾನು ಹೈಕ್ಲಾಸ್ ಸೊಸೈಟಿಗೆ ಸೇರಿದವನು ಅಂತ ಸಿದ್ಧ ಮಾಡಿಕೊಳ್ಳಲು ಭಟ್ಟರು ಸಿದ್ಧರಿಲ್ಲ. ಸೋಷಿಯಲಿಸಮ್ಮಿನಲ್ಲಿ ಭಟ್ಟರಿಗೆ ನಂಬುಗೆ ಜಾಸ್ತಿ. ಅದರಿಂದ ಅವರು ಈಗ ಆರಿಸಿಕೊಳ್ಳುವುದು ಎತ್ತಿನ ಗಾಡಿ ಜೋರಾಗಿ ನೂರು ಮೈಲಿ ಸ್ಪೀಡಿನಲ್ಲಿ ನಿಮ್ಮೂರ ಹಳ್ಳಿ ಹಾದಿಯಲ್ಲಿ ಹೋದರೆ ಹೇಗೆ ಶಬ್ದ ಬರುತ್ತದೋ ಹಾಗೆ. ಅದಾದ ನಂತರ ಫ್ಲೋರ್ ಮಿಲ್ಲಿನ ಹಾಗೆ ನಾಲ್ಕು ಫ್ಲೋರ್ ಮಿಲ್ಲು ನೂರು ಪಲ್ಲ ಅಕ್ಕಿಯನ್ನು ಒಡಲಲ್ಲಿ ಸೇರಿಕೊಂಡು ಒಟ್ಟಿಗೆ ಹಿಟ್ಟು ಮಾಡಬೇಕಾದರೆ ಕೊಡುತ್ತಲ್ಲಾ ಆ ಶಬ್ದ! ಫ್ಲೋರ್ ಮಿಲ್ಲು ಮುಗಿದ ನಂತರ ನೂರು ಬಿ.ಎಂ.ಟಿ.ಸಿ. ಬಸ್ಸು ಒಟ್ಟಿಗೆ ಬ್ರೇಕ್ ಹಾಕಿದ ಶಬ್ದ ಅವರ ಮೂಗಿನಿಂದ ಅಲ್ಲ ಸಾರೀ ದೇಹದಿಂದ ಹೊರಬರುತ್ತೆ!

ಭಟ್ಟರು ಪ್ರಾಣಿಪ್ರಿಯರೂ ಹೌದು ಅನ್ನುವುದು ನಂತರ ನಿಮಗೆ ತಿಳೀತದೆ. ಸಾವಿರ ನಾಯಿಗಳು ಸೆಪ್ಟೆಂಬರ್ ತಿಂಗಳಿನಲ್ಲಿ ನಿಮ್ಮ ಗಲ್ಲಿಯಲ್ಲಿ ಕಚ್ಚಾಡಿದರೆ ಬರುವ ಶಬ್ದ, ಅದರ ನಂತರ ಮುನ್ನೂರ ಅರವತ್ತು ಅಲ್ಸೇಷಿಯನ್ ನಾಯಿಗಳು ಬೊಗಳುವ ಹಾಗೆ, ನೂರು ಘೂಳಿಗಳು ಗುಟುರು ಹಾಕುವ ಹಾಗೆ... ಇವುಗಳನ್ನು ಯಾವ ಆದಿಶೇಷನೂ ವರ್ಣಿಸುವ ಮಟ್ಟಕ್ಕೆ ಏರಿದಾನೆ ಎನ್ನುವ ಭರವಸೆ ನನಗಿಲ್ಲ! ಇಷ್ಟಾಗುವ ಹೊತ್ತಿಗೆ ಸರಿ ಸುಮಾರು ಬೆಳಗಿನ ಜಾವ ಐದು ಗಂಟೆ! ಅದು ಹೇಗೋ ಹತ್ತು ಸೆಕೆಂಡು ನಿದ್ದೆ ಹತ್ತಿದೆ ನಿಮಗೆ ಅನಿಸುವಷ್ಟರಲ್ಲಿ ಹಾವು ಬುಸುಗುಟ್ಟುವ, ಒಟ್ಟಿಗೇ ಹತ್ತು ಜನ ಕೆಮ್ಮುವ ಮತ್ತು ಪ್ರೆಷರ್ ಕುಕ್ಕರ್ ಕೂಗಿದ ಶಬ್ದ ಬಂದರೆ ಏನು ಮಾಡುವಿರಿ? ಎದ್ದು ಅದೇನೂಂತ ನೋಡುವಿರಿ ತಾನೇ? ಹಾಗೆ ನೋಡಿದರೆ ನಿಮಗೆ ಅದೇನು ಕಾಣಿಸಬೇಕು? ಭಟ್ಟರು ಬರೀ ಅಂಡರ್‌ವೇರು ತೊಟ್ಟು ಯೋಗ ಮಾಡ್ತಿದಾರೆ! ಇಡೀ ರಾತ್ರಿ ಮತ್ತೊಂದು ಮಾನವ ಪ್ರಾಣಿಗೆ ಹಿಂಸೆ ನೀಡಿ ಅವರ ನಿದ್ರೆ ಹಾಳುಗೆಡವಿ ರೌರವ ನರಕಕ್ಕೆ ಹೋಗುತ್ತೇನೆ ಎಂಬ ಪಾಪ ಭಯ ಲವಲೇಶವೂ ಇಲ್ಲದೇ ಶಬ್ದ ಹೊರಡಿಸಿಕೊಂಡು ಯೋಗ ಮಾಡುತ್ತಿದ್ದರೆ ನಿಮಗೆ ಏನು ಅನಿಸುತ್ತೆ? ಬೇರೆಯವರು ಆಗಿದ್ದರೆ ತೆಗೆದು ಭಟ್ಟರಿಗೆ ನಾಲ್ಕು ಕಪಾಳಕ್ಕೆ ಬಾರಿಸಿ ಒದ್ದು ಮಹಡಿ ಮೇಲಿನಿಂದ ಆಚೆಗೆ ಬಿಸಾಕಿ ಓಡುತ್ತಿದ್ದರೇನೋ! ಆದರೆ ನನ್ನ ಪ್ರಿನ್ಸಿಪಲ್ಲು ಲೈಫಿನಲ್ಲಿ ಬೇರೆಯವರಿಗೆ ಆದಷ್ಟೂ ತೊಂದರೆ ಕೊಡಬಾರದೂ ಅನ್ನೋದು, ಬೇರೆಯವರೂ ಅದನ್ನ ಪಾಲಿಸಲಿ ಅನ್ನುವುದು! ಆದರೆ ಇದು ಬರೀ ಒನ್ ವೇ ಟ್ರಾಫಿಕ್ಕು ಅಂತ ಅನಿಸಿದ್ದು ಕೊನೇ ದಿವಸ. ಕೊನೇ ದಿವಸವೂ ಘೋರಕೆ ಶಬ್ದದಲ್ಲಿ ನಿದ್ದೆ ಇಲ್ಲದೇ ಒದ್ದಾಡುತ್ತಿದ್ದಾಗ ಒಂದು ಯೋಚನೆ ಫಟಕ್ ಅಂತ ಮನಸ್ಸಿಗೆ ಬರಬೇಕೇ? ಅರ್ಧ ದಿವಸ ಅವರಿಗೆ ನಿದ್ದೆ ಮಾಡಿ, ನಿಮ್ಮ ಗೊರಕೆ ಸಹಿಸ್ಕೋತೀನಿ, ಇನ್ನರ್ಧ ರಾತ್ರಿ ನೀವು ಮಲಗಲೇ ಬಾರದು ಅಂತ ಹೇಳಬಹುದಾಗಿತ್ತಲ್ಲಾ ಅಂತ ಅನಿಸಿತು!

ಆದರೆ ಬುದ್ಧಿವಂತರಿಗೆ ಯಾವಾಗಲೂ ಜ್ಞಾನೋದಯ ತಡವಾಗೇ ಆಗೋದಂತೆ!

(ಆತ್ಮಕಥೆಯ ಒಂದು ಪುಟ ಇದು!)

ನವಚೇತನ ಟ್ರಸ್ಟ್
ಜೆ.ಸಿ. ರಸ್ತೆ, ಬೆಂಗಳೂರು

53, ಗಾಂಧಿಬಜಾರ್, ಬೆಂಗಳೂರು

ಪುಸ್ತಕ ಬಿಡುಗಡೆ ಸಮಾರಂಭ

ಬೆಸ್ಟ್ ಆಫ್ ಎಚ್.ಕೆ. ರಂಗನಾಥ್

(ಸಂಪಾದಕರು: ಬೇಲೂರು ರಾಮಮೂರ್ತಿ)

ಶಿಲಾಲೇಖನ ಸಾಹಸಗಳು

ಲೇಖಕರು : ಅಪರಂಜಿ ಶಿವು

ಮುಖ್ಯ ಅತಿಥಿಗಳು

ಪ್ರೊ. ಅ ರಾ ಮಿತ್ರ
ಶ್ರೀ ಶ್ರೀನಿವಾಸ ವೈದ್ಯ
ಶ್ರೀ ವಿ. ಶ್ರೀನಿವಾಸ ರಾಜು

ಉಪಸ್ಥಿತಿ
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
14-11-2009 ಶನಿವಾರ ಬೆಳಗ್ಗೆ 10.30

ಸ್ಥಳ : ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್
ನಂ.6, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು - 560 004

ದಯವಿಟ್ಟು ಬನ್ನಿ

9.30ಕ್ಕೆ ಉಪಾಹಾರ.

ತುಂತುರು

– ದಂಸಆ

- ನಾನು ಗಾಜಿನ ಮನೆಯಲ್ಲಿ ವಾಸ ಮಾಡುತ್ತಿದ್ದೇನೆ. ಏಕೆಂದರೆ ನನ್ನದು ಪಾರದರ್ಶಕ ಜೀವನ.
- Bad is never good until worse happens.
- ಕ್ಯೊಂಕಿ ಮೈ ಭೀ ಕಭೀ ಸಾಸ್ ಬನೂಂಗಿ ಚಿತ್ರ ಬರಲಿದೆಯೆ?
- ಉಡುಪು ನಮ್ಮ ಮನಸ್ಥಿತಿಯನ್ನು ಬದಲಿಸುವುದಿಲ್ಲ.
- Dream of all: We could be more than what we are.
- ನಿನಗೆ ಹಂದಿ ಜ್ವರ ಬರಲಿ ಎಂದೂ ಶಪಿಸುವ ಹಾಗಿಲ್ಲ. ಅದು ನನಗೇ ಹರಡಿದರೆ?
- Every celebrity is famous but everyone famous is not a celebrity.
- ಮಂಗನ ಮುಂದೆ ಕನ್ನಡಿ ಇಟ್ಟರೆ ಅದು ಒಬ್ಬ ಸ್ಪರ್ಧಾಳುವನ್ನು ನೋಡುತ್ತದೆ. ತನ್ನ ಪ್ರತಿಬಿಂಬವನ್ನಲ್ಲ.
- To get rich never risk your health.
- ನಿಮಗೆ ರೋಗ ಬಂದಿಲ್ಲ ಎಂದ ಮಾತ್ರಕ್ಕೆ ನೀವು ಆರೋಗ್ಯವಾಗಿದ್ದೀರಿ ಎಂದು ಭಾವಿಸಬೇಕಾಗಿಲ್ಲ.
- How peculiar that Mahatma Gandhi should be on the side of Krishna who made Arjuna fight and kill people.
- ಆರು ಮಂದಿ ಉತ್ತಮ ವೈದ್ಯರು: ಬಿಸಿಲು, ನೀರು. ವಿಶ್ರಾಂತಿ, ಗಾಳಿ, ವ್ಯಾಯಾಮ ಮತ್ತು ಆಹಾರ.
- ನೊ ಎಂಬ ಪದ ನನ್ನ ನಿಘಂಟಿನಲ್ಲೇ ಇಲ್ಲ. ಏಕೆಂದರೆ ನಾನೊಬ್ಬ ಯೆಸ್ ಮ್ಯಾನ್.
- Unless you make it happen it won't.
- ನಿಮಗೆ ಬೈಗಳೇ ಬರದಿದ್ದರೆ ಬದುಕಿನ ನಿರಾಶೆಗಳನ್ನು ಎದುರಿಸುವುದು ದುಸ್ತರವಾಗುತ್ತದೆ.
- ಎಲ್ಲರ ಕೊನೆಯ ಹಾಸಿಗೆ ನೆಲ.

ಹುರುಳಿ ಕಟ್ಟು.....

ನೊಂದವರು, ಬೆಂದವರು....

- ಎಚ್. ಗೋಪಾಲಕೃಷ್ಣ

ಕಳೆದ ತಿಂಗಳು ಕರ್ನಾಟಕದ ಉತ್ತರ ಭಾಗದಲ್ಲಿ ಪ್ರವಾಹ ಹಾಗೂ ಮಳೆಹಾನಿಯಿಂದ ಅಪಾರ ಸಾವು ನೋವಿನ ಜತೆಗೆ ಕೋಟ್ಯಾಂತರ ಮೌಲ್ಯದ ಸಾರ್ವಜನಿಕ ಆಸ್ತಿ ಹಾಳಾಯಿತಲ್ಲಾ-ಇದು ಯಾವುದೇ ಸಭ್ಯ ಸಮಾಜದ ಸಜ್ಜನನಿಗೆ ಹೃದಯ ಹಿಂಡುವಂತಹ ಅನುಭವ. ಇಂಥ ಸಮಯದಲ್ಲಿ ಸಮಾನ ಮನಸ್ಕರು ಸೇರಿ ನೊಂದವರಿಗೆ ಪರಿಹಾರ ಒದಗಿಸುವಲ್ಲಿ ಯಾವ ರೀತಿಯಲ್ಲಿ ನಾವು ಇತರರನ್ನು ಪ್ರೇರೇಪಿಸಬಹುದು ಮತ್ತು ವೈಯಕ್ತಿಕವಾಗಿ ನೊಂದವರ ನೆರವಿಗೆ ಹೇಗೆ ಸ್ಪಂದಿಸಬೇಕು ಎನ್ನುವುದರ ಬಗ್ಗೆ ಜನಾಭಿಪ್ರಾಯ ಮೂಡಿಸಲು ಉತ್ತಿಸುತ್ತೇವೆ. ಇಂಥ ಒಂದು ಸಭೆಯಲ್ಲಿ ಮೊನ್ನೆ ಭಾಗವಹಿಸಿದ್ದೆ. ಅಲ್ಲಿನ ಒಂದು ವಸ್ತು ಸ್ಥಿತಿಯ ವಿವರಣೆ ಮನಸನ್ನು ಕಲಕಿಬಿಟ್ಟಿತು.

ಹಳ್ಳಿಗಳ ಕಡೆ-ನಗರದಲ್ಲೂ ಸಹ ಕೆಳ ಮಧ್ಯಮವರ್ಗದ ಜನ ವಾಸಿಸುವ ಕಡೆಗಳಲ್ಲಿ ಮಳೆಯಿಂದ ರಕ್ಷಿಸಿಕೊಳ್ಳಲು ಒಂದು ಮಿತ ಖರ್ಚಿನ ಉಪಾಯ ಹುಡುಕಿಕೊಂಡಿದ್ದಾರೆ. ಅದೆಂದರೆ ತೆಳು ಪ್ಲಾಸ್ಟಿಕ್ ಹೊದಿಕೆಗಳನ್ನು ವಸ್ತುಗಳ ಮೇಲೆ ಹೊದಿಸಿ ಅದು ಒದ್ದೆಯಾಗದಂತೆ ರಕ್ಷಿಸುವುದು-ಸಣ್ಣ ಮಳೆಗೆ ಇದು ಪ್ರಯೋಜನವಾದರೂ ದೊಡ್ಡ ಮಳೆಗಳಿಗೆ ಪ್ಲಾಸ್ಟಿಕ್ ಹೊದಿಕೆಯೇ ಹಾರಿಹೋಗುತ್ತದೆ! ಉತ್ತರ ಕರ್ನಾಟಕದಲ್ಲಿ ಪ್ರವಾಹದ ಆರಂಭವಲ್ಲಿ-ಪ್ರವಾಹ ಉಕ್ಕಿ ಉಕ್ಕಿ ಹರಿಯುವ ಮುನ್ನ ಅಲ್ಲಿನ ರೈತರು ತಮ್ಮ ಬೆಳೆಯ ಚೀಲದಮೇಲೆ ಹೊದಿಸಲು ಪ್ಲಾಸ್ಟಿಕ್ ಹಾಳೆ ಕೊಳ್ಳಲು ಹೋದರಂತೆ. ಹದಿನೈದು ರೂಪಾಯಿಗೆ ಮೀಟರ್ ನ ಹಾಗೆ ಸಿಗುತ್ತಿದ್ದ ಪ್ಲಾಸ್ಟಿಕ್ ಹಾಳೆ ಇನ್ನೂರು ರೂಪಾಯಿಗೆ ಮಾರಾಟವಾಯಿತಂತೆ! ಡಿಮಾಂಡ್ ಜಾಸ್ತಿಇದ್ದು ಸಪ್ಲೈ ಕಡಿಮೆ ಇದ್ದರೆ ಈ ರೀತಿಯಾಗುತ್ತೆ ಅಂತ ಮಾರುಕಟ್ಟೆಯವರು ಹೇಳಿದರೂ ಬೆಂದ ಮನೆಯಲ್ಲಿ ಗಳ ಹಿರಿಯುವ ಮನೋಬಾವ ಇದು ಅಂತ ಅನಿಸುತ್ತೆ.

ಈ ಸಂಗತಿಯನ್ನು ಗೆಳೆಯರೊಬ್ಬರು ವಿವರಿಸುತ್ತಿದ್ದ ಹಾಗೆ ನನಗೆ ನೆನಪು ಕೆಲವು ತಿಂಗಳುಗಳ ಹಿಂದೆ ಓಡಿತು.

ಬದರಿ,ಹೃಷಿಕೇಶ,ಕೇದಾರ ಇಂಥಹ ಕಡೆ ಪ್ರವಾಸ ಹೋಗುವ ಜನರಿಗೆ ಒಂದು ಸಾಮಾನ್ಯ ಅನುಭವವೆಂದರೆ ಅಲ್ಲಿ ಲ್ಯಾಂಡ್ ಸ್ಲೈಡುಗಳು(ಈ ಪದಕ್ಕೆ ಭೂ ಕುಸಿತ-ಎನ್ನುತ್ತಾರೆ.ಕೆಲವುಸಲ ಬೆಟ್ಟಗಳೇ ಜಾರಿ ಬಂದು ರಸ್ತೆಯ ಅಡ್ಡಕ್ಕೆ ಜಾಗಬಿಡುಲ್ಲಾ ಅದೇನು ಮಾಡ್ಕೋತೀಯೋ ಮಾಡ್ಕೋ... ಅಂತ ನಿಂತುಬಿಡುತ್ತವೆ !) ಆಗುವುದು. ಪರ್ವತದ ನಡುವೆ ಹೋಗಬೇಕಾದರೆ ಸುತ್ತಮುತ್ತಲಿನಲ್ಲಿ ವಾಸ್ತವ್ಯಕ್ಕೆ ಅನುಕೂಲವಿಲ್ಲದಿರುವಾಗ ಹೀಗೆ ಭೂಕುಸಿತವಾದರೆ ಎಲ್ಲಿದ್ದವರು ಅಲ್ಲಿಯೇ

ನಿಂತುಬಿಡುತ್ತಾರೆ. ಪರ್ವತದ ಅಕಡೆ ಈಕಡೆ ಉದ್ದಕ್ಕೆ ಸಾಲುಸಾಲಾಗಿ ವಾಹನಗಳು ನಿಂತಿಬಿಡುತ್ತವೆ. ನೀರಿಗೆ ಆಹಾರಕ್ಕೆ ಶೌಚಾಲಯಗಳಿಗೆ ಜನ ಪಡುವ ಪಾಡು ನೋಡಿದರೆ ಯಾಕಾದರೂ ಬರುತ್ತೇವೋ ಈ ಜಾಗಗಳಿಗೆ,ತೆಪ್ಪಗೆ ಮನೆಯಲ್ಲಿಯೇ ಇರುವುದನ್ನು ಬಿಟ್ಟು ಅಂತ ಅನಿಸಿಬಿಡುತ್ತದೆ.

ನೆನಪು ಒಂದಕ್ಕೆ ಓಡಿತು ಅಂದೆ ಅಲ್ಲವೇ ? ಬದರಿ ಕೇದಾರ ಪ್ರವಾಸಕ್ಕೆ ಹೋಗಿದ್ದೆವು. ಹೃಷಿಕೇಶದಿಂದ ಬದರಿಗೆ 320 ಕಿಮೀ. 260 ಕಿ.ಮೀ. ಆದ ನಂತರ ಜೋಶೀಮಠ ಎನ್ನುವ ಸ್ಥಳ-ಸಂಜೆ ನಾಲ್ಕಕ್ಕೆ ಮೊದಲು ಜೋಶೀಮಠ ಸೇರಿಕೊಂಡರೆ ಅಲ್ಲಿಂದ ಬದರಿ ಕಡೆಗೆ ಪ್ರಯಾಣ ಮುಂದುವರೆಸಬಹುದು. ಸಂಜೆ ನಾಲ್ಕು ದಾಟಿದರೆ ಜೋಶೀಮಠದಲ್ಲಿಯೇ ರಾತ್ರಿ ಉಳಿಯಬೇಕು-ಹಾಗೆ ಅಲ್ಲಿನ ರೂಢಿ. ನಾವು ಗೊತ್ತುಮಾಡಿಕೊಂಡಿದ್ದ ವಾಹನ ನಾಲ್ಕರ ಮೊದಲು ಜೋಶೀಮಠ ತಲುಪಲು ವೇಗವಾಗಿಯೇ ಸಾಗಿತ್ತು. ಜೋಶೀಮಠ ಇನ್ನೂ ಮೂವತ್ತು ಕಿ.ಮೀ. ಇರಬೇಕಾದರೆ ಲೆಹರ್ ಎಂಬ ಸ್ಥಳದಲ್ಲಿ ಭೂಕುಸಿತವಾಗಿ ಇಡೀ ಸಂಚಾರ ವ್ಯವಸ್ಥೆ ಕುಸಿದಿತ್ತು. ಇದು ನಮಗೆ ತಿಳಿದಿದ್ದು ಭೂಕುಸಿತದಿಂದ ಇಪ್ಪತ್ತು ಕಿಮೀ ದೂರದ ಪೀಪಲ್ ಕೋಟಿ ಎಂಬಲ್ಲಿ.ರಸ್ತೆ ರಿಪೇರಿಗೆ ನಾಲ್ಕು ಗಂಟೆಯಾಗಬಹುದು ಎಂದಿದ್ದು ಎರಡೂವರೆ ದಿವಸದವರೆಗೂ ಎಳೆಯಿತು. ಹೆಂಗಸರು ಮಕ್ಕಳನ್ನು ಕರೆದೊಯ್ಯುತ್ತಿದ್ದ ವಾಹನಗಳು ನಡು ರಸ್ತೆಯಲ್ಲಿಯೇ ಬೀಡುಬಿಟ್ಟಿತ್ತು. ಪರ್ವತದ ಮಧ್ಯೆ ಆಹಾರ ಸಿಗುವುದಾದರೂ ಎಲ್ಲಿ? ಪೀಪಲ್ ಕೋಟಿಯಲ್ಲಿ ಒಂದು ಲಾಡ್ಜಿನಲ್ಲಿ ನಾವು ಉಳಿದುಕೊಂಡಿದ್ದರಿಂದ ನಮಗೆ ಅಂತಹ ಸಮಸ್ಯೆ ಗೊತ್ತೇ ಆಗಲಿಲ್ಲ. ಭೂಕುಸಿತದ.ಸ್ಥಳವನ್ನು ನೋಡಲು ಎರಡನೇ ದಿವಸ ಹೋದೆವು. ಸುಮಾರು ಎಂಟು ಕಿಮೀನಷ್ಟು ದೂರ ಸಾಲುಸಾಲಾಗಿ ನಿಂತಿರುವ ವಾಹನಗಳು.ಬಸ್ಸು, ಟ್ರಕ್ಕುಗಳ ಅಡಿಯಲ್ಲಿ ವಿಶ್ರಮಿಸುತ್ತಿರುವ ಹೆಂಗಸರು, ಮಕ್ಕಳು... ಸಮಯ ಕಳೆಯಲು ಇಸ್ಪೀಟು ಆಡುತ್ತಿರುವ ಗಂಡುಪ್ರಾಣಿಗಳು... ಇವನ್ನೆಲ್ಲಾ ನೋಡುತ್ತಾ ಹೋಗುತ್ತಿದ್ದಂತೆ ಒಂದು ಟ್ರಕ್ಕು ಪೀಪಲ್ ಕೋಟಿಯಿಂದ ಬಂದಿತು. ಇದೇ ಟ್ರಕ್ಕನ್ನು ಪೀಪಲ್ ಕೋಟಿಯಲ್ಲಿ ನೋಡಿದ್ದೆ. ಅಲ್ಲಿ ಟ್ರಕ್ಕಿನಲ್ಲಿನವರು ಇವರು ಗೊನೆ ಗೊನೆ ಬಾಳೆಹಣ್ಣು ದೊಡ್ಡ ದಬ್ಬಗಳಲ್ಲಿ ಬಿಸ್ಕೇಟು ಕೊಂಡಿದ್ದು ಗಮನಿಸಿದ್ದೆ. ಬಹುಶಃ ಬಾಳೆಹಣ್ಣು ಬಿಸ್ಕತ್ತು ಮಾರಿ ಹಣ ಬಾಚುತ್ತಾರೆ ಎಂದು ಭಾವಿಸಿದ್ದೆ.

ಟ್ರಕ್ಕಿನಿಂದ ಏಳೆಂಟು ಸರ್ದಾರ್ ಜೀಗಳು ಇಳಿದರು. ಬಾಳೆಹಣ್ಣು ಬಿಸ್ಕತ್ತು ಇಳಿಸಿಕೊಂಡರು. ಪೀಪಲ ಕೋಟಿಯಲ್ಲಿ ಬಾಳೆಹಣ್ಣಿಗೆ ಎರಡೂವರೆ ಕೊಟ್ಟು ನಾನೇ ಖರೀದಿಸಿದ್ದೆ. ಗೊನೆ ಗೊನೆ ತಂದವರು ಒಂದು ರೂಪಾಯಿಗೆ ಬಾಳೆಹಣ್ಣು ಮಾರಿದರು, ಬಿಸ್ಕತ್ತಿನ ಮೇಲೆ ಇದ್ದ ದರಕ್ಕೇ ಅದನ್ನೂ ಮಾರಿದರು. ತಂದಿದ್ದ ಸರಕು ಖಾಲಿಯಾಗುತ್ತಿದ್ದ ಹಾಗೇ ಟೆನ್ಷನ್ ಮತ್ ಕೀಜೀಯೇ, ಅಭೀ ಲಾವೂಂಗಾ ಅಂತ ಟ್ರಕ್ಕು ಹತ್ತಿದರು. ಎರಡು ದಿವಸದಿಂದ ಹೀಗೆ ಪ್ರತಿ ಎರಡು ಗಂಟೆಗೆ ಒಂದು ಟ್ರಿಪ್ ಬಂದು ಇಲ್ಲಿ ಸಿಕ್ಕಿ ಹಾಕಿಕೊಂಡಿದ್ದ ಜನರ ಮೂಲ ಅಗತ್ಯವನ್ನು ಇವರು ನೋಡಿಕೊಳ್ಳುತ್ತಿದ್ದಾರೆ ಅಂತ ಅಲ್ಲಿದ್ದವರು ತಿಳಿಸಿದರು. ಭೂಕುಸಿತದ ಜಾಗ ನೋಡಿಕೊಂಡು ವಾಪಸ್ಸು ಬರಬೇಕಾದರೆ ಟ್ರಕ್ಕಿನ ಒಬ್ಬರು ಸಿಕ್ಕಿದರು.

ಬೇರೆ ಬೇರೆ ಊರುಗಳಿಂದ ಬಂದು ಇಲ್ಲಿ ಸಿಕ್ಕಿಹಾಕಿಕೊಂಡಿರ್ತಾರೆ, ಪಾಪ ಹೀಗೆ ಭೂಮಿ ಕುಸಿಯುತ್ತೆ ಅವರಿಗೆ ಗೊತ್ತಿರೋಲ್ಲಾ. ಅಂತಹ ಸಮಯದಲ್ಲಿ ನಾವು ಕೆಲವರು ಸೇರಿ ಈ ರೀತಿಯ ಸೋಷಿಯಲ್ ವರ್ಕನ್ನ ಮಾಡ್ತೇವೆ... ಅಂದ.

ಪ್ರಾಫಿಟ್ ಏನಾದರೂ ಮಾಡ್ತೀರಾ? ಅಂದೆ. ಆತ ನಕ್ಕ ಸಾರ್ ಜನ ಸಂಕಷ್ಟದಲ್ಲಿರಬೇಕಾದರೆ ಪ್ರಾಫಿಟ್ ಯೋಚನೆ ಮಾಡುವವರು ಮನುಷ್ಯರೇ? ಅವರೂ ನಮ್ಮ ಹಾಗೇ ಅಲ್ಲವಾ? ಇಂಥ ಜಾಗದಲ್ಲಿ ಜನ ಹೀಗೆ ಹೆಚ್ಚಿನ ಬೆಲೆಗೆ ಹಣ್ಣು ಮಾರಿದರು - ನಮ್ಮ ವೀಕ್‌ನೆಸ್ ನೋಡಿಕೊಂಡು ಅಂತ ಜನ ಊರುಗಳಿಗೆ ಹೋದಮೇಲೇ ಹೇಳಬಾರದು ಸಾರ್. ನಮ್ಮ ಊರಿನ ಹೆಸರು ಕೆಡಬಾರದು.... ಅಂದ !

ಹೌದಲ್ಲಾ? ಊರಿನ ಹೆಸರು ಕೆಡಬಾರದು ಅಂತ ಕಾಳಜಿ ಯಾಕೆ ನಮ್ಮವರಿಗೆ ಇಲ್ಲ ಅನಿಸಿತು. ಕೂಡಲೇ ಉತ್ತರವೂ ಹೊಳೆಯಿತು-ವ್ಯಾಪಾರಸ್ಥರು ಯಾರೂ ಸ್ಥಳೀಯರಲ್ಲ - ಅದರಿಂದ ನೊಂದವರೂ ಅವರಲ್ಲ, ಬೆಂದವರೂ ಅವರಲ್ಲ. ಬೆಂದ ಮನೆಯಲ್ಲಿ ಹಿರಿದದ್ದೇ ಬಂತು!

ತಿಳಿಯಿತು

ಅಮೆರಿಕದ ಒಬ್ಬ ಭಾರೀ ಶ್ರೀಮಂತ ಕೃಷಿಕ ಪಂಜಾಬಿಗೆ ಬಂದ. ತನ್ನ ಭೂಮಿಯನ್ನು ಉಳುತ್ತಿದ್ದ ಸರ್ದಾರ್ಜಿ ರೈತನೊಬ್ಬ ಅವನ ಕಣ್ಣಿಗೆ ಬಿದ್ದ. ಅವನನ್ನು ಮಾತನಾಡಿಸಬೇಕೆಂದು ಕಾರಿನಿಂದ ಇಳಿದು ಹಾಯ್! ನಿನ್ನ ಜಮೀನು ಎಷ್ಟು ದೊಡ್ಡದು? ಎಂದು ಕೇಳಿದ.

ನೋಡಿ ಸ್ವಾಮಿ ಈ ರಸ್ತೆಯಿಂದ ಹಿಡಿದು ಆ ನದಿಯವರೆಗೆ ಹರಡಿದೆ ಎಂದು ಹೆಮ್ಮೆಯಿಂದ ಸರ್ದಾರ್ಜಿ ವಿವರಿಸಿದ.

ಇಷ್ಟು ಸಣ್ಣ ಭೂಮಿಯಲ್ಲಿ ಕೃಷಿ ಮಾಡಿದರೆ ಏನು ಲಾಭ ಸಿಗಬಹುದು ಎಂದು ಸರ್ದಾರ್ಜಿಯನ್ನ ಕೇಳಬೇಕೆಂದು ಅಮೆರಿಕದವ ಯೋಚಿಸುತ್ತಿದ್ದಂತೆ ಸರ್ದಾರ್ಜಿ ತಮ್ಮ ಭೂಮಿ ಎಷ್ಟು ದೊಡ್ಡದಿದೆ ಎಂದು ಕೇಳಬಹುದೆ? ಎಂದು ವಿನೀತನಾಗಿ ನುಡಿದ.

ಖುಷಿಯಿಂದ ಅಮೆರಿಕದವ ವಿವರಿಸತೊಡಗಿದ: ನೋಡು, ನಾನು ಬೆಳಿಗ್ಗೆ ನನ್ನ ಟ್ರಾಕ್ಟರ್ ಏರಿ ಹೊರಟರೆ ದಕ್ಷಿಣ ತುದಿ ಮುಟ್ಟಿದಾಗ ಊಟದ ಸಮಯವಾಗಿರುತ್ತದೆ. ಮತ್ತೆ ಮನೆಗೆ ವಾಪಸಾಗುವ ಹೊತ್ತಿಗೆ ರಾತ್ರಿ ಆಗತೊಡಗಿರುತ್ತದೆ. ತಿಳಿಯಿತೆ?

ತಿಳಿಯಿತು ಸ್ವಾಮಿ, ನನ್ನ ಹತ್ತಿರ ಸಹ ಅಂತಹ ಟ್ರಾಕ್ಟರ್ ಇತ್ತು ಒಂದಾನೊಂದು ಕಾಲದಲ್ಲಿ ಎಂದ ಸರ್ದಾರ್ಜಿ.

ಶಿವಪ್ಪ ಕಾಯೋ ತಂದೆಯೇ...

- ಹ.ನ. ವೇಣು

ಶ್ರೀರ್ಘರೂಪರಿಗೆ ಭೂಲೋಕದಿಂದ ನಿಮ್ಮ ಪುತ್ರ ಗಣೇಶ ಮಾಡುವ ಅನೇಕ ನಮಸ್ಕಾರಗಳು.

ಈಗ ನಾನು ಬರೆಯುವುದು ಏನೆಂದರೆ ಇಲ್ಲಿ ನನಗೆ ಬಹಳ ಕಷ್ಟವಾಗುತ್ತಿದೆ. ಇಲ್ಲಿ ನನ್ನ ಒಂದು ಕಡೆ ಕೂಡಿಹಾಕಿರುತ್ತಾರೆ. ರಾತ್ರಿ ಹೊತ್ತು ಬೀಗ ಜಡೀತಾರೆ. ಹೊರಗೆ ಹೋಗೊಕ್ಕೆ ಬಿಡೋಲ್ಲ. ಎರಡು ಹೊತ್ತು ಊಟಾ ಏನೋ ಹಾಕ್ತಾರೆ, ಆದರೆ ನನಗೆ ಬೇಕಾದ್ದು ಕೊಡೋಲ್ಲ. ಹಿಂಸೆ ಆಗ್ತಿದೆ. ನನಗೆ ಬೇಕಾದ್ದ ಬಾಳೆ ಎಲೇ ದಿಂಡನ್ನ ನನಗೆ ಕೊಡದೇ ಕಂಬಕ್ಕೆ ಕಟ್ತಾರೆ, ಪ್ರಿಯವಾದ ಮಾವಿನಸೊಪ್ಪನ್ನು ನಾನು ಕಾಣೋ ತರಹ ಬಾಗಿಲಿಗೆ ಕಟ್ತಾರೆ. ಅದನ್ನು ನೋಡಿದರೆ ಬಾಯಿನಲ್ಲಿ ನೀರೂರತ್ತೆ.

ನನಗೆ ಲೇಟಾಗಿ ಏಳೋ ಅಭ್ಯಾಸ ಇತ್ತು. ಈಗ ಬೆಳಗ್ಗೆ 4/5 ಘಂಟೇಗೆ ಎಬ್ಬಿಸಿ ಕೊರೆಯುವ ನೀರಿನಿಂದ ಸ್ನಾನ ಮಾಡಿಸ್ತಾರೆ, ಛಳಿಗಾಲ, ಮಳೆಗಾಲ, ಮಾಘಮಾಸದಲ್ಲಿ ಕೂಡಾ ತಣ್ಣೀರೆ. ಮಾಡಿಸುವ ಅಂಕಲ್ ಮಾತ್ರ ಬಿಸಿನೀರಿನ ಸ್ನಾನ ಮಾಡಿ ಬಂದಿರ್ತಾರೆ. ಅವರಿಗೆ ಕರುಣೇನೇ ಇಲ್ಲಾ ಅನ್ನಿಸುತ್ತೆ. ಒರೆಸಿ ವಸ್ತ್ರ ಹೊದಿಸುತ್ತಾರೆ. ತಣ್ಣೀರು ಸ್ನಾನ ಎಷ್ಟು ಕಷ್ಟ ಅಂತ ನಿನಗೆ ಹೇಗೆ ಗೊತ್ತು ಡ್ಯಾಡ್. ಏಕೆಂದರೆ ನೀನು ನಿನ್ನ ತಲೆ ಮೇಲಿರೋ ಗಂಗೆ ನಿನ್ನ ಮೈಮೇಲೆ ಬೀಳದೇ ಪಕ್ಕಕ್ಕೆ ಬೀಳೋ ಹಾಗೆ ಅಡ್ಜಸ್ಟ್ ಮಾಡಿಕೊಂಡಿದ್ದೀಯ.

ಸದ್ಯ ಮುಗೀತಪ್ಪ ಎಂದರೆ ನನ್ನ ಮೇಲೆ ಹಾಲು ಮೊಸರು ಹಾಕ್ತಾರೆ. ನಾನೇನು ಬೆಕ್ಕೇ ಹಾಲು ಮೊಸರು ಕುಡಿಯೋದಿಕ್ಕೆ? ಆಮೇಲೆ ಜೇನುತುಪ್ಪ (ನಾನು ಕರಡೀನೇ?), ಸಕ್ಕರೆ (ನಾನು ಇರುವೇನೇ, ನೊಣವೇ? ನನಗೇ ಅನುಮಾನ ಬರ್ತಿದೆ), ಬಾಳೇಹಣ್ಣು ಚೂರು ತೋರಿಸ್ತಾರೆ (ಯಾವ ಮೂಲೆಗೆ ಆ ಚೂರು?). ಪುನಃ ತಣ್ಣೀರು ಸ್ನಾನ. ಛಳೀಗೆ ನಡುಕ. ಮೈಯಲ್ಲಾ ಜಿಡ್ಡು, ಹೋಗಲಿ, ಆಮೇಲೆ ಸೀಗೇಕಾಯಿ ಹಾಕ್ತಾರಾ, ಇಲ್ಲ. ಇಷ್ಟೂ ಅವರಿಗೆ ತಿಳಿಯದೆ?

ದಿನಾ ನನಗಿಷ್ಟವಾದ ತೆಂಗಿನಕಾಯಿ ಒಡೆದು, ನನಗೆ ಬರೀ ತೋರಿಸಿ ಒಂದು ಹೋಳನ್ನು ತಂದವರಿಗೆ ಕೊಟ್ಟು, ಇನ್ನೊಂದನ್ನು ಅಂಕಲ್ ತಮ್ಮ ಮನೇಗೆ ತೊಗೊಂಡು ಹೋಗ್ತಾರೆ. ನನಗೆ ಕರಟವೂ ಇಲ್ಲ. ಅವರಿಗೆ ಕೋಲೆಸ್ಟ್ರಾಲ್ ಜಾಸ್ತಿ ಆಗೊಲ್ವೆ ಡ್ಯಾಡ್? ಸಾಲದ್ದಕ್ಕೆ ಘಂಟೆ ಶಬ್ದ ಬೇರೆ, ಕಿವಿ ಚಿಟ್ಟು ಹಿಡಿದಿದೆ. ಜೊತೆಗೆ ಪಟಾಕಿ ಶಬ್ದ. ನನಗೆ ಸ್ಟ್ರಾಂಗ್ ಸ್ಮೆಲ್ ಇರೋ ಹೂವೇರಿಸುತ್ತಾರೆ. ಅದರ ವಾಸನೆಯಿಂದ (ಅದು ಅವರಿಗೆ ಸುವಾಸನೆ ಅಂತೆ) ನನಗೆ ತಲೆನೋವು ಬರುತ್ತೆ. ಧನ್ವಂತರೀಗೆ ಈ ಬಗ್ಗೆ ಮೇಲ್ ಮಾಡ್ದೆ, ಬೌನ್ಸ್

ಆಯಿತು. ಮೊಬೈಲ್ ನಂಬರ್ ಗೊತ್ತಿಲ್ಲ, ತಿಳಿಸು. ಅವರಿಗೆ ಹೇಳಿ ಭಸ್ಮ, ಲೇಪ, ತೈಲ ನಾರದರ ಮೂಲಕ ಕಳಿಸು.

ಮಧ್ಯಾನ್ಹ ಸ್ವಲ್ಪ ಹೊತ್ತು ರೆಸ್ಟು. ಮೆಡಿಟೇಶನ್ ಮಾಡ್ತೀನಿ. ಜೀಗ ಜಡಿದು ಹೋಗ್ತಾರೆ. ಜನ ಕಂಬೀಲಿ ಇಣಿಕಿ ನೋಡಿ ಇದೀನೋ ಇಲ್ವೋ ಅಂತ ವಾಚ್ ಮಾಡ್ತಾರೆ. ಸದ್ಯ ಇನ್ನೂ ಸೆಕ್ಯೂರಿಟಿ ಸ್ಟಾಫ್ ಹಾಕಿಲ್ಲ. ಅದೂ ಬರಬಹುದು. ಹೀಗಾಗಿ ನಾನು ನನ್ನ ಬ್ರದರ್‌ನ ನೋಡೋಕೆ ಆಗ್ತಿಲ್ಲ. ಬೋರ್ ಆಗ್ತಿದೆ. ಒಂಟಿ ಆಗಿಹೋದೆ ಡ್ಯಾಡ್. ನಾನೇನು ತಪ್ಪು ಮಾಡೀದೀನಿ ಅಂತ ಗೊತ್ತಾಗುತ್ತಿಲ್ಲ.

ದಿನಾ ತಣ್ಣೀರು ಸ್ನಾನ ಅಲ್ಲದೇ ವರ್ಷಕ್ಕೊಮ್ಮೆ ಕೆರೇಲೋ, ನದೀಲೊ, ಹೊಂಡದಲ್ಲೋ ಮುಳುಗುಸ್ತಾರೆ, ಸಾಲದಕ್ಕೆ ಸೀ ಯು, ಮುಂದಿನ ವರ್ಷ ಬಾ ಅಂತ ಕರೀತಾರೆ. ಸದ್ಯಕ್ಕೆ ಒಳ್ಳೇ ನೀರಿನಲ್ಲಿ ಮುಳುಗಿಸುತ್ತಿದ್ದಾರೆ. ಮುಂದೆ ರೀಸೈಕಲ್ಡ್ ನೀರಿನಲ್ಲಿ ಹಾಕ್ತಾರಾಂತೆ.

ಛಿಹಾಯಿಸೊಕ್ಕೂ ಶುರು ಮಾಡಿದಾರೆ. ಲೇವಡಿ ಮಾಡ್ತಿದಾರೆ ನನ್ನ ಹೊಟ್ಟೆ ಡುಬ್ಬಣ್ಣ, ತಾವರೇ ಎಲೆ ಕಿವಿಯೋನು ಅಂತ. ನನ್ನ ಹೊಟ್ಟೆ ದಪ್ಪಗಿದ್ದರೆ ಅವರಿಗೇನು. ಹೊಟ್ಟೇಗಂತೂ ತಣ್ಣೀರಿನ ಬಟ್ಟೆಯೇ ಗತಿ. ನನ್ನ ವಿಕಾರ ಮಾಡೋಕ್ಕೆ ಶುರು ಮಾಡಿದಾರೆ. ನನ್ನ ಒಂದೊಂದೇ ಭಾಗ ತೊಗೊಂಡು ಅದೇ ನಾನು ಅಂತಾರೆ. ಹೊಟ್ಟೇನೇ ತೋರಿಸಿ ಅದೇ ನಾನು ಅಂತ, ಸೊಂಡಿಲು ಮಾತ್ರ ತೋರಿಸೋದು ಬಹಳ ಜಾಸ್ತಿ ಆಗಿದೆ. ಅದೇ ನನ್ನ ಟ್ರೇಡ್ ಮಾರ್ಕ್ ಆಗಿದೆ. ಮದುವೆ ಮುಂಜಿ ಕಾರ್ಡ್ ಮೇಲೆ ನನ್ನ ಸೊಂಡಿಲು ಮಾತ್ರ ತೋರಿಸಿ ಅದೇ ನಾನು ಅಂತ ಹೇಳ್ತಾರೆ. ನನ್ ಐಡೆಂಟಿಟಿ ಹೊರಟುಹೋಗಿದೆ ಡ್ಯಾಡ್. ದಪ್ಪ ಹೊಟ್ಟೆ ಇರೋ ಅಂಕಲ್‌ಗಳನ್ನು ನನಗೆ ಹೋಲಿಸುತ್ತಾರೆ. ಜೀವನಾನೇ ಬೇಡಾ ಅನ್ನಿಸಿಬಿಟ್ಟಿದೆ. ಮೋಕ್ಷ ಯಾವಾಗಾ ಪಿತಾಜಿ?

ನನ್ನ ದಪ್ಪಾನ ಹೈಲೈಟ್ ಮಾಡೋಕ್ಕೆ ಒಂದು ಪುಟ್ಟ ಇಲಿಮರಿಯನ್ನು ನನ್ನ ಜೊತೆ ಇಟ್ಟಿದಾರೆ. ನನಗೆ ಕಂಪೆನಿ ಕೊಡೋಕ್ಕೇಂತ. ನನ್ನ ವಾಹನ ಅಂತೆ ಅದು. ಆನೆ, ನೀರಾನೆ, ಘೇಂಡಾ ಪ್ರಾಣಿ ಇರಲ್ಲಿಲ್ವೇ ಸಾಂಕೇತಿಕ ವಾಹನಕ್ಕಾಗಿ? ಹೋಗ್ಲಿ, ಆ ಇಲಿಮರಿಗೂ ಹೊಟ್ಟೆಗೆ ಏನೂ ಹಾಕ್ತಾ ಇಲ್ಲ. ಕೆಳಗೆ ಬಿದ್ದ ಅಕ್ಕಿ ಕಾಳು ತಿನ್ನಬೇಕು ಅದು ಪಾಪ. ಅದೂ ಅರಿಶಿನ ಹಚ್ಚಿದ ಅಕ್ಕಿ. ಅರಿಶಿನ ಸ್ವಲ್ಪ ತಿಂದರೆ ಔಷಧ. ತುಂಬಾ ದಿನ ತಿಂದರೆ ಇಲಿಗೆ ಏನಾಗಬಹುದು ಹೇಳಿ.

ಡ್ಯಾಡ್, ಹೀಗೇ ಬರೀತಾ ಹೋದರೆ ಮಹಾಭಾರತಕ್ಕಿಂತಾ ದೊಡ್ಡ ಕಥೆ ಆಗಬಹುದು. ಆಗ ವ್ಯಾಸ ಮಹರ್ಷಿಗಳಿಗೆ ಬೇಜಾರಾಗಬಹುದು. ಸೋ ಸಾಕು.

ಈಗ ನನಗೆ ಮುಕ್ತಿ ಬೇಕು. ನನಗೆ ಪ್ರಥಮ ಪೂಜೆ ಬೇಡ. ನಿನ್ನ ಲೋಕಕ್ಕೆ ಕರೆಸಿಕೋ ಬೇಗ. ಯಾರಿಗೆ ಎಷ್ಟು ಟೇಬಲ್ ಕೆಳಗೆ ಕೊಡಬೇಕೊ ಕೊಟ್ಟು ನನ್ನ ಬಿಡುಗಡೆ ಮಾಡು ತಂದೆ. ಅದು ಲೇಟಾಗುವಂತಿದ್ದರೆ ಯಾವುದಾದರೂ ಪೂರ್ಣ ಫಲ ಕೊಡುವ ಪೂಜೆ ಇದ್ದರೆ

ಪೇಟು. ಇಲ್ಲಿ ಯಾವುದೊ ಸತ್ಯನಾರಾಯಣ ಪೂಜೆ ಅಂತೆ. ಒಂದು ಗುಡೀಲಿ 6 ಮಾಸದವರೆಗೂ ಬುಕ್ ಆಗಿದೆ ಅಂತೆ. 2000/- ರೂ ಇಲ್ಲಿನ ಹಣ. ರಿಸೆಶನ್ ಆದಮೇಲೆ ನಿಮ್ಮ ಕರೆನ್ಸಿಲಿ ಎಷ್ಟಾಗುತ್ತೋ ಗೊತ್ತಿಲ್ಲ. ಅದನ್ನು ನಾನು ಮಾಡಬೇಕಾದರೆ ಆ ಹಣವನ್ನು ವೆಸ್ಟರನ್ ಯೂನಿಯನ್ ಮೂಲಕ ಕಳಿಸು.

ಅಮ್ಮನಿಗೆ ನೆನಪುಗಳು. ಅಮ್ಮ ಮಾಡಿದ ಕಡುಬು ತಿಂದು ಶತಮಾನಗಳು ಆದಂತಿದೆ. ಅಲ್ಲಿಗೆ ಬರಲು ಹಾತೊರೆಯುತ್ತಿದ್ದೇನೆ.

ನಮಸ್ಕಾರಗಳು.

ನಿಮ್ಮ ಪ್ರೀತಿಯ ಪುತ್ರ

ಗಣಪತಿ ಅಲಿಯಾಸ್ ಗಣೇಶ.

ಡಿಕ್ಟೇಷನ್ ತೆಗೆದುಕೊಂಡವರು: ಹ.ನ. ವೇಣು

(ಈ ಖಾಸಗಿ ಪತ್ರ ಹೇಗೆ ಲೀಕ್ ಆಯಿತು? ಎಂಬುದು ಇನ್ನೂ ತಿಳಿದು ಬಂದಿಲ್ಲ.)

ಕಣ್ಣು ಮುಚ್ಚಿ ಕುಳಿತಾಗ...

- ಆನಂದ

ವೈದ್ಯರ ಬಳಿ ಹೋದಾಗ ಸಮಯದ ಅಭಾವ ಇರುತ್ತದೆ - ರೋಗಿಗಲ್ಲದಿದ್ದರೂ ವೈದ್ಯರಿಗೆ. ಏಕೆಂದರೆ ಒಂದು ನಿಗದಿತ ಅವಧಿಯಲ್ಲಿ ಅದೆಷ್ಟು ಮಂದಿಯ ನಾಡಿ ಅವರು ನೋಡಬೇಕು; ಎದೆ ಬಡಿತ ಆಲಿಸಬೇಕು; ರಕ್ತದ ಒತ್ತಡ ಅಳೆಯಬೇಕು; ಆ ಎಂದು ಬಾಯಿ ತೆರೆಯಿಸಬೇಕು; ಟೆಂಪರೇಚರ್ ನೋಡಬೇಕು; ಬಾಯಿನೊಳಗೆ ದೀಪ ಬಿಡಬೇಕು... ಹೀಗೆ ಒಂದೇ ಎರಡೇ. ರೋಗಿಗೆ ಎಷ್ಟೇ ಟೈಂ ಇದ್ದರೂ ವೈದ್ಯರಿಗೆ ಇರದು. ಆದುದರಿಂದ ಅನೇಕ ವೈದ್ಯರು ರೋಗಿ ತನ್ನ ರೋಗ ಲಕ್ಷಣಗಳನ್ನು ವಿವರಿಸುವ ಮುನ್ನವೇ ಔಷಧಿ ಚೀಟಿ ಬರೆದು ಸಾಗಿಹಾಕಿ ನೆಕ್ಸ್ಟ್ ಎಂದು ಇನ್ನೊಬ್ಬರನ್ನು ಒಳಗೆ ಕರೆದಿರುತ್ತಾರೆ.

ಆದರೆ ಕಣ್ಣಾಸ್ಪತ್ರೆಯಲ್ಲಿ ಹಾಗಲ್ಲ. ಇಲ್ಲಿ ಕಾಲ ಹೆಪ್ಪುಗಟ್ಟಿ ನಿಂತಿರುವಂತೆ ತೋರುತ್ತದೆ. ಸಿಟಿ ಬಸ್‌ಗೆ ಕಾಯುತ್ತಿರುವಂತೆ ಅನಿಸುತ್ತದೆ. ಪಾಮರನಾಗಲಿ ಪ್ರಧಾನಿಯಾಗಲಿ ಇಲ್ಲಿ ಕಾಯಲೇಬೇಕು. ಆದರೆ ವೈದ್ಯರಿಗಾಗಲ್ಲ. ತಪಾಸಣೆಯ ಅವಧಿಯೇ ಹಾಗೆ. ಕಾಯುವುದು ಅನಿವಾರ್ಯ.

ಎಲ್ಲಿ ಸರ್ ಎಂದ ನರ್ಸಮ್ಮ - ಆಕೆ ಯುವತಿಯಾಗಿದ್ದರೂ ನರ್ಸಮ್ಮ ತಾನೆ? ಕಣ್ಣಿನೊಳಗೆ 2-3 ಡ್ರಾಪ್ ಔಷಧಿ ಹಾಕಿ ಈಗ ಕಣ್ಣು ಮುಚ್ಚಿ ಸರ್ ಎಂದು ಯಾವುದೇ ಮುಲಾಜಿಲ್ಲದೆ, ಅನುಕಂಪ ತೋರದೆ ಹೇಳಿ ಇನ್ನೊಂದು ಜತೆ ಕಣ್ಣು ಮುಚ್ಚಿಸಲು ಹೊರಟುತ್ತಾಳೆ. ಆಗ ನೀವು ಕಣ್ಣು ಮುಚ್ಚುತ್ತೀರಿ. ಛೆ! ಬಿದ್ದು ಅನ್ನಿ. ನೀವು ಕಣ್ಣು ಮುಚ್ಚಿ ಕೂರುತ್ತೀರಿ. ಕೂಡಬೇಕು.

ಮುಂದೇನು. ಪುಸ್ತಕ ಓದುವಂತಿಲ್ಲ, ಸುತ್ತಮುತ್ತಲು ಇರಬಹುದಾದ ಚೆಲುವನ್ನು ಆರಾಧಿಸುವಂತಿಲ್ಲ; ಕದ್ದು ಮುಚ್ಚಿ ನೋಡುವಂತೆಯೂ ಇಲ್ಲ. ನೀವು ಯಾವುದಾದರೂ ಶ್ರೀಶ್ರೀಗಳ ಶಿಷ್ಯರಾಗಿದ್ದರೆ ಅವರು ಕಲಿಸಿರುವ ಮೆಡಿಟೇಷನ್ ಅಭ್ಯಾಸಗಳನ್ನು ಈಗ ರಿವೈಸ್ ಮಾಡಲು ಒಂದು ಅವಕಾಶ ಅನಾಯಾಸವಾಗಿ ದೊರೆತಂತಾಗುತ್ತದೆ - ಟ್ರಾಫಿಕ್ ಜಾಮ್‌ನಲ್ಲಿ ರೆಸ್ಟ್ ತಗೊಂಡ ಹಾಗೆ. ಆದರೆ ನೆಲದ ಮೇಲೆ ಚಕ್ಕಲಮಕ್ಕಲ ಹಾಕಿ ಕೂರುವಂತಿಲ್ಲ. ಕುರ್ಚಿಯ ಮೇಲೆ ಕುಳಿತು ಪ್ರಾಣಾಯಾಮದಲ್ಲಿ ತೊಡಗಬಹುದು. ದೇಶದ ಬಗ್ಗೆ ಚಿಂತಿಸುವದಾದರೆ ಈ ರಾಜಕಾರಣಿಗಳಿಂದ ಬಿಡುಗಡೆ ಹೇಗೆ? ಎಂದು? ಎಂದು ಯೋಚಿಸಲು ತೊಡಗಬಹುದು. ಮನೆಯ ಬಗ್ಗೆ ಚಿಂತೆ ಮಾಡುವದಾದರೆ ಕಾಡುವ ಸಮಸ್ಯೆಗೆ ಪರಿಹಾರ ಏನಿರಬಹುದು ಎಂದು ಶಾಂತಿಯುತವಾಗಿ ಯೋಚಿಸಬಹುದು. ಬೇರೆ ಯಾವ ಕ್ಲಿನಿಕ್‌ನಲ್ಲಿ ಇಂತಹ ಸೌಲಭ್ಯ ಸಿಗುತ್ತದೆ ಹೇಳಿ?

ಹೀಗೆ ಒಂದು ಅರ್ಧ ತಾಸು ಕಳೆದ ಮೇಲೆ ಅದು ನಿಮಗೆ ಅರ್ಧ ದಿನವಾಗಿ ಕಂಡಿದ್ದರೆ

ಅಥವಾ ಕಾಡಿದ್ದರೆ ಐನ್‌ಸ್ಟೈನ್‌ನ ಥಿಯರಿ ಆಫ್ ರಿಲೆಟಿವಿಟಿ ನೆನಪಿಸಿಕೊಳ್ಳಿ - ಚಾರ್ಟ್ ಹಿಡಿದ ನರ್ಸಮ್ಮ ನಿಮ್ಮ ಮುಂದೆ ಪ್ರತ್ಯಕ್ಷಳಾಗಿ ಕಣ್ಣು ಬಿಡಿ ಸಾರ್ ಎಂದು ಹೇಳಿ ನಿಮ್ಮ ಕಣ್ಣಿಗೆ ಬೆಳಕು ಬೀರಿ ನೋಡುತ್ತಾಳೆ. ನಿಮ್ಮ ಅಂತರಂಗವನ್ನೇ ಅವಳು ಕೆದಕುತ್ತಿರಬಹುದು ಎಂದು ನಿಮಗೆ ಅನಿಸಬಹುದು. ಆದರೆ ಅವಳಿಗೆ ನಿಮ್ಮ ಒಳ ಮನಸ್ಸನ್ನು ಅರಿಯುವ ಕುತೂಹಲ ಏನೂ ಇರದು ಬಿಡಿ. ನಿಮ್ಮ ಕಣ್ಣಿನ ಗುಡ್ಡೆ ಊದಿದೆಯೋ ಇಲ್ಲವೇ ಎಂದು ಅವಲೋಕಿಸುತ್ತಾಳೆ ಅಷ್ಟೆ. ಊದಿಲ್ಲದಿದ್ದರೆ ಇನ್ನೊಂದೆರಡು ಡ್ರಾಪ್ಸ್ ಔಷಧಿ ಕಣ್ಣಿಗೆ ಬಿಟ್ಟು ಕಣ್ಣು ಮುಚ್ಚಿ ಕೂರುವುದನ್ನು ಕಂಟಿನ್ಯೂ ಮಾಡಿ ಸಾರ್ ಎಂದು ಹೇಳಿ ಹೋಗುತ್ತಾಳೆ. ನೀವು ಈಗ ನಿಮ್ಮ ಚಿಂತನೆಗೆ / ಚಿಂತೆಗೆ/ಮೆಡಿಟೇಷನ್‌ಗೆ ಮರಳಬಹುದು.

ಮತ್ತೆ ಎಷ್ಟೋ ತಾಸಾಯಿತು ಎಂದು ನಿಮಗೆ ಅನಿಸುತ್ತಿರುವಾಗ ನಿಮ್ಮ ಹೆಸರನ್ನು ಯಾರೋ ಹಿಡಿದು ಕೂಗುತ್ತಿರುವಂತೆ ಭಾಸವಾಗುತ್ತದೆ. ನಿಜ ನರ್ಸಮ್ಮ ನಿಮ್ಮ ಹೆಸರನ್ನೇ ಕರೆಯುತ್ತಿದ್ದಾಳೆ. ಹ್ವಾ! ನಿಮ್ಮ ಸಮಯ ಕೊನೆಗೂ ಬಂದಿತು.

ಒಳಗೆ ಹೋಗಿ ಡಾಕ್ಟರ್ ಮುಂದಿರುವ ಮೇಲೆ ಕೆಳಗೆ, ಹಿಂದೆ ಮುಂದೆ ಹೋಗುವ ಮೆತ್ತನೆಯ ಕುರ್ಚಿಯ ಮೇಲೆ ಕುಳಿತ ಮೇಲೂ ಅರ್ಜೆಂಟ್ ಎಂಬ ಪ್ರಶ್ನೆಯೇ ಇಲ್ಲ. ಮೊದಲು ತಮ್ಮ ಬರಿಗಣ್ಣಿನಿಂದ ಅವರು ನಿಮ್ಮ ಬರಿಗಣ್ಣು ನೋಡುತ್ತಾರೆ. ನಂತರ ಗಲ್ಲವನ್ನು ಮುಂದಿರುವ ಯಂತ್ರದ ಮುಂದೆ ಊರಲು ಹೇಳುತ್ತಾರೆ. ನೀವು ಅಲ್ಲಾಡಬಹುದು ಎಂದು ಅನಿಸಿದರೆ ನರ್ಸಮ್ಮ ನಿಮ್ಮ ತಲೆಯನ್ನು ಹಿಂದಿನಿಂದ ಭದ್ರವಾಗಿ ಹಿಡಿಯುತ್ತಾಳೆ. ಆ ಸ್ಪರ್ಶ ಹಿತವೆ ಎಂಬುದು ಆಕೆಯ ವಯಸ್ಸು / ರೂಪ ಮತ್ತು ನಿಮ್ಮ ವಯಸ್ಸು / ಅಭಿರುಚಿಯನ್ನು ಅವಲಂಬಿಸಿರುತ್ತದೆ. ಯಂತ್ರದ ಮೂಲಕ ನಿಮ್ಮ ಕಣ್ಣನ್ನು ಪರೀಕ್ಷಿಸುವ ವೈದ್ಯರು ರೆಪ್ಪೆ ಅಲ್ಲಾಡಿಸಬೇಡ, ನನ್ನ ಕಿವಿಯತ್ತ ನೋಡುತ್ತಿರಿ, ಎಂದೆಲ್ಲ ಸೂಚನೆಗಳನ್ನು ನೀಡುತ್ತಿರುತ್ತಾರೆ. ಅದು ಮುಗಿದ ಮೇಲೆ ಗಾಜಿನ ತುಂಡನ್ನು ಕಣ್ಣು ಮುಂದಿಟ್ಟು ದೀಪ ಹಚ್ಚಿದಾಗ ಅದು ಕೊಹಿನೂರು ವಜ್ರದಂತೆ ಪ್ರಕಾಶಿಸತೊಡಗುತ್ತದೆ. ಆದರ ಮೂಲಕ ಈಗವರು ನಮ್ಮ ಕಣ್ಣಿನೊಳಗೆ ಒಂದು ಕ್ಲೋಸ್ ಲುಕ್ ಬೀರುತ್ತಾರೆ. ಮೇಲೆ ನೋಡಿ, ಕೆಳಗೆ, ಪಕ್ಕ, ಎಡಕ್ಕೆ, ಬಲಕ್ಕೆ ಹೀಗೆ ಅವರು ಹೇಳುತ್ತಿದ್ದಂತೆ ಡ್ರಿಲ್ ಮಾಡುವಂತೆ ನಮ್ಮ ಕಣ್ಣಿನ ಗುಡ್ಡೆಗಳು ಚಲಿಸತೊಡಗುತ್ತವೆ. ಕೊನೆಗೊಮ್ಮೆ ಅವರು ಆ ವಜ್ರವನ್ನು ನಮ್ಮ ದೃಷ್ಟಿಯಿಂದ ಹೊರತೆಗೆದಾಗ ಒಂದೆರಡು ಕ್ಷಣ ಗಾಡಾಂಧಕಾರ ಆವರಿಸುತ್ತದೆ.

ನಂತರ ಸಮಸ್ಯೆ ಏನೆಂದು ವಿವರಿಸಲು ಪ್ರಯತ್ನಿಸುತ್ತಾರೆ. ಅನೇಕ ತಾಂತ್ರಿಕ ಶಬ್ದಗಳನ್ನು ಬಳಸುವದರಿಂದ ಅವರ ವಿವರಣೆ ಪುರೋಹಿತರ ಮಂತ್ರದಂತೆ ಏನೂ ಅರ್ಥವಾಗದು. ಆದರೂ ತಲೆ ಅಲ್ಲಾಡಿಸುತ್ತೇವೆ. ಕಣ್ಣಿಗೆ ಏನೋ ಆಗಿದೆ ಎಂದು ಖಾತರಿಯಂತೂ ಆಗುತ್ತದೆ.

ಕೊನೆಗೊಮ್ಮೆ ಪ್ರಿಸ್‌ಕ್ರಿಪ್ಷನ್ ಬರೆಯಲು ಅವರು ಪ್ಯಾಡ್ ಎಳೆದುಕೊಂಡಾಗ ಸದ್ಯ ಎಂದು ನಿಟ್ಟುಸಿರು ಬಿಡುತ್ತೇವೆ. ಕೊಟ್ಟ ಆ ಬಿಳಿ ಚೀಟಿ ಹಿಡಿದು ಪಿಳಿ ಪಿಳಿ ಕಣ್ಣು ಬಿಡುತ್ತಾ

ಮೊರಬಂದಾಗ ಸಮಯದತ್ತ ಗಮನ ಹರಿಸುತ್ತೇವೆ. ಎರಡು ಮೂರು ತಾಸಾದರು ಕಳೆದಿರುತ್ತದೆ. ಇದಕ್ಕೆ ಕ್ಲಿನಿಕ್‌ಗೆ ಬಂದು ಹೋಗುವ ಸಮಯ ಸೇರಿಸಿದರೆ ಅರ್ಧ ದಿನವೇ ಕಳೆದಿರುತ್ತದೆ.

ಮೊನ್ನೆ ರೋಲ್ ರಿವರ್ಸ್ ಎನ್ನುತ್ತಾರಲ್ಲ ಹಾಗಾಯಿತು. ನ(ನ್ನ)ಮ್ಮ ಕಣ್ಣಿನ ವೈದ್ಯರು - ಅವರನ್ನು ಆಪ್ತಲ್ಮಾಲಜಿಸ್ಟ್ ಎಂದು ಸರಳವಾಗಿ ಕರೆಯುತ್ತಾರೆ - ನಮ್ಮಂತೆ ಅಂದರೆ ರೋಗಿಗಳಂತೆ ಕಾಯಬೇಕಾಯಿತು. ಆದರೆ ರೋಗಿಯಾಗಿ ಅಲ್ಲ, ತಂದೆಯಾಗಿ. ಪಿಕ್‌ನಿಕ್‌ಗೆ ಹೋಗಿದ್ದ 5 ವರ್ಷದ ಮಗನಿಗಾಗಿ ಅವರು ಶಾಲೆಯಲ್ಲಿ ಕಾಯುತ್ತಿದ್ದರು. ನಾನು ನನ್ನ ಮೊಮ್ಮಗನಿಗಾಗಿ ಕಾಯುತ್ತಿದ್ದೆ. ವ್ಯಾನ್ ಯಾವಾಗ ಬರುತ್ತದೆ ಎಂದು ಯಾರಿಗೂ ಗೊತ್ತಿರಲಿಲ್ಲ. ನಿಮ್ಮ ಕ್ಲಿನಿಕ್‌ನಲ್ಲಿ ಹೀಗೆ ನಾವೂ ಕಾಯುತ್ತೇವೆ ಡಾಕ್ಟ್ರೇ ಎಂದೆ.

ಆದರೆ ಇಲ್ಲಿ ಡ್ರಾಪ್ಸ್ ಹಾಕಿಲ್ಲ ಎಂದು ಹೇಳಿ ನಕ್ಕರು.

❖

ಡಿಸ್ಕವರಿ ಆಫ್ ಅಮೆರಿಕ

ರಷ್ಯಾದ ಕಾಮೆಡಿಯನ್ ಯಾಕೊವ್ ಸ್ಮಿರ್ನಾಫ್ ಅಮೆರಿಕ ಪ್ರವಾಸ ಮಾಡುತ್ತಿದ್ದಾಗ ಆ ದೇಶದಲ್ಲಿ ಮಾರಾಟಕ್ಕಿದ್ದ ದಿಢೀರ್ ಉತ್ಪನ್ನಗಳನ್ನು ಕಂಡು ಚಕಿತಗೊಂಡ. ಅದಕ್ಕೆ ಸಂಬಂಧಿಸಿದಂತೆ ಈ ಪ್ರಸಂಗವನ್ನು ಅವನ ಬಾಯಿನಲ್ಲೇ ಕೇಳಿ:

ನನ್ನ ಮೊದಲ ಅಂಗಡಿಯ ಭೇಟಿಯ ಸಮಯದಲ್ಲಿ ಹಾಲಿನ ಪುಡಿ ನೋಡಿದೆ. ಅದಕ್ಕೆ ನೀರು ಬೆರೆಸಿದರೆ ಹಾಲು ರೆಡಿ.

ನಂತರ ಆರೆಂಜ್ ಜ್ಯೂಸ್ ಪೌಡರ್ ನೋಡಿದೆ. ಅದಕ್ಕೆ ನೀರು ಬೆರೆಸಿದರೆ ಕಿತ್ತಳೆ ಜ್ಯೂಸ್ ರೆಡಿ.

ನಂತರ ಬೇಬಿ ಪೌಡರ್ ನೋಡಿದೆ....

ವ್ಹಾ! ಎಂತಹ ಅದ್ಭುತ ದೇಶ ಅಮೆರಿಕ ಎಂದುಕೊಂಡೆ.

ಅಕ್ಷಯ ಪಾತ್ರೆ

- ಸಿ.ಆರ್. ಸತ್ಯ

"ಲೇ!! ಈ ಟೂತ್‌ಪೇಸ್ಟ್ ಮುಗಿದಿರೋಹಾಗಿದೆ. ಇನ್ನೊಂದು ಹೊಸಾ ಟ್ಯೂಬಿದ್ದರೆ ಪುಟ್ಟೂ ಕೈಲಿ ಬಾತ್‌ರೂಮಿಗೆ ಕಳಿಸೇ..."

"ಇನ್ನೂ ಆರು ತಿಂಗಳೇ ಆಗಿಲ್ಲ. ಆಗಲೇ ಮುಗೀತು ಅಂದರೆ ಏನ್ರೀ ಅರ್ಥ? ಬೆಳಿಗ್ಗೆ ನಾನೂ ಪುಟ್ಟೂ ಅದರಲ್ಲೇ ಅಲ್ಲವೆ ಪೇಸ್ಟ್ ಹೊರಗೆ ತೆಗೆದು ಹಲ್ಲು ಉಜ್ಜಿಕೊಂಡಿದ್ದು? ಚೆನ್ನಾಗಿ ಟ್ಯೂಬ್ ಅಮುಕಿ. ಬರುತ್ತೆ. ಅದೂ ಅಲ್ಲದೆ ಪುಟ್ಟೂ ಸ್ಕೂಲಿಗೆ ಹೋಗೋ ಟೈಮಾಯಿತು. ನನ್ನನ್ನ ಕೂಗ್ಬೇಡಿ..."

"ದಿನಾ ಬೆಳಿಗ್ಗೆ ಅಮುಕಿ, ಅಮುಕಿ ಅಂತ ಹೇಳ್ತಾನೇ ಇದೀಯೆಲ್ಲಾ, ನೀನು ಹೇಳ್ದೆ ಅಂತ ಆ ಪೇಸ್ಟು ಆಕಾಶದಿಂದ ಯಾವುದಾದರೂ ಪೈಪಿನಲ್ಲಿ ಇಳಿದು ಬರುತ್ತೇನೆ?"

"ಬೇಗ ಹಲ್ಲುಜ್ಜಿ ಬನ್ರೀ. ಕಾಫಿ ತಣ್ಣಗಾಯ್ತು."

ಮೂರು ತಿಂಗಳ ನಂತರ....

"ಲೇ, ಟೂತ್ ಪೇಸ್ಟು..."

"ಈಗ ನನ್ನನ್ನ ಮಾತಾಡಿಸಬೇಡ್ರಿ. ಪುಟ್ಟೂಗೆ ಟಿಫಿನ್ ಕ್ಯಾರಿಯರ್ ರೆಡಿ ಮಾಡ್ತಿದೀನಿ. ಇರೋ ಆ ಇಪ್ಪತ್ನಾಲ್ಕು ಹಲ್ಲುಗಳಿಗೆ ಬೆಳಗಾಗೆದ್ದು ಅದೇನು ಗಲಾಟೆ ಮಾಡ್ತೀರ್ರೀ...? ಇನ್ನೂ ಗಟ್ಟಿಯಾಗಿ ಅಮುಕಿ, ಬರುತ್ತೆ."

"ಹ್ಞೂಂ, ಬರುತ್ತೆ, ಬರುತ್ತೆ! ಇಲ್ಲಿ ನನ್ನ ಬೆರಳುಗಳಲ್ಲೆಲ್ಲಾ ರಕ್ತ ಹರಿದು ಬರುತ್ತೆ ಅಷ್ಟೆ! ಅಲ್ಲಾ, ನನಗೆ ಇಪ್ಪತ್ನಾಲ್ಕು ಹಲ್ಲುಗಳಿವೆ, ಒಪ್ಪಿಕೊಳ್ತೀನಿ. ಆದರೆ ಕಟ್ಟಿಸ್ಕೊಂಡಿರೋ ಹಲ್ಲುಗಳನ್ನೂ ತಿಕ್ಕಬೇಡವೇನೆ? ಎಲ್ಲಾ ಸೇರಿದ್ರೆ ನಂದು ಮೂವತ್ತೆರಡು, ನಿಂದು ಮೂವತ್ತೆರಡು, ಪುಟ್ಟೂದು ಇಪ್ಪತ್ತೈದು - ಇಷ್ಟು ಹಲ್ಲುಗಳನ್ನೂ ಒಂದೇ ಮೀಡಿಯಾ ಸೈಜ್ ಟೂತ್ ಪೇಸ್ಟಿನಲ್ಲಿ ಎಷ್ಟು ದಿನಾ ಅಂತ ಮ್ಯಾನೇಜ್ ಮಾಡೋದು ಅಂತೀನಿ...?"

"ಬೆಳಿಗ್ಗೆ ನಾವು ಹಲ್ಲು ಉಜ್ಜಿಕೊಳ್ಳಲಿಲ್ಲವೆ? ಇನ್ನೂ ಅಮುಕ್ರಿ, ಬರುತ್ತೆ"

ಆರು ತಿಂಗಳ ನಂತರ....

"ಲೇ!!...."

'ಸರಿ, ಶುರು ಮಾಡಿದ್ರಾ ನಿಮ್ಮ ದಂಡ ಪೂಜೇನಾ?"

"ತಿಂಗಳುಗಟ್ಟಲೆ ಈ ಟ್ಯೂಬನ್ನು ಅಮುಕಿ, ಅಮುಕಿ, ಕೈಗೆ ಆರ್ಥರೈಟಿಸ್ ಬಡಿದ ಹಾಗಾಗಿದೆ"

"ಡ್ಯಾಡಿ, ಒಂದು ಕೆಲಸ ಮಾಡಿ. ಕಾಲಿಂದ ಅಮುಕಿ, ಪೇಸ್ಟ್ ಖಂಡಿತಾ ಬರುತ್ತೆ"

"ಪುಟ್ಟೂ ಇದು ಜೋಕ್ ಹೊಡೆಯೋ ಸಮಯ ಅಲ್ಲ. ನೀನು ಸುಮ್ಮನೆ ಸ್ಕೂಲಿಗೆ ಹೊರಡು. ಲೇ, ನೀನೇನು ಟ್ಯೂಬ್ ಬದಲಾಯಿಸ್ತಿಯೋ ಇಲ್ಲಾ ಹಾಗೇ ಕೆಳಗೆ ಬರಲೋ?"

''ಬುದ್ಧಿಯೋರೆ, ಟ್ಯೂಬ್‌ನ ಕೆಳ್ಗಿಂದ ಮ್ಯಾಲ್ಗಡೆ ಕಡೆ ಅಮುಕಿ, ಪೇಸ್ಟ್ ಬರ್ತೈತೆ.''

''ಸರಿ, ಇವತ್ತು ನಿಮ್ಮಗಳ ಜೊತೆ ಈ ಕೆಲಸದ ವೆಂಕಿ ಬುದ್ಧಿವಾದ ಬೇರೆ ನಾನು ಕೇಳ್ಬೇಕೇನು? ನನ್ನ ಹಣೇಬರಹ!... ಅಲ್ಲ, ಅಲ್ಲ, ಇದು ನನ್ನ ಹಲ್ಲು ಬರಹ ಅಷ್ಟೆ!''

''ಅದೇನು, ಒಂದಿಷ್ಟು ಪೇಸ್ಟಿಗೆ ಇಷ್ಟೊಂದು ಮಾತಾಡ್ತೀರಾ? ಎಷ್ಟು ಬರುತ್ತೋ ಅಷ್ಟರಲ್ಲೇ ಉಜ್ಜಿಕೊಂಡು ಬನ್ರಿ. ಆಫೀಸಿಗೆ ಹೊತ್ತಾಗಲಿಲ್ಲವೆ?''

''ಸರಿಯಾಗಿ ಹಲ್ಲುಜ್ಜದೇ ಆಫೀಸಿಗೆ ಹೋದರೆ, ಇನ್ನು ಮೇಲೆ ನನಗ್ಯಾವ ಆಫೀಸ್ ಇರುತ್ತೆ? ಅಲ್ಲಿಂದ ಕೆಲಸ ಬಿಟ್ಟು ಹೊರಗೆ ದಬ್ತಾರೆ. ನಮ್ಮ ಆಫೀಸ್‌ಗೆ ಬರೋ ಕಸ್ಟಮರ್ಸ್ ಗತಿ ಏನು ಅಂತ ಯೋಚಿಸಿದ್ದೀಯಾ?''

''ಡ್ಯಾಡಿ, ಒಂದು ಕೆಲಸ ಮಾಡಿ. ಆ ಹಂದಿ ಜ್ವರಕ್ಕೆ ಹಾಕ್ಕೋತಾರಲ್ಲ ಅದೆಂತಹುದೋ ಮುಖ ಕವಚ, ಅದನ್ನ ಹಾಕ್ಕೊಂಡು ಆಫೀಸಿಗೆ ಹೋಗಿ. ಯಾರಿಗೂ ಗೊತ್ತಾಗಲ್ಲ...''

''ಪುಟ್ಟೂ, ನೀನೂ ನಿನ್ನ ಅಮ್ಮನ ತರಹ ಮಾತು ಕಲೀತಿದಿಯಾ. ಅದರ ಬದಲು ಆ ಸೋಶಿಯಲ್ ಸ್ಟಡೀಸ್‌ನಾದ್ರೂ ಚೆನ್ನಾಗಿ ಓದು. ಮಾರ್ಕ್ಸ್ ಜಾಸ್ತಿನಾದ್ರೂ ಬರಲಿ.''

''ಆ ಮಗೂ ಹತ್ತಿರ ಏನ್ರೀ ನಿಮ್ಮ ವಾದ? ಬನ್ನೀ ಕೆಳಗೆ!''

ಎಂಟು ತಿಂಗಳುಗಳ ನಂತರ....

''ಯಾಕ್ರೀ ಮಲಗೇ ಇದೀರಾ? ಆಫೀಸಿಗೆ ಹೊತ್ತಾಯ್ತು. ಏನು, ಮೈನಲ್ಲಿ ಹುಷಾರಿಲ್ವೆ?''

''ಮೈ ಎಲ್ಲಾ ಚೆನ್ನಾಗಿದೆ. ಪ್ರಾಬ್ಲಮ್ ಇರೋದು ನನ್ನ ಹಲ್ಲುಗಳಿಗೆ. ಆ ಟ್ಯೂಬಿನಿಂದ ನನಗೆ ಇನ್ನು ಮುಂದೆ ಪೇಸ್ಟ್ ತೆಗೆಯೋಕ್ಕೆ ನನ್ನಿಂದ ಆಗೋಲ್ಲ. ನನಗೊಂದು ಹೊಸಾ ಟ್ಯೂಬ್ ಕೊಡು. ಇಲ್ಲದಿದ್ದರೆ, ನಾನು ಆಫೀಸಿಗೆ ರಾಜಿನಾಮೆ ಕೊಡ್ತೀನಿ.''

''ಅಯ್ಯೋ ರಾಮ, ಅಷ್ಟು ದೊಡ್ಡ ಫ್ಯಾಮಿಲಿ ಪ್ಯಾಕ್ ತಂದಿಟ್ಟಿದ್ದೀನಿ. ದಿನಾ ಬೆಳಿಗ್ಗೆ ನಾನೂ ಪುಟ್ಟೂ ಹಲ್ಲು ಉಜ್ತಾನೇ ಇದೀವಿ. ನಿಮ್ಗೆ ಒಬ್ಬರದೇ ಏನ್ರೀ ಪ್ರಾಬ್ಲಮ್ಮು?''

''ಪ್ರಾಬ್ಲಮ್ಮಾ? ಅಲ್ಲಿ ಹೋಗಿ ನೋಡು. ಅದನ್ನ ಯಾರಾದರೂ ಟೂತ್ ಪೇಸ್ಟ್ ಟ್ಯೂಬ್ ಅಂತ ಕರೀತಾರಾ?''

''ಎಲ್ರೀ ಇದೆ ಆ ಟ್ಯೂಬು?.... ಓ! ಇದಾ...? ಈ ಟ್ಯೂಬನ್ನಾ ನೀವು ಇಷ್ಟು ದಿನ ಅಮುಕ್ತಾ ಇದ್ದಿದ್ದು? ಚೆನ್ನಾಯ್ತು! ಮೇಲ್ಗಡೇ ಶೆಲ್ಫ್‌ನಲ್ಲಿ ಫ್ಯಾಮಿಲಿ ಪ್ಯಾಕ್ ಇಟ್ಟಿರೋದು ನಿಮ್ಮ ಆ ಕಣ್ಣುಗಳಿಗೆ ಬಿದ್ದೇ ಇಲ್ಲವೆ? ತಿಂಗಳಗಟ್ಟಲೆ ಈ ಹಳೇ ಟ್ಯೂಬನ್ನೇ ಅಮುಕ್ತಾ ಕೂತಿದೀರಲ್ಲಾ, ಇದೇನು ಅಕ್ಷಯ ಪಾತ್ರೇನೆ? ದೇವರೇ ಗತಿ!''

''ಓ ಹಾಗಾ? ಅದ್ಯಾರು ಕೆಳಗಡೆ ಅಷ್ಟು ಜೋರಾಗಿ ಕಿಲಿಕಿಲಿ ಅಂತ ನಗ್ತಾ ಇರೋದು?''

''ಪುಟ್ಟೂ ವೆಂಕಿ ನಿಮ್ಮ ರಂಪ ನೋಡಿ ನಗ್ತಿದಾರೆ ಅಷ್ಟೆ. ಇನ್ನು ಹೊರಡಿ ಆಫೀಸಿಗೆ...''

ಆಪರೇಷನ್ ಬಾಂಬ್ ಡಿಸ್ಕವರಿ

- ಡಾ.ಡಿ.ವಿ. ಗುರುಪ್ರಸಾದ್

ಎಸ್.ಪಿ. ಸಾಹೇಬರಿಗಂತೂ ಎರಡು ರಾತ್ರಿ ನಿದ್ದೆ ಇಲ್ಲದೆ ತಲೆ ಚಿಟಗುಟ್ಟುತ್ತಿತ್ತು. ಶುಕ್ರವಾರ, 13ನೇ ತಾರೀಖು ಅಪಶಕುನದ ದಿನ ಎಂದು ತಿಳಿದೂ ತಿಳಿದೂ ಅವರು ಹನುಮಪ್ಪನ ದೇವಸ್ಥಾನದಲ್ಲಿ ಮುಂಜಾನೆಯೇ ಅರ್ಚನೆ ಮಾಡಿಸಿಕೊಂಡು ಈ ದಿನ ಏನೂ ಆಗದಿರಲಪ್ಪಾ ಎಂದು ಬೇಡಿ ಬಂದಿದ್ದರು. ಆದರೆ ಪಾಪ ಸಾಹೇಬರ ಮೇಲೆ ಹನುಮಪ್ಪನ ದಯೆ ಇರಲಿಲ್ಲ. ಇನ್ನೇನು ಸಾಹೇಬರು ಊಟಕ್ಕೆ ತೆರಳಬೇಕು ಎನ್ನುವ ಸಮಯಕ್ಕೆ ಕಂಟ್ರೋಲ್ ರೂಂ ನಿಂದ ಫೋನ್ ಬಂದಿತು. ಸಾರ್ ಜವಾಹರಲಾಲ್ ರಸ್ತೆಯಲ್ಲಿ ಬಾಟಾ ಷೋರೂಂ ಮುಂದೆ ಈಗ ತಾನೇ ಒಂದು ಬಾಂಬ್ ಸಿಡಿದಿದೆ. ಹೆಚ್ಚಿನ ವಿವರ ಬರಬೇಕಾಗಿದೆ ಓವರ್ ಎಂಡ್ ಔಟ್ ಎಂದು ಆಪರೇಟರ್ ಫೋನ್ ಇಟ್ಟುಬಿಟ್ಟ.

ಸಾಹೇಬರು ಯೂನಿಫಾರಂ ಸರಿಪಡಿಸಿಕೊಂಡು ಘಟನಾ ಸ್ಥಳಕ್ಕೆ ಹೋಗಲು ಕಾರಿನಲ್ಲಿ ಕೂರುವಷ್ಟರಲ್ಲಿ ಮತ್ತೆ ಅವರ ಮೊಬೈಲ್ ರಿಂಗಣಿಸಿತು. ಸಾರ್ ವೆಂಕಟೇಶ್ವರ ಮಾಲ್ ಮುಂದಿರುವ ಕಸದ ತೊಟ್ಟಿಯಲ್ಲಿ ಒಂದು ಬಾಂಬ್ ಸಿಡಿದು ಬೆಂಕಿ ಹತ್ತಿಕೊಂಡಿದೆ. ಪಕ್ಕದ ಚಪ್ಪಲಿ ಅಂಗಡಿಯವನ ಹೆಂಡತಿ ಸ್ಪಾಟ್ ಔಟ್ ಸಾರ್ ಎಂದ ಆಪರೇಟರ್.

ಮುಂದಿನ ಇಪ್ಪತ್ತನಾಲ್ಕು ಗಂಟೆಗಳಲ್ಲಿ ಅದೇ ಊರಿನ ಎಂಟು-ಹತ್ತು ಕಡೆಗಳಲ್ಲಿ ಬಾಂಬ್‌ಗಳು ಸಿಡಿದವು. ಅದೃಷ್ಟವಶಾತ್ ಎಲ್ಲೂ ಸಾವು ನೋವುಗಳಾಗಲಿಲ್ಲ. ಆದರೆ ಐದಾರು ಕಡೆಗಳಲ್ಲಿ ಠುಸ್ ಆದ ಬಾಂಬುಗಳೂ ದೊರೆತವು. ಟಿವಿ ವಾಹಿನಿಗಳಂತೂ ಒಂದೊಂದು ಸಿಡಿಯದ ಬಾಂಬ್ ಸಿಕ್ಕಾಗಲೂ ಅವುಗಳನ್ನು ನಿಷ್ಕ್ರಿಯ ಮಾಡುವ ಪ್ರಕ್ರಿಯೆಯ ನೇರ ಪ್ರಸಾರ ಆರಂಭಿಸಿದವು. ಪರಿಣಾಮವಾಗಿ ಜನ ಸಿನಿಮಾ ನೋಡುವುದನ್ನೇ ಬಿಟ್ಟುಬಿಟ್ಟರು. ಸಿನಿಮಾ ಮಂದಿರಗಳಲ್ಲಿ ಬಾಂಬ್ ಇರಬಹುದು ಎಂಬ ಭಯ ಒಂದು ಕಡೆಯಾದರೆ ಬಾಂಬ್ ಬಗ್ಗೆ ಟಿ.ವಿ. ಗಳಲ್ಲಿ ಬರುತ್ತಿದ್ದ ರಸವತ್ತಾದ ದೃಶ್ಯಗಳು, ನಿರೂಪಣೆ, ಎಕ್ಸ್‌ಪರ್ಟ್‌ಗಳ ಕಾಮೆಂಟುಗಳು ಸಿನಿಮಾಗಿಂತ ಸ್ವಾರಸ್ಯಕರವಾಗಿದ್ದುದ್ದು ಇನ್ನೊಂದು ಕಾರಣವಾಗಿತ್ತು.

ಯಾವ ಯಾವ ಜಾಗದಲ್ಲಿ ಬಾಂಬ್‌ಗಳನ್ನು ಇಟ್ಟಿರಬಹುದು ಎಂದು ವೃತ್ತ ಪತ್ರಿಕೆಗಳು ತಮ್ಮ ಓದುಗರನ್ನು ಕೇಳಿ ಸರಿಯಾದ ಉತ್ತರ ಹೇಳಿದವರಿಗೆ ರೂ.50,000 ಬಹುಮಾನ ಎಂದು ಘೋಷಿಸಿದವು. ಇದನ್ನು ಗಮನಿಸಿದ ಆ ಊರಿನ ಸಟ್ಟಾ ವ್ಯಾಪಾರಿಗಳು ಯಾವ ಜಾಗದಲ್ಲಿ ಎಂದು ಬಾಂಬ್ ಸಿಗುತ್ತದೆ ಎಂದು ಊಹಿಸುವ ಜನರಿಂದ ಒಂದು ರೂಗೆ 80, 100, 1000 ದಂತೆ ಬಾಜಿ ಕಟ್ಟಲು ಆರಂಭಿಸಿದರು. ಊರಿಗೆ ಊರೇ ಬಾಂಬ್‌ಗಳ ಬಗ್ಗೆ ಮಗ್ನವಾಯಿತು. ನಿದ್ದೆ ಕೆಟ್ಟ ಎಸ್.ಪಿ. ಸಾಹೇಬರು ನಿಟ್ಟುಸಿರು ಬಿಟ್ಟು ನಮ್ಮ ಊರಿಗೆ ಬಾಂಬ್ ಬೇ ಎಂಬ ಹೆಸರೇಕೆ ಇಡಬಾರದು ಎಂದು ತಲೆ ಪರಚಿಕೊಂಡರು.

ಈ ಬಾಂಬ್ ಕಾಟದಿಂದ ಆದಷ್ಟು ಬೇಗ ಮುಕ್ತಿ ಸಿಗಲೆಂದು ಎಸ್.ಪಿ. ಸಾಹೇಬರು

ಮಾರನೆಯ ದಿನ ತಮ್ಮ ಅಧೀನದ ಹಿರಿ-ಕಿರಿ ಅಧಿಕಾರಿಗಳ ಸಭೆ ಕರೆದರು. ಸಮಸ್ಯೆಯನ್ನು ಹೇಗೆ ಬಗೆಹರಿಸುವುದು ಎಂದು ಎಲ್ಲರೂ ಯೋಚಿಸಿದರು. ಸಭೆಯಲ್ಲಿದ್ದ ಅಧಿಕಾರಿಗಳಲ್ಲಿ ಸಿಟಿ ಡಿಎಸ್‌ಪಿ ಸಾಹೇಬರೇ ಎಲ್ಲರಿಗಿಂತ ಹೆಚ್ಚು ಸೇವೆ ಸಲ್ಲಿಸಿದ್ದವರು ಹಾಗೂ ಇನ್ನು ಒಂದೇ ತಿಂಗಳಲ್ಲಿ ನಿವೃತ್ತಿಯಾಗುತ್ತಿದ್ದವರು. ಅವ ಮಾತನಾಡಿ ಗೆಳೆಯರೇ ಈ ಘಟನೆಯಲ್ಲಿ ಇಂಟೆಲಿಜೆನ್ಸ್ ಫೇಲ್ ಆಗಿದೆ ಎನ್ನುವುದರಲ್ಲಿ ಎರಡು ಮಾತೇ ಇಲ್ಲ. ಆದರೆ ನನ್ನ ತಲೆಕೂದಲು ಬೆಳ್ಳಗಾಗಿದ್ದರೂ ನನ್ನ ಇಂಟೆಲಿಜೆನ್ಸ್ ಮುದಿಯಾಗಿಲ್ಲ. ನೀವೆಲ್ಲ ಒಂದು ವಿಷಯ ಗಮನಿಸಿರಬಹುದು - ಈ ಬಾಂಬ್‌ಗಳನ್ನು ಎಲ್ಲಿ ಇಡಲಾಗಿತ್ತು ಗೊತ್ತೇ ಎಂದರು. ಒಬ್ಬ ಅಧಿಕಾರಿ ಸಾರ್ ನನ್ನ ವ್ಯಾಪ್ತಿಯಲ್ಲಿ ದೊರಕಿದ ಬಾಂಬ್‌ಗಳು ಕಸದ ತೊಟ್ಟಿಯಲ್ಲಿದ್ದವು ಎಂದರೆ ಇನ್ನೊಬ್ಬ ಸಾರ್ ನಮ್ಮಲ್ಲಿ ದೊರೆತ ಬಾಂಬ್‌ಗಳು ಮೋರಿ ಪಕ್ಕದಲ್ಲೇ ಇದ್ದವು ಎಂದ, ಮೂರನೆಯವ ಸಾರ್ ಬಾಟಾ ಷೋ ರೂಂ ಮುಂದೆ ಸಿಡಿದ ಬಾಂಬ್ ತಿಪ್ಪೆ ಗುಂಡಿಯಲ್ಲಿತ್ತು ಎಂದು ಉತ್ತರಿಸಿದ.

ಅದೇ ರೀ, ಗಮನಿಸಬೇಕಾಗಿದ್ದು, ನಿಮಗೆ ಇಂಟೆಲಿಜೆನ್ಸ್ ಇದ್ದರೆ ಈ ಬಾಂಬ್‌ಗಳ ವಿಚಾರದಲ್ಲಿ ಕಾಮನ್ ಫ್ಯಾಕ್ಟರ್ ಯಾವುದು ಹೇಳಿ ಎಂದು ಕೇಳಿದ ಸಿಟಿ ಡಿಎಸ್‌ಪಿ, ಉತ್ತರಕ್ಕಾಗಿ ಕಾಯದೆ ನೋಡಿ ಎಲ್ಲಾ ಬಾಂಬ್‌ಗಳನ್ನು ಇಟ್ಟಿದ್ದು ತಿಪ್ಪೆಗುಂಡಿ, ಕಸದ ತೊಟ್ಟಿ ಅಥವಾ ಮೋರಿ ಪಕ್ಕ ಅಲ್ಲವೇ? ಎಂದರು. ಪ್ರತಿಯೊಬ್ಬರೂ ಹೌದು ಹೌದು ಎಂದು ತಲೆತೂಗಿ ಸಿಟಿ ಡಿಎಸ್‌ಪಿರವರ ಚಾಣಾಕ್ಷತನವನ್ನು ಮೆಚ್ಚಿದರು. ನೋಡಿ ನಾವು ಈಗ ಏನು ಮಾಡಬೇಕು ಎಂದರೆ ನಮ್ಮ ಪಟ್ಟಣದ ಎಲ್ಲಾ ತಿಪ್ಪೆಗುಂಡಿಗಳ ಹಾಗೂ ಎಲ್ಲಾ ಮೋರಿಗಳ ತಪಾಸಣೆ ನಡೆಸಬೇಕು ಆಗಲೇ ಬಾಂಬ್ ಸಮಸ್ಯೆಯಿಂದ ನಮಗೆ ಮುಕ್ತಿ ದೊರಕುವುದು ಎಂದರು.

ಸಿಟಿ ಡಿಎಸ್‌ಪಿ ಸಾಹೇಬರ ಸಲಹೆ ಸರ್ವಾನುಮತದಿಂದ ಅಂಗೀಕಾರವಾಯಿತು. ನಾಳೆ ಬೆಳಿಗ್ಗೆಯಿಂದ ಪ್ರತಿಯೊಂದು ಠಾಣೆಯ ಸಿಬ್ಬಂದಿ ತಮ್ಮ ವ್ಯಾಪ್ತಿಯಲ್ಲಿರುವ ಎಲ್ಲಾ ತಿಪ್ಪೆಗುಂಡಿಗಳು ಹಾಗೂ ಮೋರಿಗಳ ಕೂಲಂಕುಷ ತಪಾಸಣೆ ನಡೆಸಿ ನನಗೆ ವರದಿ ನೀಡಬೇಕು ಎಂದು ಹೇಳಿದ ಎಸ್.ಪಿ. ಸಾಹೇಬರು ಮೀಟಿಂಗ್ ಬರ್ಖಾಸ್ತ್ ಮಾಡಿದರು.

ಮಾರನೆಯ ದಿನ ಬೆಳಗಿನ ಏಳು ಗಂಟೆಗೇ ನಗರದ ಪ್ರತಿ ಕಸದ ಗುಂಡಿ-ತೊಟ್ಟಿ-ಮೋರಿ ಬಳಿ ಪೊಲೀಸರ ತಂಡವೇ ಹಾಜರ್. ಮೂಗಿಗೆ ಬಟ್ಟೆ ಕಟ್ಟಿ ಪ್ರತಿಯೊಂದು ತಂಡವೂ ತಿಪ್ಪೆ ಕೆದಕಲು ಆರಂಭಿಸಿತು. ಇವರನ್ನು ನೋಡಿದ ಚಿಂದಿ ಆಯುವ ಹುಡುಗರು ತಮ್ಮ ದೈನಂದಿನ ಕೆಲಸ ಮಾಡದೆಯೇ ಹೆದರಿ ಓಡಿದರು.

ಹೆಡ್‌ಕಾನ್‌ಸ್ಟೇಬಲ್ ರಾಮಣ್ಣ ತಿಪ್ಪೆ ಕೆದಕಿದಾಗ ಕಂದು ಬಣ್ಣದ ಕಾಗದದಲ್ಲಿ ಕಟ್ಟಿದ್ದ ಗೋಲಾಕಾರದ ವಸ್ತು ಕಂಡಿತು. ಖಂಡಿತ ಇದು ಬಾಂಬ್ ಇರಲೇಬೇಕು ಎಂದು ಖುಷಿಯಾದ ರಾಮಣ್ಣ ತನ್ನ ಪ್ಯಾಂಟ್-ಷರಟು ಕಳಚಿ ಅಂಡರ್‌ವೇರ್‌ನಲ್ಲೇ ಕಸದ ತೊಟ್ಟಿ ಪ್ರವೇಶಿಸಿದ. ನಿಧಾನ ರಾಮಣ್ಣ, ಹೆಚ್ಚು ಕಡಿಮೆಯಾದರೆ ಪ್ರಾಣಕ್ಕೇ ಸಂಚಕಾರ ಎಂದು ಅವನ ಪಿಎಸ್‌ಐ ಎಚ್ಚರಿಸಿದ. ನನಗೇನಾಗೊಲ್ಲ ಸಾರ್, ಈ ಹಾಳು ಟಿ.ವಿ.ಯವರು ಇನ್ನೂ ಬಂದಿಲ್ಲ, ನೀವೇ ನಿಮ್ಮ ಮೊಬೈಲ್‌ನಲ್ಲಿ ನಾನು ಈ ಬಾಂಬ್ ನಿಷ್ಕ್ರಿಯಗೊಳಿಸುವ ವಿಡಿಯೋ

ತೆಗೆಯಿರಿ. ಏನಾದರೂ ಲಕ್ ಇದ್ದರೆ ನನಗೆ ಹತ್ತು ಲಕ್ಷ ಬಹುಮಾನ ಬರುತ್ತದೆ, ಎಂದ ರಾಮಣ್ಣ ಕಸದ ತೊಟ್ಟಿಯಲ್ಲಿದ್ದ ಕಸ ಅತ್ತಿಂದತ್ತ ಮಾಡಿ ನಿಧಾನವಾಗಿ ಆ ಪ್ಯಾಕೆಟ್ ಮೇಲಕ್ಕೆತ್ತಿ ತನ್ನ ಬಲಗೈ ಬೆರಳುಗಳಿಂದ ವಿ ಚಿನ್ಹೆ ತೋರಿಸಿದ. ಎಲ್ಲಾ ಸಹೋದ್ಯೋಗಿಗಳೂ ಚಪ್ಪಾಳೆ ತಟ್ಟಿದರು. ರಾಮಣ್ಣ ನಿಧಾನವಾಗಿ ಆ ಪ್ಯಾಕೆಟ್ ಹೊರಗಡೆ ತಂದು ಆ ದೊಡ್ಡ ಗೋಲಾಕಾರದ ವಸ್ತು ಅಲ್ಲಾಡದಂತೆ ಎಚ್ಚರ ವಹಿಸಿ ಕಾಗದದ ಪದರ ಕತ್ತರಿಸಿದ. ಒಳಗಡೆ ನೋಡಿದರೆ ಒಂದು ಕೊಳೆತ ಕುಂಬಳಕಾಯಿ ಇತ್ತು. ಎಲ್ಲರೂ ಓಹ್ ಎಂದ ಉದ್ಗರಿಸಿದರು. ರಾಮಣ್ಣ ಆಯುಧ ಪೂಜೆಯ ಸಮಯದಲ್ಲಿ ಮಾಡುವಂತೆ ಕೋಪದಿಂದ ಆ ಕಾಯನ್ನು ನೆಲಕ್ಕೆ ಜಜ್ಜಿದ. ಕಾಯಿ ಚಿಂದಿ ಚಿಂದಿಯಾಯಿತು.

ಇತ್ತ ಇನ್ನೊಂದು ತಂಡ ಬೇರೆ ತಿಪ್ಪೆ ಗುಂಡಿಯ ಮುಂದೆ ಜಮಾಯಿಸಿತ್ತು. ಉದ್ದನೆಯ ಬಿದಿರು ಕಡ್ಡಿಗಳನ್ನು ಹಿಡಿದಿದ್ದ ಪೊಲೀಸರು ಆ ತಿಪ್ಪೆಗುಂಡಿಯನ್ನು ತಿವಿದು ತಿವಿದು ಕಲಕಿದರು. ಏತನ್ಮಧ್ಯೆ ಘೊರ್ ಘೊರ್ ಎಂಬ ಶಬ್ದ ಕೇಳಿಬಂದು ಪ್ರಭಾತದ ನಿಶಬ್ದದಲ್ಲಿ ಎಲ್ಲರನ್ನೂ ವಿಚಲಿತ ಮಾಡಿತು. ಇದ್ದಕ್ಕಿದ್ದಂತೆ ತಿಪ್ಪೆ ಗುಂಡಿಯ ಒಳಗಡೆ ಮೀಯುತ್ತಿದ್ದ ದೊಡ್ಡ ಹಂದಿಯೊಂದು ಅಲ್ಲಿಂದ ನೆಗೆದು ಹತ್ತಿರದಲ್ಲೇ ಇದ್ದ ಪಿ.ಸಿ. ಲಕ್ಷ್ಮಣನನ್ನು ಕಚ್ಚಿ ಓಡಿ ಹೋಯಿತು. ಅಯ್ಯಯ್ಯೋ ಎಂದು ಲಕ್ಷ್ಮಣ ಅರಚಿದಾಗ ಪೊಲೀಸ್ ಜೀಪಿನಲ್ಲೇ ಅವನನ್ನು ಆಸ್ಪತ್ರೆಗೆ ಸಾಗಿಸಿ ಆವತ್ತಿಗೆ ಆಪರೇಷನ್ ಕ್ಲೋಸ್ ಎಂದು ತಂಡ ಪೊಲೀಸ್ ಠಾಣೆಗೆ ವಾಪಸ್ಸಾಯಿತು.

ಮೂರನೆಯ ತಂಡದ ಅನುಭವವೇ ಬೇರೆ. ಇಬ್ಬರು ಪಿ.ಸಿ.ಗಳು ಬಾಂಬ್ ಹುಡುಕಲು ದೊಡ್ಡ ಮೋರಿ ಬಳಿ ಬಂದಾಗ ಹಿಂದಿನ ರಾತ್ರಿ ಆದ ಮಳೆಯ ಪ್ರಭಾವದಿಂದ ಕಾಲು ಜಾರಿ ಮೋರಿಯಲ್ಲಿ ಬಿದ್ದು ಬಿಟ್ಟರು. ಆ ಮೋರಿಯಲ್ಲಿ ಸಗಣಿಯೇ ಹೆಚ್ಚಾಗಿ ಇದ್ದ ಕಾರಣ ಇಬ್ಬರೂ ಸಗಣಿ ನೀರಿನಲ್ಲಿ ಮುಳುಗಿದರು. ಅವರ ಸಹೋದ್ಯೋಗಿಗಳು ಒಂದು ಕೈಯಲ್ಲಿ ಮೂಗು ಮುಚ್ಚಿಕೊಂಡು ಇನ್ನೊಂದು ಕೈ ನೆರವಿನಿಂದ ಅವರನ್ನು ಹೊರಗೆಳೆದರು. ಸ್ಥಳದಲ್ಲೇ ಇದ್ದ ಪಿಎಸ್‌ಐ ಪೊಲೀಸ್ ಹೆಡ್ ಕ್ವಾಟರ್ಸ್‌ನಿಂದ ಗಲಭೆಗಳಾದಾಗ ಜನರ ಮೇಲೆ ಸಿಡಿಸುವ ವಾಟರ್‌ಕ್ಯಾನನ್ ವಾಹನ ತರಿಸಿ ಇಬ್ಬರ ಮೇಲೂ ಜೋರಾಗಿ ನೀರನ್ನು ಸಿಂಪಡಿಸಿ ಅವರುಗಳನ್ನು ಸಗಣಿಮುಕ್ತರನ್ನಾಗಿ ಮಾಡಿದರು.

ಮಾರನೆಯ ದಿನ ಎಲ್ಲಾ ಕಿರಿಯ ಪೊಲೀಸ್ ಅಧಿಕಾರಿಗಳೂ ಸಭೆ ಸೇರಿ ಇನ್ನೆಂದಿಗೂ ತಾವು ಕಸದ ತೊಟ್ಟಿ-ಮೋರಿಗಳ ಬಳಿ ಹಾಯುವುದಿಲ್ಲ ಎಂದು ಶಪಥ ಮಾಡಿ ಮುಂದಿನ ದಾರಿ ತೋರಿಸಲು ಸಿಟಿ ಡಿಎಸ್‌ಪಿ ಸಾಹೇಬರ ಬಳಿ ಹೋದರು. ತಮ್ಮಂದಿರಾ, ನಿಮಗೆ ಏಕೆ ಈ ಸ್ಥಿತಿ ಬಂತು ಗೊತ್ತೇ? ನೀವುಗಳು ಹಗಲು-ರಾತ್ರಿ ಗಸ್ತು ತಿರುಗುವುದನ್ನೇ ಬಿಟ್ಟುಬಿಟ್ಟಿರಲ್ಲಾ ಅದಕ್ಕೇ! ನೀವು ಸರಿಯಾಗಿ ಗಸ್ತು ತಿರುಗಿದ್ದರೆ ಯಾರಿಗಾದರೂ ಬಾಂಬ್ ಇಡಲು ಧೈರ್ಯ ಬರುತ್ತಿತ್ತೇ ಎಂದರು ಡಿಎಸ್‌ಪಿ. ಎಲ್ಲರೂ ಹೌದು ಹೌದು ಎಂದು ತಲೆದೂಗಿದರು.

ಮಾರನೆಯ ದಿನದಿಂದ ಊರಿನ ರಸ್ತೆಗಳಲ್ಲಿ ಪೊಲೀಸರ ಗಸ್ತು ಚುರುಕಾಯಿತು. ಸಿಡಿಯದ ಬಾಂಬ್‌ಗಳು ಮಾಯವಾದವು. ಎಸ್.ಪಿ. ಸಾಹೇಬರು ಸುಖ ನಿದ್ರೆ ಮಾಡಿದರು.

ವಿದ್ಯಮಾನಗಳು

- ಕು.ಕ.

‘ವಿಶ್ವಶಾಂತಿಯ ಬಗ್ಗೆ ಉದ್ದುದ್ದದ ಗಿಳಿಪಾಠಗಳನ್ನು ಒಪ್ಪಿಸುವ ಕೆಲವರಿಗೆ ವಿಶ್ವಸುಂದರಿ ಭುವನಸುಂದರಿಯಂತಹ ಪ್ರಶಸ್ತಿಗಳು ಬಂದಿರುವುದನ್ನು ಹಿಂದೆ ನೋಡಿದ್ದೆವು; ಇಂತಹ ಭಾಷಣಕಾರರಿಗೆ ನೋಬಲ್ ವಿಶ್ವಶಾಂತಿ ಪುರಸ್ಕಾರದಂತಹ ಭಾರಿ ಪ್ರಶಸ್ತಿ ಸಿಕ್ಕಿರುವುದು ಇದೇ ಮೊಟ್ಟಮೊದಲು - ಇದು ಸ್ವೀಡನ್ನಿನ ಬುದ್ಧಿವಂತ ಮಂದಿ ಈ ವರ್ಷದ ವಿಶ್ವಶಾಂತಿ ಪುರಸ್ಕಾರಕ್ಕೆ ಅಮೆರಿಕಾದ ರಾಷ್ಟ್ರಪತಿ ಬರಾಕ್ ಒಬಾಮ ಅವರ ಹೆಸರು ಪ್ರಕಟಿಸಿದ ಸುದ್ದಿಗೆ ಬಂದ ಒಂದು ಟಿಪಿಕಲ್ ಪ್ರತಿಕ್ರಿಯೆ. ಒಬಾಮ ಅಧ್ಯಕ್ಷ ಹುದ್ದೆಯನ್ನು ವಹಿಸಿಕೊಂಡು ಕೆಲವೇ ಕೆಲವು ತಿಂಗಳುಗಳಾಗಿವೆ. ಇಲ್ಲಿಯವರೆಗಿನ ಅವರ ಮಹತ್ವದ ಸಾಧನೆ ಅಧ್ಯಕ್ಷರಾಗಿ ಚುನಾಯಿತರಾಗಿರುವುದಷ್ಟೆ. ಇಂತಹ ವ್ಯಕ್ತಿಗೆ ಇಷ್ಟು ಬೇಗ ಈ ಪ್ರಶಸ್ತಿ ಕೊಟ್ಟದ್ದು ತಪ್ಪು ಎನ್ನುವುದು ಬಹುಜನರ ಅಭಿಪ್ರಾಯ. ಒಬಾಮಾಗೆ ಪ್ರಶಸ್ತಿ ಕೊಟ್ಟಿರುವುದನ್ನು ಸಮರ್ಥಿಸಿರುವವರಲ್ಲಿ ಕೆಲವರು ಈ ಪ್ರಶಸ್ತಿ ಅಮೆರಿಕಾದ ಅಧ್ಯಕ್ಷರು ವಿಶ್ವಶಾಂತಿಯನ್ನು ಬೆಂಬಲಿಸುವಂತೆ ಅವರ ಮೇಲೆ ಒತ್ತಡ ತರುತ್ತದೆ. ಆ ಕಾರಣದಿಂದ ಇದು ಸ್ವಾಗತಾರ್ಹ ಎಂದು ಹೇಳಿದ್ದಾರೆ. ಈಗಾಗಲೇ ಎರಡು ಬೇರೆಬೇರೆ ರಾಷ್ಟ್ರಗಳೊಡನೆ ಯುದ್ಧದಲ್ಲಿ ತೊಡಗಿಕೊಂಡಿರುವ ದೇಶದ ಅಧಿಪತಿ ಶಾಂತಿ ಜಪ ಪಠಿಸುತ್ತಾ ಇರಾಕ್ ಅಫ್ಘಾನಿಸ್ತಾನಗಳ ವಿರುದ್ಧ ಸೋಲನ್ನು ಒಪ್ಪಿಕೊಳ್ಳುವುದು ಸಾಧ್ಯವೇ? ಸಣ್ಣಪುಟ್ಟ ದೇಶಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿಯನ್ನು ಪ್ರೋತ್ಸಾಹಿಸುವಂತಹ ತನ್ನ ದೇಶದ ಅರ್ಥವ್ಯವಸ್ಥೆಯನ್ನು ಬೆಳೆಸಿಕೊಂಡಿರುವ ಅಮೆರಿಕಾ ಯುದ್ಧಯಂತ್ರದ ಭಾರಿ ಎಕಾನಮಿ ಶಾಂತಿಮಂತ್ರ ಪಠಿಸಿದರೆ ಅಲ್ಲಿಯ ಜನ ತಮ್ಮ ಭಾರಿಭಾರಿ ಆದಾಯದ ಉದ್ಯೋಗಗಳನ್ನು ಉಳಿಸಿಕೊಳ್ಳಲು ಆದೀತೇ? ಇಂತಹ ಹಲವು ಮೂಲಭೂತ ಪ್ರಶ್ನೆಗಳಿದ್ದರೂ ಅಮೆರಿಕದ ರಾಷ್ಟ್ರಪತಿಗೆ ಸಿಕ್ಕಿರುವ ಈ ನೋಬಲ್ ವಿಶ್ವಶಾಂತಿ ಪುರಸ್ಕಾರಕ್ಕೆ ಅವರು ಅರ್ಹರೆನಿಸುವಂತೆ ಇನ್ನು ಉಳಿದಿರುವ ಅವರಿಗೆ ಮೂರುವರ್ಷದ ಆಡಳಿತ ನಿರ್ವಹಿಸಲಿ ಎಂದು ಆಶಿಸೋಣ.

★★★

ಈ ವರ್ಷದ ರಸಾಯನ ಶಾಸ್ತ್ರದ ನೋಬಲ್ ಪ್ರಶಸ್ತಿ ಸಿಕ್ಕಿರುವುದು ನಮ್ಮವರೇ ಆದ ವೆಂಕಟರಾಮನ್ ರಾಮಕೃಷ್ಣನ್ ಅವರಿಗೆ. ಅಪ್ಪ ವಿಶ್ವವಿದ್ಯಾನಿಲಯದಲ್ಲಿ ಪ್ರೊಫೆಸರ್. ಅಮ್ಮ ಅದೇ ಯೂನಿವರ್ಸಿಟಿಯಲ್ಲಿ ಇನ್ನೊಂದು ವಿಭಾಗದಲ್ಲಿ ಪ್ರೊಫೆಸರ್ ಈ ಪಂಡಿತದ್ವಯರ ಪುತ್ರ ಪಂಡಿತಪುತ್ರನಾಗಲಿಲ್ಲ. ವಡೋದರಾದಲ್ಲಿ ಫಿಸಿಕ್ಸ್ ಎಂಎಸ್ಸಿ ಪರೀಕ್ಷೆ ಮಾಡಿಕೊಂಡು ಬಯಾಲಜಿಯಲ್ಲಿ ರೀಸರ್ಚ್ ಮಾಡಿದವರಿಗೆ ಕೆಮಿಸ್ಟ್ರಿಯಲ್ಲಿ ನೋಬಲ್ ಸಿಕ್ಕಿರುವುದು ನಮಗೆಲ್ಲಾ ಸಂತೋಷದ ಸಂಗತಿ. ಆದರೆ ನಾವುಗಳೆಲ್ಲಾ ಇವರನ್ನು ನಮ್ಮವರೇ ಎಂದಿದ್ದು ಇವರಿಗೆ ಕೋಪ ತರಿಸಿತ್ತು ಎನ್ನುವ ಸುದ್ದಿ ಕೊಂಚ ವಿವಾದ ಸೃಷ್ಟಿಸಿತ್ತು. ಈಗ ಈ ವಿವಾದ ಸುಖಾಂತ ಕಂಡಿದೆ. ವೆಂಕಟರಾಮನ್ ರಾಮಕೃಷ್ಣನ್ ಭಾರತೀಯ ಬೇರುಗಳು ಇನ್ನೂ ಭದ್ರವಾಗಿವೆ. ಅವರಿಗೆ ಕರ್ನಾಟಕ ಸಂಗೀತದಲ್ಲಿ ತಮಿಳುನಾಡು ಗುಜರಾತಿನ ಆಹಾರದಲ್ಲಿ ಇನ್ನೂ ವಿಶೇಷ ರುಚಿಯಿದೆ ಎಂದು ಒಪ್ಪಿಕೊಂಡಿದ್ದಾರೆ. ಹುಡುಗಿಯರ ಶಾಲೆಯಲ್ಲಿ ಓದಿದ್ದ ರಾಮಕೃಷ್ಣನ್ ಅವರು ಶಾಲೆಯಲ್ಲಿ ಓದುತ್ತಿದ್ದಾಗ ಹೆಣೆದ ಕಸೂತಿಯನ್ನು ಇನ್ನೂ ಇಟ್ಟುಕೊಂಡಿದ್ದಾರಂತೆ!

ರಾಯಚೂರು, ಬಳ್ಳಾರಿ, ಬಿಜಾಪುರ ಮೊದಲಾದ ಉತ್ತರ ಕರ್ನಾಟಕದ ಏಳೆಂಟು ಜಿಲ್ಲೆಗಳಲ್ಲಿ ಇಡೀ ವರ್ಷದಲ್ಲಿ 40-50 ಸೆಂಟಿಮೀಟರ್ ಮಳೆ ಬರುವುದೇ ಅಪರೂಪ. ಈ ವರ್ಷದ ಮಾನ್‌ಸೂನ್ ತಿಂಗಳುಗಳಲ್ಲಿ ಈ ಸರಾಸರಿಗಿಂತ ಸ್ವಲ್ಪ ಹೆಚ್ಚೇ ಮಳೆಯಾಗಿತ್ತು. ಹಿಂದಿನಿಂದ ಇರುವ ಕೆರೆಕಟ್ಟೆಗಳು ಈಚೆಗೆ ಕಟ್ಟಿದ ಜಲಾಶಯಗಳು ತುಂಬಿ ತುಳುಕುತ್ತಿದ್ದವು. ಜನ ನೆಮ್ಮದಿಯಿಂದಿದ್ದರು. ಆಗ ನಿದ್ದೆಗಣ್ಣಿನಲ್ಲಿ ಅಕ್ಟೋಬರ್ ಕೋಟಾ ಹಂಚುತ್ತಿದ್ದ ಮಳೆರಾಯ ವರುಣ ಇದ್ದಕ್ಕಿದ್ದ ಹಾಗೆ ಬಲು ಉದಾರಿಯಾಗಿ ಈ ಭಾಗದಲ್ಲಿ ಮುಂದಿನ ವರ್ಷದ ಮಳೆಯನ್ನು ಈಗಲೇ ಸುರಿಸಿಬಿಡಿ ಎಂದು ಆರ್ಡರ್ ಮಾಡಿದ. ತಿಂಗಳ ಮೊದಲ ನಾಲ್ಕೈದು ದಿನಗಳಲ್ಲಿಯೇ ಒಂದು ಇಡೀ ವರ್ಷದ ಮಳೆ ಸುರಿಯಿತು. ಈಗಾಗಲೇ ತುಂಬಿದ್ದ ಕೆರೆಗಳು ಒಡೆದವು. ದೊಡ್ಡ ದೊಡ್ಡ ಡ್ಯಾಂಗಳ ತೂಬುಗಳನ್ನು ತೆರೆಯಬೇಕಾಯಿತು. ಈ ಅಡ್ವಾನ್ಸ್ ಉದಾರತೆ ಜನರಿಗೆ ಶಾಪವಾಗಿ ಲಕ್ಷಾಂತರ ಮನೆಗಳು ಕೊಚ್ಚಿಹೋಗಿವೆ. ಸುಮಾರು ಎರಡುಕೋಟಿ ಜನರಿಗೆ ಅಂದರೆ ರಾಜ್ಯದ ಮೂರನೆಯ ಒಂದು ಭಾಗದ ಜನರಿಗೆ ಬಯಲೇ ಆಲಯವಾಗಿದೆ. ಅವರ ಸಮಸ್ತ ಆಸ್ತಿ ಕೊಚ್ಚಿಹೋಗಿದೆ. ರಾಜ್ಯದ ಸರ್ಕಾರ ಎಚ್ಚತ್ತಿದೆ. ಮಂತ್ರಿಗಳು ಪರಿಹಾರದ ಉಸ್ತುವಾರಿ ನೋಡಿಕೊಳ್ಳುತ್ತಿದ್ದಾರೆ. ಸಿವಿಲ್ ಸೊಸೈಟಿ ಎನ್ನುವ ಸಾಮಾನ್ಯ ಜನರೂ ಸರ್ಕಾರದ ಸಹಾಯಕ್ಕೆ ಬಂದಿದ್ದಾರೆ. ಕರ್ನಾಟಕ ಹಿಂದೆಂದು ಅನುಭವಿಸದಂತಹ ಕಷ್ಟಕಾಲ ಎದುರಿಸುತ್ತಿದೆ. ಈ ಕಷ್ಟಕಾಲದಲ್ಲೂ ಒಂದೇ ಒಂದು ಸಣ್ಣ ಬೆಳಕು- ಮಧ್ಯಾಹ್ನದ ಊಟಕ್ಕೆ ಮೊದಲು ಮೂರುಸಲ ಊಟವಾದ ಮೇಲೆ ಆರು ಸಲ ಸರ್ಕಾರವನ್ನು ಬೈಯ್ಯುವ ಅಭ್ಯಾಸ ಬೆಳೆಸಿಕೊಂಡಿದ್ದ ಉಗ್ರ, ಕುಮಾರ ಮೊದಲಾದ ವಿರೋಧಿ ಪಕ್ಷದ ಲೀಡರುಗಳು ತಮ್ಮ ಬೈಗುಳದ ದೈನಂದಿನ ಕಾಯಕಕ್ಕೆ ತಾತ್ಕಾಲಿಕ ವಿರಾಮ ಕೊಟ್ಟಿದ್ದಾರೆ.

★★★

ಆಂಧ್ರ ಪ್ರದೇಶ ಮತ್ತು ಕರ್ನಾಟಕ ಫೆಡರಲ್ ಭಾರತದ ಎರಡು ರಾಜ್ಯಗಳು. ಈ ಅಕ್ಟೋಬರ್ ತಿಂಗಳ ಅತಿವೃಷ್ಟಿಯಿಂದ ಆಂಧ್ರದಲ್ಲಿ ಸತ್ತವರ ಸಂಖ್ಯೆ 49. ಕರ್ನಾಟಕದಲ್ಲಿ ಜೀವ ಕಳೆದುಕೊಂಡವರು 227 ಮಂದಿ. ಪ್ರವಾಹದಲ್ಲಿ ಕೊಚ್ಚಿಹೋದ ಮನೆಗಳು: ಆಂಧ್ರದಲ್ಲಿ 498, ಕರ್ನಾಟಕದಲ್ಲಿ 4292. ಪ್ರವಾಹ ಸಂತ್ರಸ್ತರು: ಆಂಧ್ರದಲ್ಲಿ 15 ಲಕ್ಷ, ಕರ್ನಾಟಕದಲ್ಲಿ 1.8 ಕೋಟಿ. ಪ್ರವಾಹದಿಂದ ಆದ ಒಟ್ಟು ನಷ್ಟ: ಆಂಧ್ರ ಸರ್ಕಾರದ ಪ್ರಕಾರ 12 ಕೋಟಿ, ಕರ್ನಾಟಕ ಸರ್ಕಾರದ ಪ್ರಕಾರ 16,500 ಕೋಟಿ. ಕೇಂದ್ರದ ನೆರವು ಕೇಳಿದ್ದು ಆಂಧ್ರ ಸರ್ಕಾರ ಆರು ಸಾವಿರ ಕೋಟಿಗೆ, ಕರ್ನಾಟಕ ಸರ್ಕಾರ ಹತ್ತು ಸಾವಿರ ಕೋಟಿಗೆ. ಕೊನೆಗೆ ಪ್ರಧಾನ ಮಂತ್ರಿಗಳಿಂದ ಭರವಸೆ ಬಂದಿರುವುದು ಆಂಧ್ರಕ್ಕೆ ಒಂದು ಸಾವಿರ ಕೋಟಿ. ಕರ್ನಾಟಕಕ್ಕೆ ಡಿಟೋ ಒಂದು ಸಾವಿರ ಕೋಟಿ. ಇದು ನ್ಯಾಯಮ ಮನಮೋಹನಸಿಂಹನೇ ಎಂದು ಯಡ್ಯೂರಪ್ಪನವರು ಕೇಳುತ್ತಿದ್ದಾರೆ. ಮುಖ್ಯಮಂತ್ರಿಗಳ ಈ ಬೇಡಿಕೆಯನ್ನು ಸಮರ್ಥಿಸಲು ಮುಂದೆ ಬಾರದ ಕರ್ನಾಟಕದ ಕಾಂಗ್ರೆಸ್ ಲೀಡರುಗಳು ನಮಗೆ ವೋಟುಕೊಡದೆ ನೀವು ಎಷ್ಟು ದೊಡ್ಡ ತಪ್ಪು ಮಾಡಿದಿರಿ ಎಂದು ಜನರತ್ತ ಮುಗುಂ ಆಗಿ ನೋಡುತ್ತಿದ್ದಾರೆ.

★★★

ವಾದಿಗಳ ಯಾದಿ

- ಅರುಂಧತಿ ಜೋಶಿ

ತೀವ್ರವಾದಿಗಳು, ಆತಂಕವಾದಿಗಳು, ಭಯೋತ್ಪಾದಕರು, ಹೀಂಗ ವಿವಿಧ ರೂಪಗಳ ವಾದಿಗಳ ಪರಿಚಯ ನಿಮಗ ಪತ್ರಿಕೆ, ಟಿ.ವಿ.ಯಂಥ ಬ್ಯಾರೆ ಬ್ಯಾರೆ ಮಾಧ್ಯಮದಾಗ ಓದಿ ಅಥವಾ ನೋಡಿ ಆಗಿದ್ರೂ ರಾತ್ರಿ ನಿಮ್ಮ ಕನಸ್ನಾಗ ಬಂದು ನಿದ್ದಿ ಕೆಡಿಸಿರ್ಲಿಕ್ಕೂ ಸಾಕು. ನಮ್ ದೇಶದಾಗ ಇವರಿಂದ ಆಗ್ತಿರೋ ಅನಾಹುತಗೋಳಿಂದ ಟಿ.ವಿ. ಪತ್ರಿಕೆಯವರಿಗೆ ಬಿಸಿ ಬಿಸಿ ಸುದ್ದಿ ಮ್ಯಾಲಿಂದ ಮ್ಯಾಲ ಸಿಕ್ತಂದ್ರ ಯಥೇಚ್ಛ ಅದನ್ನ ಪ್ರಚಾರ ಮಾಡಿ ಭೀತಿ ಹುಟ್ಸಿ, ಒಂದು ರೀತಿಲಿ ತಾವೂ ಭಯೋತ್ಪಾದಕರು ಆಗಿರ್ತಾರ (ಪರೋಕ್ಷವಾಗಿ). ಈ ವಾದಿಗಳ ಬೆನ್ನತ್ತಿ ಪೋಲೀಸರು, ಸರಕಾರದೋರು ಪರದಾಡ್ತಾರ.

ಅದ್ರ ನಾನೀಗ ನಿಮ್ಮ ಮುಂದ ಸಾದರ ಪಡಿಸ್ಲಿಕ್ಕ ಹೊಂಟಿರೋ ವಾದಿಗೋಳು ನಮ್ ನಿಮ್ ಮನ್ಯಾಗ ಓಡಾಡ್ಕೊಂಡು ಸುದ್ದಿ ಮಾಡೋವ್ರು.

ಆತಂಕವಾದಿ ಅಂದ ಕೂಡ್ಲೆ ನೆನಪಿಗೆ ಬರೋದು ನಮ್ಮವ್ವ ಪುಟ್ಟವ್ವ. ಬಹುತೇಕ ಈ ಜಾತಿಗೆ ಸೇರ್ದೋರು ತಾವು ಆತಂಕಕ್ಕ ಒಳಗಾಗೋದಲ್ದ, ತಮ್ಮ ಸುತ್ತ ಇರೂ ಮಂದ್ಯಾಗ ಆತಂಕ ಹರಡೋದ್ರಾಗ ನಿಸ್ಸೀಮರು. ಬರೇ ಬಾಂಬ್ ಸಿಡ್ಸಿ, ಗದ್ಲ ಎಬ್ಸಿ ಜನ್ರಾಗ ಭೀತಿ ಹುಟ್ಸಿ ಸುದ್ದಿ ಮಾಡೋವ್ರ ಹಿಂದ ಮಾಧ್ಯಮದ ಮಂದಿ ಅಂದ್ರ ಸುದ್ದಿಗಾಗಿ ಹದ್ದಿನ ಹಾಂಗ ಕಾಯ್ತಿರೋ ವರದಿಗಾರರು ಖಾತ್ರಿ ಇರ್ತಾರ. ನಮ್ಮವ್ವ ಸೃಷ್ಟಿಸೋ ಆತಂಕ ನಮಗಷ್ಟೇ ಸೀಮಿತವಾಗಿರ್ತದ. ಹೊರಗೆ ಹೊಂಟ್ರೆ ಹಿಂಗ್ ಮಾಡು, ಹಾಂಗ್ ಮಾಡಬ್ಯಾಡಂತ ದೊಡ್ಡ ಪಟ್ಟಿ ನಮ್ ಮುಂದಿಟ್ಟಿರ್ತಾಳ. ರಸ್ತೆಯಾಗ ನೋಡ್ಕೊಂಡು ನಡಿ, ಕಾರು ಸ್ಕೂಟರಿನೋರು ಕಣ್ ಕಾಣ್ದವರ ಹಾಗೆ ಡ್ರೈವ್ ಮಾಡ್ತಿರ್ತಾರ. ನಿಮ್ ಕಾಳಜಿ ನಿಮಗಿರ್ಲಿ, ಫುಟ್ ಪಾತ್ ಮ್ಯಾಲೇನ ನಡೀರಿ. ಕಾರು ಡ್ರೈವ್ ಮಾಡೋವಾಗ ಮೊಬೈಲ್ ಬಂದ್ ಮಾಡ್ಬಿಡಿ. ಊರಿಗೆ ಹೋಗ್ಬೇಕಾದ್ರ, ಪ್ರಯಾಣದ ಸಿದ್ಧತೆ ನಡೆಸಿ, ಹೊರಡೋ ಹೊತ್ನಾಗ ಮತ್ತ ಶುರು ಹಚ್ಚಿರ್ತಾಳ. ಸಾಮಾನ ಬರೋಬ್ಬರಿ ಜೋಡಿಸ್ಕೊಂಡ್ಯಾ? ಒಂದು ತಾಸು ಮುಂಚಿತವಾಗಿ ಹೊರಟ್ಬಿಡಿ. ಟ್ರಾಫಿಕ್ ಜಾಮ್ ಆದ್ರ ತಡವಾದೀತು. ತೊಂದ್ರೆ ಆದ್ರ, ರೈಲು, ವಿಮಾನ ನಿಮ್ ಸಲುವಾಗಿ ಕಾಯೂದಿಲ್ಲ. ಹೀಂಗ ಕಾಳಜಿ ಮಾಡ್ತಾ ಆತಂಕ ಸೃಷ್ಟಿ ಮಾಡೋ ವ್ಯಕ್ತಿಗೆ ಖಾತ್ರಿ ಬಿ.ಪಿ. ತೊಂದ್ರೆಯಿಂದ ತ್ರಾಸ ಆಗಿದ್ರ ಆಶ್ಚರ್ಯ ಪಡಬೇಕು. ಮನ್ಯಾಗಿನ ಸದಸ್ಯರಾಗ ಮತ್ತೊಂದು ಬಗಿ ವಾದಿನ ಕಾಣ್ಬಹುದು.

ಮನಸ್ನಾಗ ಠರಾವ್ ಮಾಡ್ಕೊಂಡ್ರಂದ್ರ ಮುಗೀತು. ಅಂದ್ಕೊಂಡದ್ನ ಜಾರಿ ಮಾಡ್ಲಿಕ್ಕ ಕೆಲ್ಸ ಮುಗಿಯೂತನಕ ಮಿಸುಕಾಡ್ದೇ ಕೆಲ್ಸಕ್ಕ ಅಂಟ್ಕೊಂಡ್ಬಿಟ್ಟಿರ್ತಾರ. ಪಟ್ಟು ಹಿಡಿದು ಕೂತ್ರ ಕೆಲ್ಸ ಮುಗಿಯೂ ತನಕ ತೀವ್ರತೆ ತೋರಿಸೋ ತೀವ್ರವಾದಿಯಂದ್ರ ನಮ್ ಚಿಕ್ಕಪ್ಪ ತಿಮ್ಮಪ್ಪ.

ಒಂಟಿ ಕಾಲ್ಮ್ಯಾಲ ನಿಂತು ತಪಸ್ಸು ಮಾಡಿದ್ದ ಭೃಗು ಮಹರ್ಷಿ ಗಂಗಾವತರಣದ ಸಲುವಾಗಿ ಈಶ್ವರನನ್ನು ಒಲ್ಲೈಸಿ, ಗಂಗೆಯನ್ನ ಭೂಮಿ ಮ್ಯಾಲ ಇಳಿಸಿ, ತನ್ನೆಸರಿನ್ನಿಂದ, ಭಗೀರಥ ಪ್ರಯತ್ನಂತ ಮೆಚ್ಗೋ ಹಾಂಗ ತನ್ನ ವಂಶಜರ ಶಾಪ ವಿಮೋಚನೆಗೆ ಶ್ರಮಿಸಿದ ಮಹಾರಾಜ ಭಗೀರಥ; ಅಂದ್ಕೊಂಡಿದ್ದ ಸಾಧಿಸೋ ಈ ತೀವ್ರವಾದಿಗಳ್ನ ಒಂದ್ರೀತೀಲಿ ಹಠವಾದಿಗಳಂತ ಸಹ ಹೇಳ್ಬಹುದಲ್ವೇ.

ನಮ್ ಸುತ್ತ ಮುತ್ತ ಭಯೋತ್ಪಾದಕರು ಮನ್ಯಾಗ ನಮ್ಹಿಂದ ಮುಂದ ಓಡಾಡ್ತಿರ್ತಾರ. ಭಯೋತ್ಪಾದಕರಂದ್ರ ಭಯ ಭೀತಿ ಹರಡೋವ್ರು. ಕಣ್ಣಷ್ಟೇ ಕಾಣೋ ಹಾಂಗ ಕಪ್ಪು ಮುಖವಾಡ ಧರಿಸಿ, ಬಂದೂಕ ಹಿಡಿದು ಓಡಾಡ್ತಿರೋ ದೃಶ್ಯ ಕಣ್ಮುಂದ ಸುಳಿದಾಡ್ತದ. ನಮ್ ಮನ್ಯಾಗ ಓಡಾಡ್ತಿರೋ ಭಯೋತ್ಪಾದಕರಂದ್ರ ನಮ್ ಆರು ವರ್ಷದ ಪೋರ ಕಿಟ್ಟಿ. ಬೆಳ್ಳಂ ಬೆಳಗ್ಗೆ ಕಣ್ಬಿಟ್ಟು ಎದ್ದ ಗಳಿಗೆಯಿಂದ ಹಿಡ್ದು ಮಲಗೋ ತನಕ ಪೋಲೀಸರು ಎಚ್ಚರ ವಹಿಸಿ ಭಯೋತ್ಪಾದಕರ ಠಿಕಾಣಿ ಪತ್ತೆ ಹಚ್ಚೋ ಹಾಂಗ, ಯಾವ ಗಳಿಗ್ಯಾಗ ಏನ್ ಅವಾಂತರ ಮಾಡ್ಬಿಡ್ತಾನೋಂತ ಕಣ್ಗೆ ಎಣ್ಣೆ ಬಿಟ್ಕೊಂಡು, ಅವನ ಹಿಂದ ಯಾರಾದ್ರೊಬ್ರು ಇಲ್ದಿದ್ರ ಅನಾಹುತ ತಪ್ಪಿದ್ದಲ್ಲ. ಗಾಜಿನ ಲೋಟ ಠಣಾರ್, ಹೂವಿನ ಕುಂಡ ಢಮಾರ್, ಡಾಕ್ಟರ್ನ ಕೇಳಿದ್ರ ನಿಮ್ ಪೋರನಿಗೆ ಸೂಪರ್ ಎನರ್ಜಿ ಅದ. ಫುಟ್ ಬಾಲ್ ಆಡ್ಲಿಕ್ಕ ಮೈದಾನಕ್ಕೆ ಕರಕೊಂಡ್ಹೋಗಿ, ಮನ್ಯಾಗ ಅವಂಗ ಚೆಂಡು ಕೈಗೆ ಸಿಗದ ಹಾಂಗ ಬಚ್ಚಿಡಿಂತ ಸಲಹೆ ಕೊಟ್ಟು ಇನ್ನೂರು ರೂಪಾಯಿ ಕನ್ಸಲ್ಟೇಷನಂತ ನಮ್ ಕಿಸೆಯಿಂದ ಅವರ ಕಿಸೆಗೆ ವರ್ಗಾಯಿಸಬೇಕಾದ ಅನಿವಾರ್ಯತೆ.

ಉಗ್ರರಂದ್ರ, ಇನ್ನೊಬ್ರ ಮ್ಯಾಲ ಹಲ್ಲೆ ಮಾಡೋವ್ರಂತ ಮಾತ್ರ ನಮ್ಗ ಗೊತ್ತಿರೋ ಸುದ್ದಿ. ಯಾವ ಮುಲಾಜಿಲ್ದೆ ಜನರನ್ನ ಹತ್ಯೆ ಮಾಡೋವ್ರು ಅಂತ ಓದೀವಿ, ಪರದೆಯ ಮ್ಯಾಲೆ ನೋಡೀವಿ. ನಮ್ ಆಜೂಬಾಜೂದಾಗ ಸುದ್ದ ನಾವು ನೋಡ್ತಿರೋ ಉಗ್ರರು ಸೊಲ್ಪ ಬೇರೆ ರೀತಿಯ ಉಗ್ರರು. ಮೂಗಿನ ತುದ್ಯಾಗ ಸಿಟ್ಟು, ಸಣ್ ಸಣ್ ವಿಷಯದಾಗೂ ಕೋಪ ಮಾಡ್ಕೊಂಡು ತಾಳ್ಮೆ ಕಳಕೊಂಡು ರೌದ್ರಾವತಾರ ಎತ್ತೋ ವ್ಯಕ್ತಿಗೊಳ್ನ ನೋಡಿದ್ರ ಯಾಕ್ಹೀಂಗ ನರಸಿಂಹಾವತಾರ ಎತ್ತಿದಾರಂತ ದಿಗ್ಭ್ರಮೆ ಆಗ್ತದಲ್ವೇ? ಸಾಧ್ಯವಾದರ ಅವರೆಲ್ಲರ್ಗೂ ಯೋಗ, ಪ್ರಾಣಾಯಾಮ, ಧ್ಯಾನ ವಗೈರೆ ಮನೋನಿಗ್ರಹದ ವಿಧಾನಗೊಳ್ನ ಕಲಿಸ್ಲಿಕ್ಕೆ ಪ್ರಯತ್ನ ಮಾಡಿ. ಪ್ರಯತ್ನ ಸಫಲವಾದ್ರ ಸಂತೋಷ ಪಡಿ. ವಿಫಲವಾದ್ರ ರಾಮ್ ಭರೋಸಾ ಅಂತ ದೇವ್ರ ಮ್ಯಾಲ ಭಾರ ಹಾಕಿ ಬಿಟ್ಬಿಡಿ.

ಮ್ಯಾಲ ಹೇಳಿರೋದೆಲ್ಲ ಬ್ಯಾರೆ ರೀತಿ ವಾದಿಗೊಳು ಸಹ ನಮ್ ನಿತ್ಯ ಜೀವನದಾಗ ಪರಿಚಿತರಾಗಿರ್ತಾರ. ನಮ್ ಸುತ್ತ ಓಡಾಡ್ಕೊಂಡಿರೋ ಇವರೆಲ್ರೂ ಅಪಾಯಕಾರಿ ವರ್ಗಕ್ಕೆ ಸೇರಿದವರಲ್ಲ.

ಯಥಾರ್ಥವಾದೀಂತ ಕೇಳಿರ್ಬೇಕಲ್ವೇ? ಇವರಾಗ ಬಹುತೇಕ ಮಂದಿ ಬಹಳ ಪ್ರಾಕ್ಟಿಕಲ್ ಜನಾಂತನೇ ಹೇಳ್ಬಹುದು. ಏನು ಮಾಡಿದರೇನು, ಭವ ಹೆಂಗದೋ ಸ್ವಾಮಿ, ದಾನವಾಂತಕ

ನಿನ್ನ ದಯವಾಗುವ ತನಕ ಅಂತ ದಾಸರು ಹಾಡಿದ್ದಾರೆ. ಬಂದದ್ದನ್ನ ಬಂದ್ಹಾಂಗ ಸ್ವೀಕರಿಸಿ ತೋಚಿದ್ದನ್ನ ತೋಚಿದ್ಹಾಂಗ ಸಾದರ ಪಡಿಸೋ ಮಹಿಳಾ ಮಣಿ ನಮ್ ಪಕ್ಕದ್ಮನೆ ಪಾರ್ವತಮ್ಮ. ಅಕಸ್ಮಾತ್ ಅವರು ಕಾವಿ ಬಟ್ಟೆ ಉಟ್ಟು ಸತ್ಸಂಗಗೊಳ್ಳ ನಡೆಸಿದ್ರ ಜನ ಮುಗಿ ಬೀಳೋದಂತೂ ಗ್ಯಾರಂಟಿ.

ಪಾರ್ವತಮ್ಮ, ನಿಮ್ ಮಗ ಈ ಸಲ ಪಿ.ಯು. ಪರೀಕ್ಷೆಯಾಗ ಹ್ಯಾಂಗ ಮಾಡ್ಯಾನ? ಮುಂದೇನು ಮಾಡ್ಬೇಕಂತ ವಿಚಾರ ಮಾಡ್ಯಾನೇನು? ಅಂತ ಲೋಕಾಭಿರಾಮವಾಗಿ ಉಭಯ ಕುಶಲೋಪರಿ ಹಂಚ್ಕೊಂಡಾಗ ಅವರ ಜವಾಬು ಖಾತ್ರಿ ಹೀಂಗೆ ಕೊಡ್ತಾರ. ಹಣೇಲಿ ಬರೆದ ಹಾಂಗಾಗ್ತದ ಬಿಡ್ರಿ. ಇಲ್ದಿದ್ದ ವಿಚಾರ ತಲ್ಯಾಗ ತುಂಬ್ಕೊಂಡು ತಲಿ ಕೆಡಿಸ್ಕೊಬಾರ್ದು. ಭಗವಂತ ಬಿಟ್ಟ ದಾರಿ, ಆತನ ದಯೆಯಿದ್ರ ಸಾಕು. ಯೋಗಕ್ಷೇಮ ವಿಚಾರಿಸಿಕೊಂಡ್ರೆ ನಮಗೆ ಸಿಗೋದು ಬಿಟ್ಟಿ ಸಲಹೆಗೊಳೂ.

ಜೀವನದಾಗ ಎಲ್ಲಾನೂ ಸಾಧಿಸ್ಬೇಕು. ಕಾರ್ನಲ್ಲಿ ಅಡ್ಡಾಡಬೇಕು. ಬೇಡಿದ್ದೆಲ್ಲ ನನಗೆ ಸಿಗಬೇಕು. ನಾನು ಮಾಡೋ ಎಲ್ಲ ಕೆಲಸದಾಗ ಜನ ಸಾಧಿಸ್ಬೇಕಂತ ಹೇಳೋವ್ರು ಆಶಾವಾದಿಗೊಳು. ಜಗವನ್ನೇ ಗೆಲ್ತೇನೆಂತ ಹಿಂದೂಸ್ತಾನಕ್ಕೆ ಬಂದ ಅಲೆಗ್ಸಾಂಡರ್ ಚರಿತ್ರೆಯ ಪುಟದಾಗ ಅಲೆಗ್ಸಾಂಡರ್ ದಿ ಗ್ರೇಟ್ಂತ ಪ್ರಸಿದ್ಧನಾದ. ಕೈಗೆತ್ತಿಕೊಂಡ ಕೆಲಸದಾಗ ಜನರಿಗೆ ನಿಶ್ಚಯವಾಗಿ ಆಶಾವಾದವಿದ್ರ ಗೆಲುವಿನ ಹಾದಿ ಸುಗಮವಾಗ್ತದ. ನಮ್ಮಣ್ಣ ಜಯಣ್ಣ ಈ ವರ್ಗಕ್ಕೆ ಸೇರಿದೋನು. ಹಿಡ್ದ ಕೆಲ್ಸ ಮಾಡಿ ಮುಗಿಸೋ ತನಕ ಅನ್ನ ನೀರಿನ ಚಿಂತಿಯಿಲ್ದೆ ತದೇಕ ಚಿತ್ತನಾಗಿ ದುಡಿಯೋ ಆಶಾವಾದಿ. ಆದರೆ ಫಲ ದುಡ್ಡು ಆಸ್ತಿಗಷ್ಟೇ ಸೀಮಿತವಾಗಿರಲಿಲ್ಲ. ಬಿ.ಪಿ. ಷುಗರ್ ಸಹ ಬೋನಸ್ಸಾಗಿ ಸಿಗ್ತದ.

ಮುಂದ ದೃಷ್ಟಿ ಹಾಯಿಸಿದರ ಏತಿ ಅಂದ್ರ ಪ್ರೇತೀಂತ ಹೇಳೋವ್ರು, ತಾನು ಹಿಡಿದ ಮೊಲಕ್ಕೆ ಮೂರೇ ಕಾಲಂತ ವಾದ ಮಾಡೋ ಭೂಪರು ನಿಮಗೂ ಸಿಕ್ಕಿರಬೇಕಲ್ವೆ? ಇನ್ನೊಬ್ರ ಹೇಳಿಕೆಯನ್ನ ಖಂಡ ತುಂಡವಾಗಿ ವಿರೋಧಿಸಿ ಅದು ಹಾಂಗಲ್ಲ ಹೀಂಗಂತ ವಾದ ಮಾಡಿ ಆತ್ಮ ತೃಪ್ತಿಯಿಂದ ಬೀಗೋ ವ್ಯಕ್ತಿ ನನ್ನ ಶಿಷ್ಯ ಭೂಪೇಂದ್ರ. ಸತ್ಯವಾಕ್ಯಕೆ ಬೆಲೆ ಅದಂತ ಹೇಳಿದ್ರ ಸತ್ಯವೇ ಮಿಥ್ಯಂತ ವಾದ ಮಾಡೋ ಭೂಪ; ತಾನು ಹೇಳಿದ್ದೇ ಸರೀಂತ ಪಟ್ಟು ಹಿಡಿದು ಕೂರೋ ವ್ಯಕ್ತಿ; ಇಂತಹವರನ್ನ ವಿತಂಡ ವಾದೀಂತ ಹೇಳಬಹುದಲ್ವೆ? ಇವರ ವಿತಂಡ ವಾದಕ್ಕ ಬೇಸತ್ತು ಹಣೆ ಹಣೆ ಚಚ್ಕೊಂಡು ಅಲ್ಲಿಂದ ಕಾಲ್ಕಿತ್ತು ಈತನ ಜೋಡಿ ವಾದ ಮಾಡೋದು ಒಂದ, ಗೋಡೆಗೆ ತಲಿ ಚಚ್ಕೊಳ್ಳೋದೂ ಒಂದಂತ ಅರಿವಾದ್ರ ನಾವು ಬಚಾವಾಗ್ತೀವಿ. ನಿಮ್ಗೂ ಇವರೆಲ್ಲರ ಪರಿಚಯ ಆಗಿರ್ಬೇಕಲ್ವೆ? ಇವರನ್ನೆಲ್ಲ ಹುಡುಕ್ತ ಪತ್ರಿಕೆ, ಮಾಧ್ಯಮಗಳ ಕಡಿ ಹೋಗೂ ಕಾರಣವಿಲ್ಲ. ನಿಮ್ಮ ಮನ್ಯಾಗ, ನಮ್ಮ ಮನ್ಯಾಗ ಅಜಾ ಬಾಜೂದಾಗ ಇಂತಹ ವಾದಿಗಳು ನಮಗ ಭೆಟ್ಟಿಯಾಗ್ತಿರ್ತಾರ.

ಸೋಮು ಸಿಕ್ಕಿಕೊಂಡ ಸ್ಕೀಮು

- ಸುಕೇಶವ

ದೀಪಾವಳಿ ಬಂತೆಂದರೆ ಎಲ್ಲಾ ಅಂಗಡಿಗಳಲ್ಲೂ ಹಬ್ಬದ ಉಡುಗೊರೆಗಳದೇ ಸಂಭ್ರಮ. ಒಂದು ಕೊಂಡರೆ ಒಂದು ಫ್ರೀ, ಪ್ರತಿಶತ 30, 40, 50 ಹೆಚ್ಚೆಂದರೆ 70 ರ ವರೆಗೆ ರಿಯಾಯಿತಿ. ಇದಕ್ಕೇ ಕಾಯುತ್ತಿದ್ದರೇನೋ ಅನ್ನುವ ಹಾಗೆ ಜನ ಅಂಗಡಿಗಳಿಗೆ ಮುಗಿ ಬೀಳುತ್ತಾರೆ. ಈ ವಿಚಾರದಲ್ಲಿ ಸೋಮು ಅದೃಷ್ಟವಂತ. ಯಾಕೆಂದರೆ ಸೋಮಿಗೆ ಈ ಸೇಲ್‌ಗಳಲ್ಲಿ ನಂಬಿಕೆ ಇಲ್ಲ. ಅವರು ನೂರು ರೂಪಾಯಿ ಹೆಚ್ಚು ಮಾಡಿ ಐವತ್ತು ರೂಪಾಯಿ ಕಡಿಮೆಗೆ ಮಾಡ್ತಾರೆ. ಇದರಿಂದ ನಮಗೇ ನಷ್ಟ ಅಂತ ಅವಳು ಇಂಥಾದ್ದಿಕ್ಕೆಲ್ಲ ಸೊಪ್ಪು ಹಾಕುವವಳಲ್ಲ. ಜೊತೆಗೆ ಇಂಥಾ ಕಡೆಗೆ ಹೋಗುವವರನ್ನೂ ಅವಳು ತಡೆಯುತ್ತಾಳೆ. ಹೀಗಾಗಿ ದೀಪಾವಳಿ, ಉಗಾದಿ, ಸಂಕ್ರಾಂತಿ ಹಬ್ಬಗಳು ಬಂತೆಂದರೆ ಸೋಮುಗೆ ಅಂಥಾ ಖರ್ಚೇನೂ ಇರೋಲ್ಲ. ಹೋದ ಹಬ್ಬದಲ್ಲಿ ಸೋಮಿ ಹೊಸ ಸೀರೆ ಬೇಕು ಅಂದಾಗ ಅವನು ಒಂದು ಥಿಯರಿ ಹೇಳಿದ್ದ. ನೋಡು ಹೆಂಗಸರು ಏನಿದ್ದರೂ ನಲವತ್ತರ ಒಳಗೆ ಇದ್ದಾಗ ಮಾತ್ರ ಹೊಸ ಸೀರೆ, ಹೊಸ ರವಿಕೆ, ಹೊಸ ಸರ, ಹೊಸ ಬಳೆ ಎಲ್ಲ ಚಂದ. ನಲವತ್ತಾದ ಮೇಲೆ ಅವರನ್ನು ಅವರ ಗಂಡಂದಿರೇ ಸರಿಯಾಗಿ ನೋಡೋಲ್ಲ, ಇನ್ನು ಆಚೆಕಡೆಯವರು ಕಣ್ಣೆತ್ತಿಯೂ ನೋಡೋಲ್ಲ ಅಂದ ಮೇಲೆ ಅವರು ಇನ್ನು ಯಾರಿಗೆ ಅಲಂಕಾರ ಮಾಡ್ಕೊಬೇಕು. ಮಡೀಕೋಲಿಗೆ ಸೀರೆ ಸುತ್ತಿದ ಹಾಗೆ ಏನೋ ಒಂದು ಮೈ ಮೇಲೆ ಸುತ್ತಿಕೊಂಡರಾಯಿತು ಅಂತ ಕಾಮೆಂಟ್ ಮಾಡಿ ಸೋಮಿ ಹತ್ರ ಸಖತ್ ಉಗಿಸಿಕೊಂಡಿದ್ದ. ಜೊತೆಗೆ ಅವಳು ಒಂದು ವಾರ ಮಾತು ಬಿಟ್ಟಿದ್ದಳು. ಆಮೇಲೆ ಅವನು ಸಾರಿ ಕಣೆ ನಾನು ಹೇಳಿದ್ದು ನಿನಗಲ್ಲ, ನಿನ್ನ ಬಿಟ್ಟು ಬೇರೆ ಎಲ್ಲ ಹೆಂಗಸರಿಗೂ ಇದು ಅನ್ವಯಿಸುತ್ತೆ ಅಂತ ಏನೋ ಒಂದು ಚೋಡಿಸಿದ್ದ.

ಹಬ್ಬ ಇನ್ನೊಂದು ವಾರ ಇದೆ ಅನ್ನುವಾಗ ಸೋಮು ಮನೇಲೇ ಇದ್ದ. ಪೇಪರ್ ಓದ್ತಾ ಕೂತಿದ್ರೆ ಅದರಲ್ಲಿ ಬರೀ ಸೇಲ್ ವಿಚಾರನೇ. ದೊಡ್ಡ ದೊಡ್ಡ ಜಾಹೀರಾತುಗಳನ್ನು ಕೊಟ್ಟು ಜನರನ್ನು ವಂಚನೆ ಮಾಡ್ತಾರೆ ಅಂತ ತಾನೇ ಗೊಣಗಿಕೊಳ್ತಿದ್ದ. ಪೇಪರಿನಿಂದ ದೃಷ್ಟಿ ಬದಲಾಯಿಸಿದರೆ ಹಲ್ಲು ಕಿರಿದುಕೊಂಡು ಅವನನ್ನೇ ನೋಡುತ್ತಿರುವ ಒಂದು ಮುಖ ಕಾಣಿಸಿತು. ಅಪರಿಚಿನೊಬ್ಬ ಹೀಗೆ ಹಲ್ಲು ಕಿರಿತಾನೆ ಅಂದರೆ ಅವನು ಮಾರಾಟದ ಪ್ರತಿನಿಧಿ ನೇ ಇರಬೇಕು ಅನಿಸಿತು ಸೋಮುಗೆ .

ಹೆ. ಹೆ. ಹೆ. ಹೆ. ಏನ್ಸಾರ್ ಪೇಪರ್ ಓದ್ತಿದ್ರಾ ಅಂದ ಬಂದಿದ್ದವನು

ಇಲ್ಲ ಪೇಪರಿನಿಂದ ಮುಖ ಮುಚ್ಕೊಂಡು ಕೂತಿದ್ದೆ ಅಂದ ಸೋಮು

ಯಾಕ್ಸಾರ್, ಬೆಳಗ್ಗೆ ಬೆಳಗ್ಗೆ ಹೆಂಡ್ತಿ ಹತ್ರ ಉಗಿಸಿಕೊಂಡ್ರಾ

ನನ್ನ ಹೆಂಡ್ತಿ ಹತ್ರ ನಾನು ಉಗಿಸಿಕೊಂಡ್ರೆ ನಿಂಗೇನಯ್ಯ

ನಂಗೇನೂ ಇಲ್ಲ ಸಾರ್. ಈಗೀಗ ಜನ ಬೇರೆಯವರ ಹೆಂಡ್ತಿ ಹತ್ರ ಉಗಿಸಿಕೊಳ್ಳೊದು

ಜಾಸ್ತಿಯಾಗಿದೆ ಅದಕ್ಕೆ ಕೇಳ್ದೆ. ಆಮೇಲೆ ಈ ಉಗಿತವೇ ಡೈವೋರ್ಸ್ಗೆ ಒಂದು ಕಾರಣ ಅಂತ ನಿಮಗೆ ಗೊತ್ತಾ ಸಾರ್

ಅದು ಹ್ಯಾಗಯ್ಯ

ಈಗ ನೋಡಿ ಸಾರ್, ನೀವು ನಿಮ್ಮ ಹೆಂಡ್ತಿಗೆ ಕಾಟ ಕೊಡ್ತೀರ ಅವರು ನಿಮಗೆ ಉಗೀತಾರೆ, ಸಖತ್ ಕೋಪ ಬರುತ್ತೆ ಯಾಕಾದ್ರೂ ನಿಮ್ಮನ್ನು ಮದುವೆಯಾದೆನೋ ಅನಿಸಿಬಿಡುತ್ತೆ ಆಗ ಅವರು ನನ್ನ ಹತ್ರ ಬರ್ತಾರೆ. ಅಲ್ಲಿಗೆ ಇದು ಡೈವೋರ್ಸ್ಗೆ ಮೊದಲನೇ ಸ್ಟೆಪ್ಪು ತಾನೇ

ಅಲ್ಲಯ್ಯ ನನ್ನ ಹೆಂಡ್ತಿ ನನ್ನ ಹತ್ರ ಜಗಳ ಆಡಿದರೆ ನಿನ್ನ ಹತ್ರ ಬರ್ತಾಳಾ. ಯಾಕಯ್ಯ ಅಂಥಾ ಆಸೆ ಇಟ್ಕೊಂಡಿದೀಯಾ ನಿನಗೇನು ತಲೆ ಕೆಟ್ಟಿದೆಯಾ

ಹಾಗಲ್ಲ ಸಾರ್. ನನ್ಹತ್ರ ಅಂದ್ರೆ ನನ್ಹತ್ರನೇ ಅಲ್ಲ. ಒಂದು ಉದಾಹರಣೆ ಕೊಟ್ಟೆ ಅಷ್ಟೆ ನಿಮ್ಮ ಹೆಂಡ್ತಿನ ನೀವು ಫ್ರೀಯಾಗಿ ಕೊಟ್ರೂ ನನಗೆ ಬೇಡ ಸಾರ್, ನಿಮ್ ಹೆಂಡ್ತಿ ಸಖತ್ ತರ್ಲೆ ಅಂತೆ ಹೌದಾ ಸಾರ್.

ತೆಗೆದು ಬಿಟ್ಟಾಂದ್ರೆ ಮೂವತ್ತೆರಡು ಹಲ್ಲುಗಳೂ ಮುನ್ನೂರು ತುಂಡಾಗಿಬಿಡಬೇಕು. ಬಿಡಯ್ಯ ಗಾಡಿ ಅಂತ ಸೋಮು ಸಖತ್ತಾಗಿ ರೇಗಿದ.

ರೇಗಬೇಡಿ ಸಾರ್. ಹೋಗಲಿ ಬಿಡಿ ನಾನು ಉದಾಹರಣೆನೇ ಕೊಡಲ್ಲ. ಈಗ ಹಬ್ಬಕ್ಕೆ ನಮ್ಮಲ್ಲಿ ಒಂದು ಸಖತ್ತಾಗಿರೊ ಸ್ಕೀಂ ಇದೆ ನೀವು ಭಾಗವಹಿಸಿ ಸಾರ್

ಯಾವ ಸ್ಕೀಮೂ ಬೇಡ, ಸ್ಕ್ಯಾಮೂ ಬೇಡ ಹೋಗಯ್ಯ

ಅಯ್ಯೋ ಅದ್ಯಾಕೆ ಹಾಗೆ ಹೆದರ್ಕೊತೀರ ಸಾರ್. ನಮ್ಮ ಸ್ಕೀಂನಲ್ಲಿ ಕೊಳ್ಳೋದೇನು ಇಲ್ಲ ಸಾರ್

ಅಂದ್ರೆ ಅದೆಂಥಾ ದರಿದ್ರ ಸ್ಕೀಮಯ್ಯ. ಹಾಗಾದ್ರೆ ನೀವು ಹಾಕೋ ಟೋಪಿಗೆ ಬೆಲೆನೇ ಇಲ್ಲ

ಇಲ್ಲಿ ಕೇಳಿ ಸಾರ್. ಈಗ ನೀವು ನಿಮ್ಮ ಹೆಂಡ್ತಿಗೆ ಬೈದಿದೀರಾ, ಹೊಡೆದಿದೀರಾ, ಜಗಳ ಆಡಿದೀರಾ ಅಂತ ಯಾರಾದ್ರೂ ಕೇಳಿದರೆ ಏನು ಹೇಳ್ತೀರ

ಏನು ಹೇಳ್ತೀನಿ ಇರೋ ವಿಚಾರನೇ ಹೇಳ್ತಿನಿ ಹೊಡೆದಿದ್ರೆ ಹೊಡೆದಿದೀನಿ ಅಂತೀನಿ, ಬೈದಿದ್ರೆ ಬೈದಿದೀನಿ ಅಂತೀನಿ ಇಲ್ಲದಿದ್ದರೆ ಇಲ್ಲ ಅಂತೀನಿ

ಅದೇ ನೋಡಿ ಸ್ವಾರಸ್ಯ. ನಮ್ಮ ಸ್ಕೀಂನಲ್ಲಿ ಜಗಳ ಆಡೋ ದಂಪತಿಗಳಿಗೆ ಸಖತ್ತಾದ ಬಹುಮಾನಗಳಿವೆ. ಯಾರು ಬೇಕಾದರೂ ಭಾಗವಹಿಸಬಹುದು.

ಅಂದ್ರೆ ಗಂಡ ಹೆಂಡ್ತಿನ ಜಗಳ ಆಡಿಸಿ ಮಜಾ ತಗೋತೀರಾ ಅಂತ ಕೇಳಿದ ಸೋಮು.

ಇಲ್ಲ ಸಾರ್, ಅವರಿಗೇ ಮಜಾ ಕೊಡ್ತಿವಿ. ಜಗಳ ಆಡಿದ ದಂಪತಿಗಳಿಗೆ ನಾವು ಬಹುಮಾನ ಕೊಡ್ತಿವಲ್ಲ ಅದರಿಂದ ಅವರು ಏನು ಬೇಕೋ ಅದನ್ನು ಕೊಂಡ್ಕೊಬಹುದಲ್ಲ. ಅದೊಂಥರಾ ಲಾಭನೇ ಅಲ್ವಾ

ಅಂದ್ರೆ ಜಗಳ ನ್ಯಾಚುರಲ್ ಆಗಿ ಆಡಬೇಕೋ ಇಲ್ಲ ನಾಟಕ ಆಡಬೇಕೋ

ನ್ಯಾಚುರಲ್ ಆಗಿ ಆಡಬೇಕು ಸಾರ್. ಅದು ತುಂಬಾ ಸಹಜವಾಗಿರಬೇಕು. ಜಗಳ ಆಡ್ತಾ ಆಡ್ತಾ ಗಂಡ ಹೆಂಡ್ತಿಗೆ ಒಂದೇಟು ಹಾಕಿದರೆ ಬೋನಸ್ ಪಾಯಿಂಟ್ ಬರುತ್ತೆ. ಅದರಿಂದ ಹೆಚ್ಚು ಬಹುಮಾನ ಬರುತ್ತೆ

ಒಂದು ವೇಳೆ ಹೆಂಡ್ತಿನೇ ಗಂಡನಿಗೆ ಹೊಡೆದರೆ

ಇನ್ನೊಂದು ಪಟ್ಟು ಬಹುಮಾನ ಜಾಸ್ತಿ. ನೀವು ಟ್ರೈ ಮಾಡಿ ಸಾರ್.

ಎಲ್ಲ ಸರಿ ಇದರಿಂದ ನಿಮಗೇನು ಲಾಭ ಆಗುತ್ತೆ ಅಂತ

ಇದರಲ್ಲಿ ಒಂದು ಕಂಡೀಷನ್ ಇದೆ ಸಾರ್. ಇದರಲ್ಲಿ ಬಹುಮಾನ ಗೆದ್ದ ದಂಪತಿಗಳು ನಮ್ಮ ಷೋರೂಮ್‌ನಲ್ಲೇ ಪದಾರ್ಥ ಕೊಂಡ್ಕೊಬೇಕು ನಮ್ಮಲ್ಲಿ ಪೊರಕೆಯಿಂದ ಹಿಡಿದು ಚಪ್ಪಲಿ ವರೆಗೆ ಎಲ್ಲಾ ಐಟಮ್‌ಗಳು ಸಿಕ್ಕುತ್ವೆ. ಐಡಿಯಾ ಒಂಥರಾ ಚನ್ನಾಗಿದೆ ಅಲ್ವಾ ಅಂದ ಸೋಮು ಆಸೆಯಿಂದ

ಚನ್ನಾಗಿರೋದೇನು ಸಾರ್ ಜನ ನಮ್ಮ ಸ್ಕೀಮಿಗೆ ಮುಗಿ ಬೀಳ್ತಾ ಇದಾರೆ.

ಸರಿ ಯಾವತ್ತು ಟ್ರೈ ಮಾಡಬೇಕು ಹೇಳು ಅವತ್ತು ನಾನು ರೆಡಿ.

ಸರಿ ಸಾರ್. ಇದು ನಮ್ಮ ಕಂಪನಿಯ ವಿವರಗಳು. ನೀವು ನಾಡಿದ್ದು ಅಂದ್ರೆ ಸೋಮವಾರವಂದು ಬೆಳಗಿನಿಂದ ಸಾಯಂಕಾಲದವರೆಗೆ ನಿಮ್ಮ ಹೆಂಡತಿ ಹತ್ತಿರ ಜಗಳ ಆಡಬೇಕು. ಜಗಳದ ಫೋರ್ಸ್ ಹೇಗಿರುತ್ತೆ ಅಂತ ನೋಡಿ ನಿಮಗೆ ಬಹುಮಾನ ಕೊಡ್ತಿವಿ.

ಅಂದ್ರೆ ನಾವು ಜಗಳ ಆಡೋದನ್ನ ನೀವು ನೋಡ್ತಾ ನಿಂತಿರ್ತೀರಾ.

ಅದು ನಿಮಗೆ ಬೇಡ ನಮ್ಮ ಬೇಹುಗಾರರು ನಿಮ್ಮನ್ನ ನಿಮಗೆ ಕಾಣದ ಹಾಗೆ ವಾಚ್ ಮಾಡ್ತಾ ಇರ್ತಾರೆ.

ಅಂದ್ರೆ ನಾವು ಮನೆ ಬಾಗಿಲು ತೆಕ್ಕೊಂಡು ಜಗಳ ಆಡಬೇಕಾ

ಬೇಡ ಹೊರಗಡೆ ಹೋದಾಗ, ಸಿನಿಮಾಕ್ಕೆ ಹೋದಾಗ, ಹೀಗೆ ಯಾವಾಗ ಬೇಕಾದರೂ ಜಗಳ ಆಡಿ ಆದರೆ ಅದು ಕೋಳಿ ಜಗಳದ ಹಾಗೆ ಮಾತ್ರ ಇರಬಾರದು.

ಸರಿ ಸಾರ್ ಅಂದ ಸೋಮು. ಆ ವ್ಯಕ್ತಿ ಹೊರಟು ಹೋದ

ಸೋಮು ಮದುವೆಯಾದಾಗಿನಿಂದ ಸೋಮಿಯೊಂದಿಗೆ ಜಗಳ ಆಡೋದಕ್ಕೆ ಅವಕಾಶನೇ ಸಿಕ್ಕಿಲ್ಲ. ಇವನು ಬಾಯಿ ಬಿಟ್ಟರೆ ಅವಳು ಬಾಯಿ ಮುಚ್ಚಿಸಿಬಿಡುತ್ತಾಳೆ. ಸದ್ದು ಸದ್ದು ಅಂದುಬಿಟ್ಟರೆ ಆಯ್ತು ಇನ್ನೊಂದು ಗಂಟೆ ಸೋಮು ಸದ್ದು ಮಾಡೋ ಹಾಗೇ ಇಲ್ಲ. ಅಂಥಾದ್ರಲ್ಲಿ ಈಗ ಅವಳೊಂದಿಗೆ ಹೇಗೆ ಜಗಳ ಆಡೋದು ಅಂತ ಯೋಚಿಸಿದ. ಆದರೆ ಬಹುಮಾನದ ಆಸೆಗೆ ಅವನಲ್ಲಿ ಹುಮ್ಮಸ್ಸು ಬಂತು.

ಎಂದಿನಂತೆ ಸೋಮವಾರ ಬಂತು. ಅವತ್ತು ಸೋಮು ಆಫೀಸಿಗೆ ಹೋಗೋದು ಬೇಡ ಅಂತ ನಿರ್ಧಾರ ಮಾಡಿದ್ದ. ಆದರೆ ಸೋಮು ಆಫೀಸಿಗೆ ಚಕ್ಕರ್ ಹೊಡೆದರೆ ಸೋಮಿಗೆ ತಡ್ಕೊಳೋಕೆ ಆಗ್ತಿರಲಿಲ್ಲ. ಸೋಮು ಆಫೀಸಿಗೆ ಹೋಗದ ಕಾರಣಕ್ಕೆ ಎಷ್ಟೋ ಸಾರಿ ಸೋಮಿ ಅವನಿಗೆ ಬೆಂಡೆತ್ತಿದಾಳೆ. ಸರಿ ಅವತ್ತು ಅವರ ಜಗಳಕ್ಕೆ ಅದೇ ಕಾರಣ ಸಾಕಾಯ್ತು

ಏನಿವತ್ತು ಆಫೀಸಿಗೆ ಹೋಗೋ ಲಕ್ಷಣ ಕಾಣ್ತಾ ಇಲ್ಲ ಅಂತ ಸೋಮಿ ಅಂದಿದ್ದೇ ತಡ

ಸೋಮು ನನ್ನ ಆಫೀಸು ಕಣೆ. ನನ್ನ ಬಾಸು ಕಣೆ, ನನ್ನ ಸಂಬಳ ಕಣೆ. ನಾನು ಇಷ್ಟ ಬಂದ್ರೆ ಹೋಗ್ತಿನಿ ಇಲ್ಲದಿದ್ದರೆ ಇಲ್ಲ ಕಣೆ ಅಂತ ಜಗಳಕ್ಕೆ ಷುರು ಮಾಡೇ ಬಿಟ್ಟ.

ಸುಮ್ನೆ ಸುಮ್ನೆ ಮನೇಲಿ ಕುಕ್ಕರ ಬಡ್ಕೊಂಡು ನನ್ನನ್ನ ಗೋಳು ಹುಯ್ಕೊಂಡ್ರೆ ನಾನು ಸುಮ್ಮನಿರಲ್ಲ. ಮೊದಲು ಆಫೀಸಿಗೆ ತೊಲಗ್ರೀ ಅಂದಳು ಸೋಮಿ

ನನಗೆ ರೋಫ್ ಹೊಡೆಯೋಕೆ ನೀನ್ಯಾರೆ, ನಾನು ನಿನಗೆ ತಾಳಿ ಕಟ್ಟಿದೀನಿ ನೀನು ನನಗೆ ತಾಳಿ ಕಟ್ಟಿಲ್ಲ ತಿಳ್ಕೊ ನಾನು ನೀನು ಹೇಳಿದ ಹಾಗೆ ಕೇಳಲ್ಲ ಆದ್ರೆ ನೀನು ನಾನು ಹೇಳಿದ ಹಾಗೆ ಕೇಳಬೇಕು ಗೊತ್ತಾಯ್ತಾ. ಅಷ್ಟಕ್ಕೂ ನನ್ನನ್ನ ಪ್ರಶ್ನೆ ಮಾಡೋ ಅಧಿಕಾರ ನಿನಗೆ ಯಾರೇ ಕೊಟ್ಟೋರು.

ಅಂತ ಸೋಮು ಅಂದ ತಕ್ಷಣ ಸೋಮಿ ಬೆಕ್ಕಸ ಬೆರಗಾಗಿ ನಿಂತೇಬಿಟ್ಟಳು. ಇವರಿಗೆ ಅದ್ಯಾವ ದೆವ್ವ ಬಂದು ಮೆಟ್ಕೊಂಡಿದೆ ಅಂತ ಅವಳಿಗೆ ಅರ್ಥವಾಗಲಿಲ್ಲ. ಸೋಮಿ ಯಾವಾಗ ಸ್ವಲ್ಪ ತಣ್ಣಗಾದಳೋ ಸೋಮು ಸಿಕ್ಕಾಪಟ್ಟೆ ರೋಫ್ ಹೊಡೆದ. ಸೋಮಿನೂ ದಬಾಯಿಸೋಕೆ ಷುರು ಮಾಡಿದಳು. ಇವತ್ತು ಇವರಿಗೆ ಏನಾಗಿದೆ ಅಂತ ಅಕ್ಕಪಕ್ಕದ ಮನೆಯವರೂ ಕಿವಿಯಾದರು.

ಹೀಗೇ ಅವರ ಜಗಳ ಮುಂದುವರೀತು. ಇದರಿಂದ ಸೋಮುಗೆ ತುಂಬಾ ಖುಷಿಯಾಯಿತು. ಸೋಮುಗೆ ಸ್ಕೀಂನವನು ಇಲ್ಲೆಲ್ಲಾದರೂ ಅವಿತಿಟ್ಕೊಂಡು ನೋಡುತ್ತಿರಬಹುದು ಅಂತ ಅನಿಸಿತು. ಜೋರಾಗೇ ಜಗಳ ಆಡಿದ. ಇವರು ಇವತ್ತು ಯಾಕೆ ಹೆಂಡ ಕುಡಿದೋರ ಹಾಗೆ ಆಡ್ತಿದಾರೆ ಅಂತ ಸೋಮಿಗೆ ಅರ್ಥ ಆಗಲಿಲ್ಲ. ಇದೂ ಒಂದು ವರಸೆ ಇರಲಿ ಅಂತ ಸೋಮಿ ಏನೋ ರೋಫ್ ಹಾಕಿದಾಗ ಸೋಮು ಕೈ ಎತ್ತಿ ಒಂದು ಬೀಸೇ ಬಿಟ್ಟ. ಆ ಹೊಡೆತ ಸೋಮಿ ಕಪಾಲಕ್ಕೆ ಬಿದ್ದು ಅವಳು ಕೆಳಗೆ ಬಿದ್ದು ಹೋದಳು.

ಸೋಮು ಗೆದ್ದವನಂತೆ ಬೀಗಿದ ಆದರೆ ಕ್ಷಣ ಮಾತ್ರದಲ್ಲಿ ಗಾಭರಿಯಾದ. ಯಾಕೆಂದರೆ ಸೋಮಿ ಏಳಲೇ ಇಲ್ಲ ಅವಳಿಗೆ ಏನಾಯ್ತೋ ಅಂತ ಗಾಭರಿಯಿಂದ ಸೋಮಿ ಸೋಮಿ ಅಂದ. ಅವಳು ಅಲ್ಲಾಡುತ್ತಲೇ ಇರಲಿಲ್ಲ. ನೀರು ತಟ್ಟಿದ. ಏನೂ ಪ್ರಯೋಜನವಾಗಲಿಲ್ಲ. ಇದೇನಪ್ಪ ಏನೋ ಮಾಡಕ್ಕೆ ಹೋಗಿ ಏನೋ ಆಯ್ತಲ್ಲ ಅಂತ ಗಾಭರಿಯಿಂದ ಅಕ್ಕಪಕ್ಕದವರನ್ನು ಕರೆದು ಅವರ ಸಹಾಯದಿಂದ ಸೋಮಿನ ಆಸ್ಪತ್ರೆಗೆ ಕರೆದುಕೊಂಡು ಹೋದ.

ಈ ನಡುವೆ ನಾನು ಗೆದ್ದಿದೀನೋ ಇಲ್ಲವೋ ಅಂತ ಸೋಮುಗೆ ಗೊತ್ತಾಗಲಿಲ್ಲ. ಗೊತ್ತಾಗಬೇಕಾದರೆ ಆ ಕಂಪನಿಯಿಂದ ಫೋನು ಬರಬೇಕು ಇಲ್ಲ ಆ ವ್ಯಕ್ತಿಯೇ ಬರಬೇಕು.

ಸೋಮಿನ ಡಾಕ್ಟರು ಪರೀಕ್ಷಿಸಿದರು. ಸೋಮು ಹೊರಗೆ ಕಾಯ್ತಾ ನಿಂತ

ಒಂದು ಗಂಟೆ ಆದ ಮೇಲೆ ಡಾಕ್ಟರು ಹೊರಬಂದರು

ನಿಮಗೆ ಒಂದು ಸಂತೋಷದ ಸುದ್ದಿ ಮತ್ತೆ ಒಂದು ದುಃಖದ ಸುದ್ದಿ ಯಾವುದು ಮೊದಲು ಹೇಳಲಿ ಅಂತ ಕೇಳಿದರು

ಯಾಕ್ಸಾರ್ ಹೀಗೆ ಗಾಬರಿ ಮಾಡ್ತೀರ ಯಾವುದಾದರೂ ಒಂದು ಹೇಳಿ ಸಾರ್ ಅಂದ ಸೋಮು.

ನೋಡಿ ನೀವು ಹೊಡೆದ ರಭಸಕ್ಕೆ ನಿಮ್ಮ ಹೆಂಡತಿಗೆ ತಲೆಗೆ ತುಂಬಾ ಪೆಟ್ಟು ಬಿದ್ದು ಅವರಿಗೆ ಒಂದು ಭಾಗದ ನೆನಪಿನ ಶಕ್ತಿಯೇ ಹೋಗಿದೆ. ಅದು ವಾಪಸ್ ಬರಬೇಕಾದರೆ ತುಂಬಾ ವರ್ಷಗಳೇ ಬೇಕಾಗಬಹುದು. ಅವರು ಯಾರನ್ನೂ ಗುರುತಿಸೋ ಸ್ಥಿತೀಲಿಲ್ಲ.

ಸೋಮು ತಲೆ ಮೇಲೆ ಕೈ ಹೊತ್ತು ಕೂತ. ಅಯ್ಯೋ ದೇವರೇ ಇನ್ನೇನಪ್ಪ ಗತಿ ಅಂತ.

ಅದೇನೋ ಸಂತೋಷದ ಸುದ್ದಿ ಅಂದ್ರಲ್ಲ ಅದೇನು ಡಾಕ್ಟರೇ ಅಂತ ಕೇಳಿದ/

ಅದಾ. ಅವರಿಗೆ ಈಗ ಮೂರು ತಿಂಗಳಾಗಿದೆ. ಅಂದ್ರೆ ನೀವು ಅಪ್ಪ ಆಗ್ತಾ ಇದೀರಾ

ಸೋಮುಗೆ ನಗಬೇಕೋ ಅಳಬೇಕೋ ಗೊತ್ತಾಗಲಿಲ್ಲ. ಈ ಸ್ಥಿತೀಲಿರೋ ಅವಳು ತಾಯಿ ಆದ್ರೆ ಇನ್ನು ಹುಟ್ಟೋ ಮಗು ಗತಿ ಏನಪ್ಪ ಅಂತ ಯೋಚನೆಯಾಯಿತು.

ಡಾಕ್ಟರು ಆ ಕಡೆ ಹೋದ ಮೇಲೆ ಸೋಮು ನಿಧಾನವಾಗಿ ಸೋಮಿ ಹತ್ತಿರ ಹೋದ. ಅವಳ ತಲೆಯನ್ನು ಸವರಿ ಸೋಮಿ ಸೋಮಿ ಅಂದ. ತುಂಬಾ ಅಳು ಬಂತು. ಅವಳ ತಲೆಯನ್ನು ಎದೆಗೆ ಒರಗಿಸಿಕೊಂಡು ಸೋಮಿ ನಾನು ನಿನಗೆ ಹೊಡೀಬಾರದಾಗಿತ್ತು ಕಣೆ, ಹೊಡಿಬಾರದಾಗಿತ್ತು ಕಣೆ, ಸಾರಿ ಕಣೆ, ಇನ್ನು ಮೇಲೆ ನಾನು ನಿನ್ನ ಮೇಲೆ ಯಾವತ್ತೂ ಕೈ ಮಾಡಲ್ಲ ಕಣೆ ಅಂತ ಜೋರಾಗಿ ಕಿರುಚುತ್ತಾ ಅತ್ತ.

ಅವನ ಬೆನ್ನ ಮೇಲೆ ಕೈಯೊಂದು ಸಮಾಧಾನ ಮಾಡುವ ಹಾಗೆ ಹರಿದಾಡಿತು. ಒಂದು ಸಣ್ಣ ಏಟೂ ಬಿತ್ತು. ಯಾಕ್ರೀ ಏನಾಯ್ತು. ಅನ್ನೋ ಸೋಮಿ ಧ್ವನಿ ಅವನನ್ನು ಎಚ್ಚರಿಸಿತು.

ಕಣ್ಣು ಬಿಟ್ಟ. ಅರೆ ಸೋಮಿ ಎದುರಿಗೆ ನಿಂತಿದಾಳೆ. ಅವಳಿಗೆ ಏನೂ ಆಗಿಲ್ಲ. ಅಂದ್ರೆ ನಾನು ಇದುವರೆಗೂ ಕಂಡಿದ್ದು ಕನಸು. ಹೌದಾ ಅಂತ ತನ್ನನ್ನ ತಾನೇ ಚಿವುಟಿಕೊಂಡ

ಸೋಮಿ ಅವನ ಭುಜದ ಮೇಲೆ ಹೊಡೆದು ಏನ್ರೀ ಅದು ಹಗಲುಗನಸಾ ಅದೇನು ಗೊಣಗ್ತಾ ಇದ್ರೀ ಅಂತ ಸೋಮಿ ಕೇಳಿದಾಗ ಸೋಮು ತನ್ನ ಕನಸಿನ ವಿವರ ತಿಳಿಸಿದ

ಸೋಮಿ ಅವನನ್ನು ಅಣಕಿಸಿ ತುಸು ಗಟ್ಟಿಯಾದ ಧ್ವನಿಯಿಂದ ಅದು ಕನಸಾಗೇ ಇರಬೇಕು ಅಷ್ಟೆ. ನೀವು ನನ್ನ ಮೇಲೆ ಕೈ ಮಾಡೋದು ಈ ಜನ್ಮದಲ್ಲಿ ಸಾಧ್ಯವಿಲ್ಲ ತಿಳ್ಕೊಳಿ ಅಂದಳು

ಆದ್ರೆ ಇನ್ನೊಂದು ಸಾಧ್ಯವಾಗಬಹುದಲ್ವ ಅಂತ ಕೇಳಿದ

ಯಾವುದದು?

ಅದೇ ನೀನು ಗರ್ಭಿಣಿಯಾಗಿದ್ದು

ಸೋಮಿ ಸೋಮು ಕಡೆ ನೋಡಿ ನಕ್ಕಳು. ಅವನ ಕೆನ್ನೆ ಚಿವುಟಿದಳು.

ಅದು ಆದ್ರೆ ಆಗಬಹುದು

ಅಂದು ವೈಯಾರ ಆಡಿಕೊಂಡು ಅಡಿಗೆ ಮನೆಗೆ ಹೋದಳು

ಇದ್ಯಾಕೋ ಇವತ್ತು ಬೊಂಬಾಟಾಗಿ ಕಾಣ್ತಾ ಇದಾಳಲ್ಲಪ್ಪ ಅಂತ ಸೋಮು ತಾನೂ ಅಡಿಗೆ ಮನೆಗೆ ಓಡಿದ.

Mailing Date
5th of every month
Mailed at Rajajinagar PO

CPMG/KA/BGW-544/2009-2011
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR